ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಸಮರ್ಪಿತ ಮಾರ್ಕ್ಸ್‌ವಾದಿ ನಾಯಕ
ನಿರುಪಮ್ ಸೇನ್
ಲಾಲ್ ಸಲಾಂ

ಸಂಪುಟ 13 | ಸಂಚಿಕೆ 1 | ಡಿಸೆಂಬರ್ 31, 2018–ಜನವರಿ 6, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ

ಅಖಿಲ ಭಾರತ ಸಾರ್ವತ್ರಿಕ ಮುಷ್ಕರ

8-9 ಜನವರಿ 2019


2019 ರ ಮಹಾ ಸಮರಕ್ಕೆ ಸನ್ನದ್ಧರಾಗೋಣ

ಡಿ.27-ಜ.7: ಸಿಪಿಐ(ಎಂ) ಪ್ರಚಾರಾಂದೋಲನ



ಕಿಲ್ವೆನ್ಮಣಿ ದಲಿತ ನರಮೇಧ-50

ಬಿಗ್ ಬ್ರದರ್ ಮತ್ತು ಥಾಟ್ ಕ್ರೈಂ





ಬರ ಮತ್ತು ಗರ ಬಡಿದ ಸರಕಾರ

ಸಮರ್ಪಿತ ಮಾರ್ಕ್ಸ್‌ವಾದಿ ಮುಖಂಡ ನಿರುಪಮ್ ಸೇನ್ ನಿಧನ



ಹಿಂದೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾಗಿದ್ದ ಕಾಮ್ರೇಡ್ ನಿರುಪಮ್ ಸೇನ್ ಡಿಸೆಂಬರ್ 24ರಂದು ನಿಧನರಾಗಿದ್ದಾರೆ. 72 ವರ್ಷ ವಯಸ್ಸಾಗಿದ್ದ ಅವರು ದೀರ್ಘಕಾಲದಿಂದ ಅಸ್ವಸ್ಥರಾಗಿದ್ದರು. ಅವರು ಪಕ್ಷದ ಒಬ್ಬ ಶ್ರೇಷ್ಠ ಮುಖಂಡರಾಗಿದ್ದರು ಎಂದು ಪೊಲಿಟ್‌ಬ್ಯುರೊ ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಹೇಳಿದೆ.

ಒಬ್ಬ ವಿದ್ಯಾರ್ಥಿ ಕಾರ್ಯಕರ್ತನಾಗಿ ತನ್ನ ರಾಜಕೀಯ ಜೀವನ ಆರಂಭಿಸಿದ ನಿರುಪಮ್ ಸೇನ್, ನಂತರ ಎಸ್.ಎಫ್.ಐ. ಎಂದು ಹೆಸರು ಪಡೆದ ಬಂಗಾಲ ಪ್ರಾಂತ್ಯ ವಿದ್ಯಾರ್ಥಿ ಫೆಡರೇಶನ್‌ನ ಒಬ್ಬ ಪ್ರಮುಖ ಮುಖಂಡರಾದರು. 1964ರಲ್ಲಿ ಅವರು ಪಕ್ಷವನ್ನು ಸೇರಿ, ಬರ್ದ್ವಾನ್ ಜಿಲ್ಲೆಯಲ್ಲಿ ರೈತಾಪಿಗಳು ಮತ್ತು ಕಾರ್ಮಿಕ ವರ್ಗದ ವಿವಿಧ ಹೋರಾಟಗಳಲ್ಲಿ ಸಕ್ರಿಯ ಪಾತ್ರ ವಹಿಸಿದರು. ಎಪ್ಪತ್ತರ ದಶಕದ ಆರಂಭದಲ್ಲಿ ಅವರ ಮೇಲೆ ಸುಳ್ಳು ಕೇಸುಗಳನ್ನು ಹೇರಿದಾಗ ತಲೆ ಮರೆಸಿಕೊಂಡಿರಬೇಕಾಯಿತು.

1968ರಲ್ಲಿ ಸೇನ್ ಅವರು ಪಕ್ಷದ ಪೂರ್ಣಕಾಲದ ಕಾರ್ಯಕರ್ತರಾದರು. ಬರ್ದ್ವಾನ್ ಜಿಲ್ಲೆಯಲ್ಲಿ ಪಕ್ಷದ ವಿಸ್ತರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಅವರು 1989ರಿಂದ 1995ರ ವರೆಗೆ ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿದ್ದರು.

1985ರಲ್ಲಿ ನಿರುಪಮ್ ಸೇನ್ ಸಿಪಿಐ(ಎಂ)ನ ಪಶ್ಚಿಮ ಬಂಗಾಲ ಜಿಲ್ಲಾ ಸಮಿತಿಗೆ ಚುನಾಯಿತರಾದರು, 1995ರಲ್ಲಿ ಕಾರ್ಯದರ್ಶಿ ಮಂಡಳಿ ಸದಸ್ಯರಾದರು. 1998ರಲ್ಲಿ ಪಕ್ಷದ 16ನೇ ಮಹಾಧಿವೇಶನದಲ್ಲಿ ಅವರು ಕೇಂದ್ರ ಸಮಿತಿಗೆ ಚುನಾಯಿತರಾದರು. 2008ರಲ್ಲಿ ಪೊಲಿಟ್ ಬ್ಯುರೊದ ಒಬ್ಬ ಸದಸ್ಯರಾದರು. ಸ್ವಲ್ಪ ಕಾಲ ಅಸ್ವಸ್ಥರಾದ ನಂತರ ಅವರು 2015ರಿಂದ 2018ರ ವರೆಗೆ ಕೇಂದ್ರ ಸಮಿತಿಯ ಒಬ್ಬ ವಿಶೇಷ ಆಹ್ವಾನಿತರಾದರು.

ಕಾಮ್ರೇಡ್ ಸೇನ್ ಮೂರು ಬಾರಿ ಪಶ್ಚಿಮ ಬಂಗಾಲ ವಿಧಾನಸಭೆಗೆ ಚುನಾಯಿತರಾದರು. 2001ರಲ್ಲಿ ಅವರು ಎಡರಂಗ ಸರಕಾರದಲ್ಲಿ ಕೈಗಾರಿಕಾ ಮತ್ತು ವಾಣಿಜ್ಯ ಮಂತ್ರಿಯಾದರು. ಎರಡು ಅವಧಿಗೆ ಅವರು ಈ ಹುದ್ದೆಯಲ್ಲಿದ್ದರು. ಮಂತ್ರಿಯಾಗಿ ಅವರು ಪಶ್ಚಿಮ ಬಂಗಾಲದ ಕೈಗಾರಿಕಾ ಅಭಿವೃದ್ಧಿಯ ನಕಾಶೆ ಸಿದ್ಧಪಡಿಸುವಲ್ಲಿ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ, ಗ್ರಾಮೀಣ ಶಿಕ್ಷಣ, ಪ್ರಾಥಮಿಕ ಆರೋಗ್ಯ ಮೂಲರಚನೆಗಳು ಮತ್ತು ಸ್ವಸಹಾಯ ಗುಂಪುಗಳಿಗೆ ಸಂಬಂಧಪಟ್ಟಂತೆ ಧೋರಣೆಗಳನ್ನು ರೂಪಿಸುವಲ್ಲಿ ಒಂದು ನೇತೃತ್ವದ ಪಾತ್ರವನ್ನು ವಹಿಸಿದರು.

ನಿರುಪಮ್ ಸೇನ್ ಮಾರ್ಕ್ಸ್‌ವಾದದ ಒಬ್ಬ ಸ್ಫುಟವಾದ ಪ್ರತಿಪಾದಕರಾಗಿದ್ದು, ಪಕ್ಷದ ಪತ್ರಿಕೆಗಳಲ್ಲಿ ಹಲವಾರು ಲೇಖನಗಳನ್ನು ಬರೆದಿದ್ದಾರೆ. ಅವರು ಒಬ್ಬ ಜನಪ್ರಿಯ ವಾಗ್ಮಿಯೂ ಆಗಿದ್ದರು, ವಿಭಿನ್ನ ವಿಷಯಗಳ ಮೇಲೆ ಪಕ್ಷದ ಅಭಿಪ್ರಾಯಗಳನ್ನು



ಅವರು ಪರಿಣಾಮಕಾರಿಯಾಗಿ ಮುಂದಿಡುತ್ತಿದ್ದರು. 2013ರಲ್ಲಿ ಅವರು ಮೆದುಳಿನ ರಕ್ತಸ್ರಾವಕ್ಕೆ ಒಳಗಾಗಿ, ಭಾಗಶಃ ಪಾರ್ಶ್ವವಾಯುವಿಗೆ ತುತ್ತಾದರು. ಈ ವಿಕಲತೆಯ ನಡುವೆಯೂ ಅವರು ಸಭೆಗಳಲ್ಲಿ ಭಾಗವಹಿಸುವುದನ್ನು ಮುಂದುವರೆಸಿದರು ಮತ್ತು ಸಂಗಾತಿಗಳೊಡನೆ ಸಂಪರ್ಕವಿಟ್ಟುಕೊಂಡಿದ್ದರು.

ನಿರುಪಮ್ ಸೇನ್ ಒಬ್ಬ ಸಮರ್ಪಿತ ಮಾರ್ಕ್ಸ್‌ವಾದಿಯಾಗಿದ್ದರು, ತನ್ನ ಸೌಮ್ಯ ಮತ್ತು ನಮ್ರ ವರ್ತನೆಗಳಿಂದಾಗಿ ಎಲ್ಲರ ಪ್ರೀತಿಪಾತ್ರರಾಗಿದ್ದರು ಎಂದು ನೆನಪಿಸಿಕೊಂಡಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ, ಅವರ ನಿಧನದಿಂದಾಗಿ ಪಕ್ಷ ಮತ್ತು ಎಡಪಂಥೀಯ ಆಂದೋಲನ ಒಬ್ಬ ಅಮೂಲ್ಯ ಮುಖಂಡರನ್ನು ಕಳೆದುಕೊಂಡಿದೆ ಎಂದು ಶೋಕ ವ್ಯಕ್ತಪಡಿಸಿದೆ. ನಿರುಪಮ್ ಸೇನ್ ಅವರ ನೆನಪಿಗೆ ಗೌರವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತ, ಪೊಲಿಟ್ ಬ್ಯುರೊ ಅವರ ಪತ್ನಿ ಚಂದ್ರಬಾಲಿ, ಮಗಳು, ಮಗ ಮತ್ತು ಅವರ ಕುಟುಂಬದ ಇತರ ಸದಸ್ಯರಿಗೆ ಹಾರ್ದಿಕ ಸಂತಾಪಗಳನ್ನು ವ್ಯಕ್ತಗೊಳಿಸಿದೆ.

ನಿರುಪಮ್ ಸೇನ್ ಅವರ ಪಾರ್ಥಿವ ಶರೀರವನ್ನು ಡಿಸೆಂಬರ್ 26ರಂದು ಬರ್ದ್ವಾನ್ ಗೆ ಒಯ್ಯಲಾಯಿತು. ಅಲ್ಲಿ ಸಾವಿರಾರು ಮಂದಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿ ಅಂತಿಮ ವಿದಾಯದಲ್ಲಿ ಪಾಲ್ಗೊಂಡರು.

ಅಂಗವಿಕಲ ಯುವಕನನ್ನು ಥಳಿಸಿದ ಬಿಜೆಪಿ ಮುಖಂಡ–ಎನ್‌ಪಿಆರ್‌ಡಿ ಖಂಡನೆ

‘ದಿವ್ಯಾಂಗ’ರು ಎಂಬ ಕೃಪಾಭಾವದ ಹಿಂದಿರುವ ವಾಸ್ತವ ಮನೋಭಾವ ಬಯಲಿಗೆ’

ಉತ್ತರ ಪ್ರದೇಶದ ಬಿಜೆಪಿ ಮುಖಂಡನೊಬ್ಬ ಅಂಗವಿಕಲ ಯುವಕನನ್ನು ಥಳಿಸಿರುವುದನ್ನು ರಾಷ್ಟ್ರೀಯ ಅಂಗವಿಕಲರ ಹಕ್ಕುಗಳ ವೇದಿಕೆ(ಎನ್‌ಪಿಆರ್‌ಡಿ) ಬಲವಾಗಿ ಖಂಡಿಸಿದೆ.

ಕೇವಲ ಬಿಜೆಪಿಯ ಸಿದ್ಧಾಂತಗಳನ್ನು ತಾನು ಒಪ್ಪುವುದಿಲ್ಲ ಎಂದು ಈ ಯುವಕ ಬಹಿರಂಗವಾಗಿಯೇ ಹೇಳಿದ್ದಕ್ಕಾಗಿಯೇ ಆತನನ್ನು ಒಬ್ಬ ಮುಖಂಡನೇ ಬಹಿರಂಗವಾಗಿ ಥಳಿಸಿರುವುದು ನಾವು ಎಂತಹ ಅಸಹಿಷ್ಣುತೆ ಮತ್ತು ದ್ವೇಷದ ವಾತಾವರಣದಲ್ಲಿ ಬದುಕುತ್ತಿದ್ದೇವೆ ಎಂಬುದನ್ನು ತೋರಿಸುತ್ತದೆ, ಈ ಭಂಡ ವರ್ತನೆಯ ಮೂಲಕ ಈ ಮಂದಿ ತಮ್ಮ ಅಭಿಪ್ರಾಯಗಳನ್ನು ಒಪ್ಪದವರನ್ನು ಮತ್ತು ಆಣತಿಗಳನ್ನು ಮೀರುವವರನ್ನು ‘ಶಿಕ್ಷಿಸುತ್ತಾರೆ’ ಎಂಬುದನ್ನು ಪುಷ್ಕಳವಾಗಿಯೇ ಸ್ಪಷ್ಟಪಡಿಸಿದ್ದಾರೆ ಎಂದು ಎನ್‌ಪಿಆರ್‌ಡಿ ಹೇಳಿದೆ.

ತಮ್ಮ ಎಂದಿನ ಚಾಳಿಯಂತೆ, ಉತ್ತರಪ್ರದೇಶದ ಪೋಲಿಸರು ಥಳಿಸಿದವನ ಮೇಲೆ ಕ್ರಮ ಕೈಗೊಳ್ಳುವ ಬದಲು ಆ ಅಂಗವಿಕಲ ಯುವಕನನ್ನೇ ಬಂಧಿಸಿದರು. ಆದರೆ ಈ ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತಗೊಂಡ ಮೇಲೆಯೇ ಆ ಬಿಜೆಪಿ ಮುಖಂಡನ ಮೇಲೆ ಎಫ್‌ಐಆರ್ ದಾಖಲಿಸಲಾಯಿತು, ಆಗಲೂ ವಿಕಲತೆಯಿರುವ ವ್ಯಕ್ತಿಗಳ ಹಕ್ಕುಗಳ ಕಾಯ್ದೆ, 2016ರ ಅಡಿಯಲ್ಲಿ ಅದನ್ನು ದಾಖಲಿಸಲಿಲ್ಲ ಎಂದು ಎನ್‌ಪಿಆರ್‌ಡಿ ಬೇಸರ ವ್ಯಕ್ತಪಡಿಸಿದೆ.

ಒಂದೆಡೆಯಲ್ಲಿ ಮೋದಿ ಮತ್ತು ಬಿಜೆಪಿ ಅಂಗವಿಕಲತೆಯಿರುವ ಜನಗಳ ಬಗ್ಗೆ ‘ದಿವ್ಯಾಂಗ’ ಎಂಬ ಪದ ಸೃಷ್ಟಿಸಿ ಕೃಪೆದೋರುವ ಪ್ರದರ್ಶನ ನಡೆಸಿದ್ದರೆ, ಇನೊಂದೆಡೆಯಲ್ಲಿ, ಅವರು ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಮತ್ತು ತಮ್ಮ ದನಿ ಎತ್ತುವ ಧೈರ್ಯ ತೋರಿಸಿದ ‘ದಿವ್ಯಾಂಗ’ರನ್ನು ಅವರು ಬಯ್ಯುತ್ತಾರೆ, ದೈಹಿಕ ಹಲ್ಲೆಗೂ ಹೇಸುವದಿಲ್ಲ, ಇಂತಹ ಘಟನೆಗಳು



ಅವರ ಮನೋಭಾವವನ್ನು ವ್ಯಕ್ತ ಪಡಿಸುತ್ತದೆ ಎನ್ನುತ್ತ ಎನ್‌ಪಿಆರ್‌ಡಿ, ಕಳೆದ ವರ್ಷ ಒಬ್ಬ ಬಿಜೆಪಿ ಮಂತ್ರಿ, ಪಚೌರಿ ಎಂಬಾತ ಲಕ್ನೌನಲ್ಲಿ ಒಬ್ಬ ಅಂಗವಿಕಲ ಸಫಾಯಿ ಕರ್ಮಚಾರಿಯ ಸಾಮರ್ಥ್ಯವನ್ನು ಹೀಗಳೆದ ಘಟನೆಯನ್ನು ನೆನಪಿಸಿದೆ.

ಜನವರಿ 8–9: ಗ್ರಾಮೀಣ ಭಾರತ ಬಂದ್–ಎಐಕೆಎಸ್ ಕರೆ

“ದೇಶಾದ್ಯಂತ ನಗರಪ್ರದೇಶಗಳಲ್ಲಿ ಕಾರ್ಮಿಕರ ಸಾರ್ವತ್ರಿಕ ಮುಷ್ಕರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ರೈತರ ಗ್ರಾಮೀಣ ಭಾರತ ಬಂದ್”

ಸಾಲಮನ್ನಾ ಪ್ರಶ್ನೆ ಕುರಿತಂತೆ ಪ್ರಧಾನ ಮಂತ್ರಿಗಳ ಅಬದ್ಧತೆಯ ನಿಲುವನ್ನು ಪ್ರತಿಭಟಿಸಿ ‘ಗ್ರಾಮೀಣ ಭಾರತ ಬಂದ್’ ನಡೆಸಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ ಕರೆ ಕೊಟ್ಟಿದೆ. ಅದರ ಕೇಂದ್ರೀಯ ಕಿಸಾನ್ ಮಂಡಳಿ (ಸಿಕೆಸಿ) ಸಭೆಯ ನಂತರ ಈ ಕರೆ ನೀಡಲಾಗಿದೆ.

ರೈತರ ಸಾಲಮನ್ನಾ ಮತ್ತು ರೈತರು ಕಳೆದ ನಾಲ್ಕೂವರೆ ವರ್ಷಗಳ ಬಿಜೆಪಿ ಆಳ್ವಿಕೆಯಲ್ಲಿ ಅನುಭವಿಸುತ್ತಿರುವ ಗ್ರಾಮೀಣ ಸಂಕಟದ ಪ್ರಶ್ನೆಯ ಬಗ್ಗೆ ಪ್ರಧಾನ ಮಂತ್ರಿಗಳು ಏನನ್ನೂ ಹೇಳದಿರುವ ನಿಲುವನ್ನು ತಳೆದಿದ್ದಾರೆ. ಇದನ್ನು ಪ್ರತಿಭಟಿಸಿ ಈ ಬಂದ್ ಸಂಘಟಿಸಲಾಗುತ್ತಿದೆ. ಅಲ್ಲದೆ ಭೂಹೀನತೆ ಗ್ರಾಮೀಣ ಭಾರತದ ಇನ್ನೊಂದು ಪ್ರಮುಖ ಸಮಸ್ಯೆ. ಮೋದಿ ಸರಕಾರದ ರೈತ–ವಿರೋಧಿ ಧೋರಣೆಗಳ ಬಹುಪಾಲು ಹೊರೆ ಆದಿವಾಸಿಗಳು ಮತ್ತು ದಲಿತರ ಮೇಲೆ ಬಿದ್ದಿದೆ ಎಂದು ಈ ಬಗ್ಗೆ ಮಾತನಾಡುತ್ತ ಎಐಕೆಎಸ್ ಅಧ್ಯಕ್ಷ ಅಶೋಕ ಧವಳೆ ಹೇಳಿದ್ದಾರೆ. ಬಡ ರೈತರಿಗೆ ಬೇಸಾಯಕ್ಕೆ ಭೂಮಿ ಕೇಳುತ್ತಿರುವ ಭೂಮಿ ಅಧಿಕಾರ್ ಸಭಾ ಗ್ರಾಮೀಣ ಬಂದ್‌ನ ಕರೆಯನ್ನು ಬೆಂಬಲಿಸಿದೆ ಎಂದು ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಹೇಳಿದ್ದಾರೆ.

ರೈತರ ಸಮಸ್ಯೆಗಳನ್ನು ದೇಶದ ಗಮನಕ್ಕೆ ತರುವುದು ಎಐಕೆಎಸ್ ಗೆ ಸಾಧ್ಯವಾಗಿದೆ. ಈಗ ಎಲ್ಲ ರಾಜಕೀಯ ಪಕ್ಷಗಳು ಈ ಸಮಸ್ಯೆಯ ಪರಿಹಾರ ಎಷ್ಟು ಮಹತ್ವದ್ದು ಎಂಬುದನ್ನು ಅರಿಯಲಾರಂಭಿಸಿದ್ದಾರೆ ಎಂದು ಅವರು ಹೇಳಿದ್ದಾರೆ.

ಈ ಜನವರಿ 8–9 ರಂದು ದೇಶದ ಕಾರ್ಮಿಕ ಸಂಘಟನೆಗಳು ಮೋದಿ ಸರಕಾರದ ಕಾರ್ಪೊರೇಟ್–ಪರ ಧೋರಣೆಯ ವಿರುದ್ಧ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದ್ದಾರೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

“ಜನವರಿ 8 ಮತ್ತು 9 ರಂದು ದೇಶಾದ್ಯಂತ ನಗರಪ್ರದೇಶಗಳಲ್ಲಿ ಕಾರ್ಮಿಕರು ಸಾರ್ವತ್ರಿಕ ಮುಷ್ಕರ ನಡೆಸುತ್ತಾರೆ, ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ರೈತರು ಗ್ರಾಮೀಣ ಭಾರತ ಬಂದ್ ನಡೆಸುತ್ತಾರೆ” ಎಂದು ಹನ್ನನ್ ಮೊಲ್ಲ ಹೇಳಿದ್ದಾರೆ.

“ಕಲಾವಿದರು ಒಂದಾಗಿದ್ದಾರೆ”: ‘ಪ್ರಜಾಪ್ರಭುತ್ವಕ್ಕಾಗಿ ಮತ್ತು ದ್ವೇಷದ ವಿರುದ್ಧ ಘೋಷಣೆ’ಗೆ 450ಕ್ಕೂ ಹೆಚ್ಚು ಕಲಾವಿದರ ಸಹಿ, ಫೆ.16–17ರಂದು ರಾಷ್ಟ್ರೀಯ ಸಮಾವೇಶ

ದೇಶದ ಹಲವು ಪ್ರಸಿದ್ಧ ಕಲಾವಿದರು ‘ಆರ್ಟಿಸ್ಟ್ಸ್ ಯುನೈಟ್”(ಕಲಾವಿದರು ಒಂದಾಗಿದ್ದಾರೆ) ಬ್ಯಾನರ್‌ನ ಅಡಿಯಲ್ಲಿ ಒಟ್ಟುಗೂಡಿ “ಪ್ರಜಾಪ್ರಭುತ್ವಕ್ಕಾಗಿ, ಮತ್ತು ದ್ವೇಷದ ವಿರುದ್ಧ” ಮಾತನಾಡುವ ಪರಂಪರೆಯನ್ನು ಗಟ್ಟಿಗೊಳಿಸುವ ಒಂದು ಘೋಷಣೆಗೆ ಸಹಿ ಹಾಕಿರುವ ಒಂದು ಒಂದು ಅಭೂತಪೂರ್ವ ಘಟನೆ ನಡೆದಿದೆ. ಇಪ್ಪತ್ತಕ್ಕೂ ಹೆಚ್ಚು ಸ್ಥಳಗಳಲ್ಲಿ 450ಕ್ಕೂ ಹೆಚ್ಚು ಕಲಾವಿದರು ಒಟ್ಟು ಸೇರಿ ಸಹಿ ಹಾಕಿರುವ ಈ ಘೋಷಣೆ ಸಂಸ್ಕೃತಿಯ ಮೇಲೆ ಈಗ ನಡೆಯುತ್ತಿರುವ ಹಲ್ಲೆಗಳು ಪ್ರಜಾಪ್ರಭುತ್ವದ ಮೇಲಿನ ಹಲ್ಲೆಗಳೇ ಆಗಿವೆ ಎಂದು ಎಚ್ಚರಿಸುತ್ತ “ಪ್ರಜಾಪ್ರಭುತ್ವ ಎಂಬದು ಶತ್ರುಗಳನ್ನು ಗುರುತಿಸುವ ಮತು ಭಾಷೆ, ನಡತೆ ಮತ್ತು ಸಂಸ್ಕೃತಿ ಒಂದೇ ರೀತಿಯದಾಗಿರಬೇಕು ಎನ್ನುವ ಬಹುಸಂಖ್ಯಾತವಾದೀ ಯೋಜನೆಯೇನೂ ಅಲ್ಲ, ಪ್ರಜಾಪ್ರಭುತ್ವ ಎಂಬುದು ಶಾಂತಿ, ಸಹಜೀವನ, ಘನತೆ ಮತ್ತು ಸಮಾನತೆಯ ಒಂದು ಸಾಮೂಹಿಕ ಆಚರಣೆ” ಎಂದಿದೆ.



ಫೆಬ್ರುವರಿ 16 ಮತ್ತು 17 ರಂದು ದಿಲ್ಲಿಯಲ್ಲಿ ಒಂದು ರಾಷ್ಟ್ರೀಯ ಸಮಾವೇಶವನ್ನು ಈ ವೇದಿಕೆಯಲ್ಲಿ ನಡೆಸಲಾಗುವುದು ಮತ್ತು ಅದೇ ವಏಳೆಗೆ ಅಂದು ದೇಶಾದ್ಯಂತ ಇಂತಹ ಸಮಾರಂಭಗಳನ್ನು ನಡೆಸಲಾಗುವುದು, ಇದು ದ್ವೇಷ ರಾಜಕೀಯಕ್ಕೆ ಸಾಹಿತ್ಯ ಮತ್ತು ಕಲೆಯ ಪ್ರತಿರೋಧದ ಒಂದು ಸಾಮೂಹಿಕ ದನಿ ಎಂದು ಹೇಳಲಾಗಿದೆ.

ಸಂಪಾದಕೀಯ

ಬರ ಮತ್ತು ಗರ ಬಡಿದ ಸರಕಾರ

ರಾಜ್ಯದಲ್ಲಿ ಮುಂಗಾರಿನ ಮಳೆ ಕೊರತೆ ಗಮನಿಸಿ ಆರಂಭದಲ್ಲಿ 86 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿತ್ತು. ಮತ್ತೆ 16 ತಾಲ್ಲೂಕುಗಳನ್ನು ಸೇರ್ಪಡೆ ಮಾಡಲಾಗಿತ್ತು. ಇದೀಗ, ಹಿಂಗಾರಿನ ಮಳೆ ಅಭಾವದ ಆಧಾರದಲ್ಲಿ ಒಟ್ಟು 156 ತಾಲ್ಲೂಕುಗಳನ್ನು ಬರಪೀಡಿತ ಎಂದು ರಾಜ್ಯ ಸರ್ಕಾರ ಘೋಷಿಸಿದೆ. ಇದರಲ್ಲಿ 95 ತಾಲ್ಲೂಕುಗಳು ತೀವ್ರ ಬರಪೀಡಿತವಾಗಿದ್ದರೆ, 61 ತಾಲ್ಲೂಕುಗಳು ಸಾಧಾರಣ ಬರಪೀಡಿತವಾಗಿವೆ. ಜುಲೈ ತಿಂಗಳಲ್ಲಿ ಪ್ರವಾಹದಿಂದ ತತ್ತರಿಸಿದ್ದ ಕರಾವಳಿ ಹಾಗೂ ಮಲೆನಾಡಿನ ಎಂಟು ಜಿಲ್ಲೆಗಳ ತಾಲ್ಲೂಕುಗಳ ಸಹ ಬರ ಪಟ್ಟಿಗೆ ಸೇರ್ಪಡೆಯಾಗಿವೆ. ಪ್ರವಾಹ, ಭೂಕುಸಿತ ಹಾಗೂ ಮುಂಗಾರು ಹಂಗಾಮಿನ ಬರ ಪರಿಸ್ಥಿತಿಯಿಂದಾಗಿ 20 ಸಾವಿರ ಕೋಟಿ ರೂ. ನಷ್ಟ ಉಂಟಾಗಿದೆ ಎಂದು ಹೇಳಲಾಗಿದೆ. ಹಿಂಗಾರಿನಲ್ಲಿ ಮಳೆ ಪ್ರಮಾಣ ಕೊರತೆ ಶೇ 49ರಷ್ಟಿದೆ. ಅದರಲ್ಲೂ ರಾಜ್ಯದಲ್ಲಿ ಬೆಳೆಯಲಾಗುವ ಒಟ್ಟು ಹಿಂಗಾರು ಬೆಳೆಗಳ ಪೈಕಿ ಶೇ.90 ರಷ್ಟು ಬಿತ್ತನೆಯಾಗುವ ಉತ್ತರ ಒಳನಾಡಿನಲ್ಲಿ ಶೇ 66ರಷ್ಟು ಮಳೆ ಅಭಾವ ಉಂಟಾಗಿದೆ. ಇಂತಹ ಬರ ಪರಿಸ್ಥಿತಿ ಇರುವಾಗ ಸಮರೋಪಾದಿಯಲ್ಲಿ ಬರ ಪರಿಹಾರ ಕೈಗೊಳ್ಳಬೇಕಾದ ಸರಕಾರಕ್ಕೆ ಗರ ಬಡಿದಿದೆ.

ಮೈತ್ರಿ ಸರಕಾರದ ಪಕ್ಷಗಳ ನಡುವೆ ಮತ್ತು ಪಕ್ಷಗಳೊಳಗೆ ಮಂತ್ರಿಗಿರಿಗೆ ಕಿತ್ತಾಟದಿಂದ ತಿಂಗಳುಗಳಾದರೂ ಸಚಿವ ಸಂಪುಟದ ರಚನೆ ಪೂರ್ಣವಾಗಿಲ್ಲ. ಮೊದಲ ಸಂಪುಟ ರಚನೆಯಲ್ಲಿ ಜೆಡಿ(ಎಸ್) ಪ್ರಮುಖ ಖಾತೆಗಳನ್ನು ವಶಪಡಿಸಿಕೊಂಡಿದೆ. ಸಿದ್ಧರಾಮಯ್ಯ ಬಣವನ್ನು ಮೂಲೆಗುಂಪು ಮಾಡಲಾಯಿತು ಎಂದು ಕಾಂಗ್ರೆಸಿನೊಳಗೆ ಅತೃಪ್ತಿ ಹೊಗೆಯಾಡುತ್ತಾ ಸರಕಾರದ ಭದ್ರತೆಗೂ ಅಸ್ತಿತ್ವಕ್ಕೂ ಸತತ ಅಪಾಯವೊಡ್ಡಿತ್ತು. ಉತ್ತರ ಕರ್ನಾಟಕಕ್ಕೆ ಮತ್ತು ಇನ್ನೂ ಹಲವು ಜಿಲ್ಲೆಗಳಿಗೆ ಪ್ರಾತಿನಿಧ್ಯವೇ ಇಲ್ಲ ಎಂದು, ದಕ್ಷಿಣ ಕರ್ನಾಟಕ ಬಿಟ್ಟು ಇತರ ಪ್ರದೇಶಗಳ ಎರಡೂ ಪಕ್ಷಗಳ ಶಾಸಕರಲ್ಲಿ ತೀವ್ರ ಅತೃಪ್ತಿ ಹರಡಿತ್ತು. ನಿಗಮಗಳ ಮಂಡಳಿಗಳ ಅಧ್ಯಕ್ಷ ನೇಮಕಗಳನ್ನೂ ಪೂರ್ಣಗೊಳಿಸದ್ದೂ ಸಹ ಶಾಸಕರಲ್ಲಿ ತೀವ್ರ ಅತೃಪ್ತಿಗೆ ಕಾರಣವಾಗಿತ್ತು. ಸಂಪುಟ ರಚನೆಯ ಕೆಲಸದ ಬಗ್ಗೆ ದೃಢ ನಿರ್ಧಾರ ತೆಗೆದುಕೊಳ್ಳುವ ಬದಲು ಎರಡೂ ಪಕ್ಷಗಳ ನಾಯಕತ್ವ ಒಂದಲ್ಲ ಒಂದು ಸಬೂಬು ಹೇಳಿ ಮುಂದಕ್ಕೆ ಹಾಕಿಕೊಂಡು ಬಂದಿತ್ತು. ಇದರಿಂದಾಗಿ ಸರಕಾರಕ್ಕೆ ಗರ ಬಡಿದಂತಿತ್ತು.

ಕೊನೆಗೂ ಸಂಪುಟ ರಚನೆ ಪೂರ್ಣಗೊಳಿಸುವತ್ತ ಹೆಜ್ಜೆ ಇಟ್ಟಿರುವುದು ಒಳ್ಳೆಯದು. ಇಬ್ಬರು ಸಚಿವರನ್ನು ಕೈ ಬಿಡಲಾಗಿದೆ. 8 ಹೊಸ ಸಚಿವರನ್ನು ಸೇರಿಸಿಕೊಳ್ಳಲಾಗಿದೆ. 8 ಸಚಿವರಲ್ಲಿ 7 ಜನ ಉತ್ತರ ಕರ್ನಾಟಕದವರು. ಜಾತಿವಾರು ಪ್ರದೇಶವಾರು ಪ್ರಾತಿನಿಧ್ಯ ಸರಿಪಡಿಸಲು ಪ್ರಯತ್ನಿಸಲಾಗಿದೆ. ಇತರ ಸಚಿವ ಆಕಾಂಕ್ಷಿಗಳಿಗೆ ನಿಗಮ ಮಂಡಳಿಗಳ ಅಧ್ಯಕ್ಷಗಿರಿ ಮತ್ತು ಪಾರ್ಲಿಮೆಂಟರಿ ಕಾರ್ಯದರ್ಶಿ ಸ್ಥಾನಗಳನ್ನು ನೀಡಲಾಗಿದೆ. ಆದರೆ ಈಗಲೂ ಸಂಪಟ ರಚನೆ ಪೂರ್ಣಗೊಂಡಿಲ್ಲ. ಜೆಡಿ–ಎಸ್ ತನ್ನ ಪಾಲಿನ ಎರಡು ಸ್ಥಾನಗಳನ್ನು ಲೋಕಸಭಾ ಚುನಾವಣೆಯ ನಂತರ ಭರ್ತಿ ಮಾಡುವುದಾಗಿ ಹೇಳಿದೆ. ಸಂಪುಟದಿಂದ ಕೈಬಿಟ್ಟಿರುವುದರಿಂದ ರಮೇಶ ಜಾರಕಿಹೊಳಿ ರಾಜೀನಾಮೆ ಕೊಡುತ್ತೇನೆ ಎಂದು ಬೆದರಿಸಿದ್ದಾರೆ. ಅವರ ಜತೆ ಇನ್ನಷ್ಟು ಶಾಸಕರು ಕೈಜೋಡಿಸಬಹುದೆಂಬ ಆತಂಕವೂ ಇದೆ. ಸಚಿವ ಸ್ಥಾನ ಸಿಗದಿರುವ ರಾಮಲಿಂಗಾರೆಡ್ಡಿ ತೀವ್ರ ಅತೃಪ್ತಿ ವ್ಯಕ್ತಪಡಿಸಿದ್ದಾರೆ. ಕೆಲವರು ನಿಗಮ ಮಂಡಳಿಗಳ ಅಧ್ಯಕ್ಷಗಿರಿ ಮತ್ತು ಪಾರ್ಲಿಮೆಂಟರಿ ಕಾರ್ಯದರ್ಶಿ ಸ್ಥಾನಗಳನ್ನು ತಿರಸ್ಕರಿಸಿದ್ದಾರೆ. ಹೊಸ ಸಚಿವರ ಪ್ರತಿಜ್ಞಾ ಸ್ವಿಕಾರದ ಹಲವು ದಿನಗಳ ನಂತರ ಖಾತೆಗಳ ಹಂಚಿಕೆ ಆಗಿದೆ. ಈ ಕಸರತ್ತು ಪೂರ್ಣಗೊಂಡ ನಂತರ ಕಾಂಗ್ರೆಸಿನೊಳಗಿನ ಆಂತರಿಕ ಕಲಹವಾಗಲಿ ಸರಕಾರದ ಅಭದ್ರತೆಯಾಗಲಿ ಪೂರ್ಣವಾಗಿ ಪರಿಹಾರವಾದಂತಿಲ್ಲ. ಪರಮೇಶ್ವರ್ ಮತ್ತು ಡಿಕೆ ಶಿವಕುಮಾರ್ ಪ್ರಮುಖ ಖಾತೆಗಳನ್ನು ಕಳೆದುಕೊಂಡಿದ್ದರಿಂದ ಅತೃಪ್ತರಾಗಿದ್ದಾರೆ. ಇತರ ನಾಯಕರೂ ಸಂಪುಟ ವಿಸ್ತಾರದಲ್ಲಿ ಸಿದ್ಧರಾಮಯ್ಯ ಕೈಮೇಲಾಗಿದೆ ಎಂದು ಗೊಣಗುತ್ತಿದ್ದಾರೆ ಎನ್ನಲಾಗಿದೆ. ಖರ್ಗೆಯಂತಹ ಹಿರಿಯ ನಾಯಕರೇ ಸಾರ್ವಜನಿಕವಾಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸರಕಾರದ ಭದ್ರತೆಗೆ ತೀವ್ರ ಸವಾಲು ಕಾಣದಿದ್ದರೂ ರಮೇಶ್ ಜಾರಕಿಹೊಳಿಯ ನಿಗೂಢ ನಡೆ ತೂಗುಗತ್ತಿಯಾಗಿದೆ. ಇದು ಸಾಲದೆಂಬಂತೆ, ಜೆಡಿ–ಎಸ್ ಸ್ಥಳೀಯ ಕಾರ್ಯಕರ್ತನೊಬ್ಬನ ಕೊಲೆಯ ಹಿನ್ನೆಲೆಯಲ್ಲಿ 'ಕೊಲೆಗಾರರನ್ನು ಶೂಟ್ ಮಾಡಬೇಕು' ಎಂಬ ಮುಖ್ಯಮಂತ್ರಿಯವರ ಅತ್ಯಂತ ಬೇಜವಾಬ್ದಾರ ಖಂಡನೀಯ ಹೇಳಿಕೆ ಸರಕಾರದ ಪ್ರತಿಷ್ಠೆಯನ್ನು ಇನ್ನಷ್ಟು ಕುಗ್ಗಿಸಿದೆ

ಈ ನಡುವೆ ಪ್ರಮುಖ ವಿರೋಧ ಪಕ್ಷವಾದ ಬಿಜೆಪಿ ಸಹ ಜವಾಬ್ದಾರ ವಿರೋಧ ಪಕ್ಷದ ಕೆಲಸ ನಿರ್ವಹಿಸದೆ ತನ್ನ ಎಡಬಿಡಂಗಿತನವನ್ನು ಮುಂದುವರೆಸಿದೆ. ಕಾಂಗ್ರೆಸ್ ಮತ್ತು ಮೈತ್ರಿ ಸರಕಾರದ ಆಂತರಿಕ ಬಿಕ್ಕಟ್ಟಲ್ಲಿ ಮೂಗು ತೂರಿಸಿ ಸರಕಾರ ಅಭದ್ರಗೊಳಿಸುವ ಪ್ರಯತ್ನ ಮುಂದುವರೆಸಿದೆ. ಕರ್ನಾಟಕದ ಉಪಚುನಾವಣೆಗಳು ಮತ್ತು ಮೂರು ಉತ್ತರ ಭಾರತದ ರಾಜ್ಯಗಳಲ್ಲಿ ಸೋಲಿನ ನಂತರ ಬಿಜೆಪಿಯಲ್ಲೂ ಆಂತರಿಕ ಸಮಸ್ಯೆ ಉಲ್ಬಣಿಸಿದೆ. ಆಕ್ರಾಮಕತೆ ಕುಂದಿದೆ. ಯೆಡಿಯೂರಪ್ಪ ಸರಕಾರ ತಾನಾಗಿ ಬಿದ್ದು ಹೋಗುತ್ತದೆ. 'ಆಪರೇಶನ್' ಮಾಡುವುದಿಲ್ಲ ಎಂದರೆ, ಉಮೇಶ್ ಕತ್ತಿ ಸರಕಾರ ಸದ್ಯದಲ್ಲೇ ಬೀಳಿಸುತ್ತೇವೆ ಎನ್ನುತ್ತಾರೆ. ಬರ ಪರಿಹಾರ, ಸಾಲಮನ್ನಾ, ಪ್ರಾದೇಶಿಕ ಅಸಮಾನತೆ, ಮುಂತಾದ ವಿಷಯಗಳ ಬಗ್ಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸರಕಾರದ ಮೇಲೆ ಒತ್ತಡ ಹಾಕುವಲ್ಲಿ ಬಿಜೆಪಿ ವಿಫಲವಾಗಿದೆ. ಬೆಳಗಾವಿ ಅಧಿವೇಶನದಲ್ಲಿ ವಿರೋಧ ಪಕ್ಷದ ನಾಯಕ ಹೆಚ್ಚಾಗಿ ಸುಮ್ಮನಿದ್ದು ಕೊನೆಗೆ ಚರ್ಚೆಗೆ ಉತ್ತರ ಕೊಡುವ ಸಮಯದಲ್ಲಿ ಗದ್ದಲ ಎಬ್ಬಿಸಿ ಮತ್ತೆ ಬಿಜೆಪಿಯ ರಾಜಕಾರಣದ ಪೊಳ್ಳುತನ ಬಯಲಾಗಿದೆ.

ಎಲ್ಲರೂ ಸಚಿವರಾಗಲು ಸಾಧ್ಯವಿಲ್ಲ. ಎಲ್ಲರ ಅಧಿಕಾರದ ಆಕಾಂಕ್ಷೆ ತೃಪ್ತಿಪಡಿಸುವುದು ಸಾಧ್ಯವಿಲ್ಲ ಎಂಬುದನ್ನು ಕಾಂಗ್ರೆಸ್ ನಾಯಕತ್ವ ತನ್ನ ಶಾಸಕರಿಗೆ ತಿಳಿಯಪಡಿಸಬೇಕಾಗಿದೆ. ಶಾಸಕರಲ್ಲಿ ಪ್ರಾಥಮಿಕ ಶಿಸ್ತನ್ನು ಅಗತ್ಯ ಬಿದ್ದಲ್ಲಿ ತಕ್ಕ ಶಿಸ್ತು ಕ್ರಮಗಳಿಂದ ತರಬೇಕಾಗಿದೆ. ಕೆಲವು ಶಾಸಕರ ಅಧಿಕಾರ ಲಾಲಸೆಯಿಂದ ಸರಕಾರದ ಭದ್ರತೆಗೆ ಭಂಗ ಬಂದರೆ ಜನ ಪಕ್ಷವನ್ನು ಕ್ಷಮಿಸರು. ಸರಕಾರ ತಾನು ಕೊಟ್ಟ ಭರವಸೆಗಳನ್ನು ಪೂರೈಸುವ ಮತ್ತು ಜನರ ಸಮಸ್ಯೆಗಳಿಗೆ ಸ್ಪಂದಿಸುವ ಉತ್ತಮ ಸರಕಾರ ಕೊಡದಿದ್ದರೂ ಜನ ಎರಡೂ ಆಳುವ ಪಕ್ಷಗಳನ್ನು ಕ್ಷಮಿಸರು. ಉತ್ತರ ಬಾರತದ ಮೂರು ರಾಜ್ಯಗಳಲ್ಲಿ ಕಾಂಗ್ರೆಸ್ ವಿಜಯ ಹುಸಿ ಆತ್ಮವಿಶ್ವಾಸಕ್ಕೆ ಎಡೆ ಮಾಡಿಕೊಡಬಾರದು. ಕೇಂದ್ರದಲ್ಲಿ ಬಿಜೆಪಿಯ ದುರಾಡಳಿತದ ವಿರುದ್ಧ ದಾಳಿಯೊಂದೇ ಅಥವಾ ಮೈತ್ರಿಯ ಅಂಕಗಣಿತ ಮಾತ್ರ 2019ರ ಲೋಕಸಭಾ ಚುನಾವಣೆ ಗೆಲ್ಲಿಸಲು ಸಾಕು ಎಂಬ ಭ್ರಮೆ ಬೇಡ. ಕರ್ನಾಟಕದಲ್ಲಿ ಮೈತ್ರಿ ಸರಕಾರದ ರಾಜಕೀಯ ಭದ್ರತೆ, ಜನರ ಸಮಸ್ಯೆಗಳಿಗೆ ಸ್ಪಂದನ, ಉತ್ತಮ ಆಡಳಿತ ಇಡೀ ದೇಶದಲ್ಲಿ ಬಿಜೆಪಿಯೇತರ ರಂಗದ ವಿಶ್ವಾಸಾರ್ಹತೆಗೆ ಮತದಾರರಿಗೆ ಮಾನದಂಡವಾಗಲಿದೆ ಎಂದು ನೆನಪಿನಲ್ಲಿಡಬೇಕು. ಇದನ್ನು ಈ ಪಕ್ಷಗಳಿಗೆ ನೆನಪಿಸಲು ಎಡ ಪ್ರಜಾಸತ್ತಾತ್ಮಕ ಶಕ್ತಿಗಳು ಜನರನ್ನು ಬಾಧಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟಗಳ ಮೂಲಕ ಒತ್ತಡ ಹಾಕಬೇಕಾಗಿದೆ.

ಡಿಸೆಂಬರ್ 27–ಜನವರಿ 7 ಸಿಪಿಐ(ಎಂ) ರಾಜಕೀಯ ಪ್ರಚಾರಾಂದೋಲನ

ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಗಳನ್ನು ಪ್ರತಿರೋಧಿಸಿ ಜನವರಿ 8–9 ರ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಿ

ಯು. ಬಸವರಾಜ್

ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಸಂಘ ಪರಿವಾರಗಳು ದೇಶದ ಜನತೆಗೆ ನೀಡಿದ ವಾಗ್ದಾನಗಳು ಎಲ್ಲರಿಗೆ ನೆನಪಿರಬಹುದು. ಬಿಜೆಪಿ ಕೇಂದ್ರದಲ್ಲಿ ಅಧಿಕಾರ ಹಿಡಿದು ಐದು ವರ್ಷಗಳನ್ನು ಪೂರೈಸುತ್ತಿದೆ. ಈ ಅವಧಿಯಲ್ಲಿ ಸರಿ ಸುಮಾರು ದೇಶದ ಅಭಿವೃಧಿ ಹೆಸರ್ಹೇಳಿ ಒಂದು ಕೋಟಿ–ಕೋಟಿ ರೂ ಗಳಿಗೂ ದೊಡ್ಡ ಮೊತ್ತದ ತೆರಿಗೆಯನ್ನು ಜನರಿಂದ ಸಂಗ್ರಹಿಸಿದೆ.

ಅಧಿಕಾರ ಪಡೆಯಲು ಮತ ನೀಡಿ ಉತ್ತಮ ಆಡಳಿತ ನಡೆಸಲು ಹೊಟ್ಟೆ ಕಟ್ಟಿ ತೆರಿಗೆ ನೀಡಿದ ಜನತೆ ಪಡೆದದ್ದೇನು? ಎಂದರೇ, ಶೂನ್ಯವಲ್ಲ! ಬದಲಿಗೆ, ದುಡಿಯುವ ಜನತೆಯ ಮೇಲೆ ಮತ್ತಷ್ಟು ಸಂಕಷ್ಟಗಳು ಮತ್ತು ಹೊರೆಗಳು ಮಾತ್ರವೇ ಆಗಿವೇ!

ನೂರು ದಿನಗಳಲ್ಲ, 1600 ದಿನಗಳು ಕಳೆದರೂ, ವಿದೇಶದ ಬ್ಯಾಂಕುಗಳಲ್ಲಿರುವ ಕಪ್ಪು ಹಣ ಹೊರ ಬರಲಿಲ್ಲ! ಯಾರ ಖಾತೆಗೂ ನಯಾ ಪೈಸೆ ಬೀಳಲಿಲ್ಲ! ಸರ್ಕಾರದ ಯೋಜನೆಗಳಲ್ಲಿ ದುಡಿಯುವ ಕೋಟ್ಯಾಂತರ ಕಾರ್ಮಿಕರು ತಮಗೆ ರೂ. 18,000 ಕನಿಷ್ಠ ವೇತನ ಮತ್ತು ಉದ್ಯೋಗ ಭದ್ರತೆಗಳು ಶುಭ ದಿನಗಳ ಭಾಗವಾಗಿ ದೊರೆಯುವವೆಂದು ಕೊಂಡವರಿಗೆ, ಈಗ ಉದ್ಯೋಗವೇ ಕಳಚಿ ಹೋಗುವ ಭೀತಿ ಎದುರಾಗಿದೆ! ಕೋಟ್ಯಾಂತರ ಗುತ್ತಿಗೆ ಕಾರ್ಮಿಕರಿಗೆ ಉದ್ಯೋಗ ಭದ್ರತೆ, ಖಾಯಂಮಾತಿ, ಕನಿಷ್ಠ ವೇತನಗಳು ಕನಸಾಗಿಯೇ ಉಳಿದಿವೆ. ಮಾತ್ರವಲ್ಲ ಹಾಲಿ ಇರುವ ಕಾನೂನಿನ ರಕ್ಷಣೆಯು ಉಳಿಯದಂತಾಗಿದೆ. ಗುತ್ತಿಗೆದಾರ ಮಾಲೀಕರಿಗೆ ಲೂಟಿ ಮಾಡಲು ಅನುಕೂಲ ಮಾಡಿದೆ! ಒಟ್ಟಾರೇ, ಯಾವುದೇ ಕಾರ್ಮಿಕರು ಕನಿಷ್ಠ ವೇತನ ರೂ. 18,000 ಪಡೆಯಲಾಗಲಿಲ್ಲ.

ಕಾರ್ಮಿಕರ ನಡುವೆ ಅವರ ಒಗ್ಗಟ್ಟಿನ ಸಾಮರ್ಥ್ಯವನ್ನು ಮುರಿಯಲು ಶಾಶ್ವತ, ಅರೆ ಕಾಲಿಕ, ಗುತ್ತಿಗೆ, ಅರೆ ಗುತ್ತಿಗೆ ಮುಂತಾಗಿ ಕೆಲಸಗಳನ್ನು ವಿಭಜಿಸಿ ಮಾಲೀಕರುಗಳ ಹಿತಗಳನ್ನು ರಕ್ಷಿಸಲಾಗುತಿದೆ. ಸಂಘಟನೆಯಾಗುವ ಮತ್ತು ಚೌಕಾಶಿ ಮಾಡುವ ಹಕ್ಕುಗಳನ್ನು ಮೊಟಕುಗೊಳಿಸಲಾಗುತ್ತಿದೆ. ಲಾಭದಾಯಕವಾಗಿ ನಡೆಯುವ ಸಾರ್ವಜನಿಕ ರಂಗದ ಕೈಗಾರಿಕೆಗಳನ್ನು ಬಲಪಡಿಸುವುದರ ಬದಲು ಕಳಚಿ ಹಾಕಲಾಗುತ್ತಿದೆ.

ಕೃಷಿ ಉತ್ಪನ್ನಗಳ ವೆಚ್ಚಕ್ಕೆ ಒಂದೂವರೆ ಪಟ್ಟು ಬೆಲೆ ನಿಗದಿಸಲಾಗದೆಂದು ಸುಪ್ರಿಂಕೋರ್ಟ ಮುಂದುಗಡೆ ಪ್ರಮಾಣವಚನ ಸಲ್ಲಿಸುವ ಮೂಲಕ ರೈತರ ಬೆನ್ನಿಗೆ ಇರಿಯಲಾಗಿದೆ. ರೈತರು, ಕೂಲಿಕಾರರು, ಕಸುಬುದಾರರು, ದಲಿತರು, ಮಹಿಳೆಯರು ವ್ಯವಸಾಯದಲ್ಲಾಗುತ್ತಿರುವ ನಷ್ಠದಿಂದ ಸಾಲಗಾರರಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ದಿನೇ ದಿನೇ ಹೆಚ್ಚುತ್ತಿದೆ. ಹಸಿವಿನ ಸಾವುಗಳು ಬೆಳೆಯುತ್ತಲೇ ಇವೆ. ಇವರ ಸಾಲಮನ್ನಾ ಮಾಡುವ ಬದಲು ದೊಡ್ಡ ಬಂಡವಾಳದಾರರ 3 ಲಕ್ಷ ಕೋಟಿಗೂ ಅಧಿಕ ಸಾಲವನ್ನು ಮನ್ನಾ ಮಾಡಲಾಗಿದೆ. ಸುಮಾರು 6–7 ಲಕ್ಷ ಕೋಟಿ ರೂ. ಸಾಲವನ್ನು ಬಾರದ ಸಾಲವೆಂದು ಬರೆದು ಕೊಳ್ಳಲಾಗಿದೆ. ಈ ಕಾರಣದಿಂದ ಬಡವರಿಗೆ ನೀಡಬೇಕಾದ ಬಜೆಟ್ ಹಣವನ್ನು ಅವರಿಗೆ ಕಡಿತಗೊಳಿಸಿ ದಿವಾಳಿಯಾಗುತ್ತಿರುವ ಬ್ಯಾಂಕುಗಳ ರಕ್ಷಣೆಗೆ ಲಕ್ಷಾಂತರ ಕೋಟಿ ರೂ ಒದಗಿಸಲಾಗಿದೆ.

ಕೋಟ್ಯಾಂತರ ಎಕರೆ ಸರಕಾರಿ ಜಮೀನುಗಳನ್ನು ವ್ಯವಸಾಯದಿಂದ ಬದುಕು ರೂಪಿಸಿಕೊಳ್ಳಲು ಇಚ್ಛಿಸುವ ದಲಿತರು, ದೇವದಾಸಿ ಮಹಿಳೆಯರು, ಹಿಂದುಳಿದ ಜನಸಮುದಾಯಗಳ ಜನ ವಿಭಾಗಗಳಿಗೆ ಒದಗಿಸುವ ಬದಲು, ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಒದಗಿಸಲು ಭೂ ಬ್ಯಾಂಕುಗಳಲ್ಲಿ ಕಾಯ್ದಿರಿಸಲಾಗುತ್ತದೆ. ಇಲ್ಲವೇ ಭೂಗಳ್ಳ ಮಾಫಿಯಾಗಳಿಗೆ ಕೊಳ್ಳೆಹೊಡೆಯಲು ಬಿಡಲಾಗುತ್ತದೆ. ಸಂಪನ್ಮೂಲಗಳ ಕೊರತೆಯಿಂದ ಅಭಿವೃದ್ಧಿ ಪಡಿಸಲಾಗದ ಕೋಟ್ಯಾಂತರ ಎಕರೆ ರೈತರ ಬೀಳು ಭೂಮಿಗಳನ್ನು ಗುತ್ತಿಗೆ ಕೃಷಿ ನಡೆಸಲು ಬಹುರಾಷ್ಟ್ರೀಯ ಕಂಪನಿಗಳಿಗೆ ಬಿಟ್ಟುಕೊಡುವ ಹುನ್ನಾರ ನಡೆಸಿದೆ.

20 ಕೋಟಿಗೂ ಅಧಿಕ ಎಕರೆ ಜಮೀನುಗಳನ್ನು ಕೈಗಾರಿಕಾ ಕಾರಿಡಾರ್ ಮುಂತಾದ ಹೆಸರುಗಳಲ್ಲಿ ಬಲವಂತದ ಭೂ ಸ್ವಾಧಿನಕ್ಕೊಳಪಡಿಸಲು ಕ್ರಮ ವಹಿಸಿದೆ. ವ್ಯವಸಾಯವನ್ನೇ ರೈತರು, ಕೂಲಿಕಾರರು ಮತ್ತು ಕಸುಬುದಾರರಿಂದ ಕಿತ್ತುಕೊಂಡು, ಕಂಪನಿ ಬೇಸಾಯಕ್ಕೆ ದೊಡ್ಡ ದೊಡ್ಡ ಕೃಷಿ ಕಂಪನಿಗಳಿಗೆ ನೀಡುವ ಕ್ರಮಕ್ಕೆ ಮುಂದಾಗುತ್ತಿದೆ.

ಪ್ರತಿವರ್ಷ 1.50 ಕೋಟಿಯಷ್ಟು ಹೊಸ ವಿದ್ಯಾವಂತ ನಿರುದ್ಯೋಗಿಗಳು ಮಾರುಕಟ್ಟೆಯನ್ನು

ಪುಟ 4 ಕ್ಕೆ

ಕೈಗಾ 5–6ನೇ ಘಟಕ ಸ್ಥಾಪನೆಗೆ ಅವಕಾಶ ನೀಡಬಾರದು: ರೈತ ಸಂಘ

ಕೈಗಾ ಅಣುಸ್ಥಾವರದ ಅತೀ ಸಮೀಪದ ಹಳ್ಳಿಗಳಾದ ಬಾಳೆಮನೆ, ಹರಟುಗಾ, ಹರೂರು, ಬೋಳಸೆ, ಕೆಚೇಗಾರ, ಸುಳಗೇರಿ ಮುಂತಾದ ಹಳ್ಳಿಗರು ನೂರಾರು ವರ್ಷಗಳಿಂದ ಮನೆ, ಜಮೀನು, ಕೃಷಿ, ಪಶುಪಾಲನೆ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಈ ಹಳ್ಳಿಗಳು ಕಳೆದ 25 ವರ್ಷಗಳಿಂದಲೂ ಕೈಗಾ ಅಣುಸ್ಥಾವರದ ವಿಕಿರಣದ ಭೀತಿಯಲ್ಲಿವೆ. ಇದು ಸ್ಟರಲೈಜ್ಡ ಝೋನ್ ವ್ಯಾಪ್ತಿಗೆ ಬರುವುದರಿಂದ ಸ್ಥಾವರದ ಸುರಕ್ಷತೆಯ ದೃಷ್ಟಿಯಿಂದ ಈ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಹಿಂದಿನ ಕೈಗಾ ಯೋಜನಾಧಿಕಾರಿಗಳಾದ ಡಾ. ತಿವಾರಿಯವರು ತಿಳಿಸಿದ್ದರು. ಈ ಜನರಿಗೆ ಪರಿಹಾರ ಪುನರ್ ವಸತಿ ಆಗದೆ 5–6ನೇ ಘಟಕ ಸ್ಥಾಪನೆಗೆ ಕರ್ನಾಟಕ ಪ್ರಾಂತ ರೈತ ಸಂಘ ಜಿಲ್ಲಾ ಸಮಿತಿ ವಿರೋಧಿಸುತ್ತಿದೆ ಎಂದು ಜಿಲ್ಲಾ ಅಧ್ಯಕ್ಷ ಶಾಂತಾರಾಂ ನಾಯಕ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಭೂಮಿ ಸ್ವಾಧೀನ ಪ್ರಕ್ರಿಯೆ ನಡೆಯದಿರುವುದನ್ನು ಖಂಡಿಸಿ, ಪುನರ್ ವಸತಿ ಮತ್ತು ಉದ್ಯೋಗಾವಕಾಶ ನೀಡಲು ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘ ನಿರಂತರ ಹೋರಾಟ ನಡೆಸಿತ್ತು. ಆ ಸಂದರ್ಭದಲ್ಲಿ ದಿ. 12–06–1996 ರಂದು ನಡೆದ ಪುನರ್ ವಸತಿ ಸಮಿತಿ ಸಭೆಯು 3 ಹಳ್ಳಿಗಳ ಭೂಸ್ವಾಧೀನಕ್ಕೆ ಠರಾವು ಪಾಸು ಮಾಡಿತ್ತು. ಅದರ ಜಾರಿಗೆ ಮತ್ತೆ ಪ್ರಾಂತ ರೈತ ಸಂಘವು 29–10–1999 ರಿಂದ ಅನಿರ್ದಿಷ್ಟಾವಧಿ ಹೋರಾಟ ನಡೆಸಿತು. ಕಾಳಿ ಜನವಿದ್ಯುತ್ ಯೋಜನೆಯಲ್ಲಿ ನಿರಾಶ್ರಿತರಾದ ಕೆಲವು ಭಾಗದವರಿಗೆ ಒಂದು ರೀತಿಯ ನ್ಯಾಯ ಈ ಭಾಗದವರಿಗೆ ಇನ್ನೊಂದು ರೀತಿಯ ನಿರ್ಣಯವನ್ನು ಅಂದು ತೆಗೆದುಕೊಳ್ಳಲಾಗಿತ್ತು. ಇದರಿಂದ ಅನ್ಯಾಯಕ್ಕೊಳಗಾದವರಲ್ಲಿಹಳ್ಳಿಗರು ಹೆಚ್ಚು. ಕದ್ರಾದಲ್ಲಿ ಜಲವಿದ್ಯುತ್ ಘಟಕವನ್ನು ಲೋಕಾರ್ಪಣೆ ಮಾಡುವ ಕಾರ್ಯಕ್ರಮವನ್ನೇ ವ್ಂಂದ್ಊಡಿಸ್ಂವ್ಂತ್ಹ್ ಹೋರಟವನ್ನು ರೈತ ಸಂಘದ ವತಿಯಿಂದ ಮಾಡಲಾಗಿತ್ತು. ಅಂತೂ ಆ ಸಂದರ್ಭದಲ್ಲಿ ದೇವಕಾರ ಗ್ರಾಮದ ಪುನರ್ ವಸತಿಗೆ ಕ್ರಮ ವಹಸಿದರು. ಉಳಿದ ಹಳ್ಳಿಗಳ ಭೂಸ್ವಾದೀನಕ್ಕೆ ಅಂದು ಒಪ್ಪಿದ್ದರೀಂದ ಹೋರಾಟದ ತೀವ್ರತೆಯನ್ನು ಹಿಂತೆಗೆದುಕೊಳ್ಳಲಾಗಿತ್ತು. 2011–12ರಲ್ಲಿ ಜಿಲ್ಲಾಧಿಕಾರಿ ಕಛೇರಿ ಎದುರು 106 ದಿನ ಧರಣಿ ನಡೆಸಲಾಗಿತ್ತು. ಪ್ರಧಾನಿಯವರಿಗೆ ಮನವಿ ನೀಡಲಾಗಿತ್ತು. ಆ ನಂತರ ಹಲವು ಬಾರಿ ಮನವಿಗಳನ್ನು ಕೊಡಲಾಗಿದೆ. ಆದಾಗ್ಯೂ ಇನ್ನೂ ತನಕ ಯಾವ ಕ್ರಮವನ್ನೂ ವಹಿಸಿಲ್ಲ, ಎಂದು ಪತ್ರಿಕಾ ಹೇಳಿಕೆ ತಿಳಿಸಿದೆ.



ಆದರೆ ನೀಡಿದ ಆಶ್ವಾಸನೆಯಂತೆ ಅಧಿಕಾರಿಗಳು ಮತ್ತು ಕೈಗಾ ಯೋಜನಾಧಿಕಾರಿಗಳು ಪುನರ್ ವಸತಿ ಸಮಿತಿ ಸಭೆಯಲ್ಲಿ ನಡೆದ ತೀರ್ಮಾನಗಳ ಕಾರ್ಯರೂಪಕ್ಕೆ ತರುವಲ್ಲಿ ಅಕ್ಷಮ್ಯ ವಿಳಂಬ ಮಡಿದರು. ಕೈಗಾದಲ್ಲಿ 1–4 ಘಟಕಗಳು ಪ್ರಾರಂಭಗೊಂಡು ನಡೆಯುತ್ತಿದೆ. ಈಗ 5–6ನೇ ಘಟಕವನ್ನು ಸ್ಥಾಪಿಸಲು ತಯಾರಿ ನಡೆಸುತ್ತಿದ್ದಾರೆ. ಇದನ್ನು ನಾವು ಬಲವಾಗಿ ವಿರೋಧಿಸುತ್ತಿದ್ದೇವೆ. ನಿಷೇಧಿತ ಮತ್ತು ಯಾವುದೇ ತರಹದ ಅಸ್ವಾಭವಿಕ ಅಭಿವೃದ್ಧಿಗೆ ಅವಕಾಶವಿಲ್ಲದ ಹರ್ಟುಗಾ, ಬಾಳೆಮನೆ, ಹರೂರು ಬಳಸೆ, ಕುಚೇಗಾರ ಹಾಗೂ ಸುಳಗೇರಿ ಇತರೇ ಹಳ್ಳಿಗಳಲ್ಲಿ ಜನಜೀವನ ನಡೆಸುವುದು ಕಷ್ಟಕರವಾಗಿದೆ. ಅಲ್ಲದೆ ದೇಶದಲ್ಲಿ ಭಯೋತ್ಪಾದಕರ ದಾಳಿ ಕುರಿತು ಎಲ್ಲಿಯೇ ಸಂಶಯ ಬಂದರರೂ ಕೈಗಾ ಎನ್‌ಪಿಸಿ ಸುತ್ತಮುತ್ತಲು ಇರುವ ಹಳ್ಳಿಗಳ ಪ್ರತಿಯೊಂದು ಮನೆಗೂ ಭಯೋತ್ಪಾದನಾ ನಿಗ್ರಹದಳ ಅಥವಾ ಪೊಲೀಸರು ಬಂದು ತಪಲುತ್ತಾರೆ. ಆ ದಿನಗಳಲ್ಲಿ ಗ್ರಾಮದ ಜನತೆ ಮನೆ ಬಿಟ್ಟು ಎಲ್ಲಿಯೂ ಹೋಗುವಂತೆಯೂ ಇಲ್ಲ. ಆರೋಗ್ಯ ತಪಾಸಣೆಗಾಗಿ ಪ್ರಯೋಗ ಪಶುಗಳಾಗಿ ಜನರನ್ನು ಇಲ್ಲಿ ಉಳಿಸಲಾಗಿದೆ. ಹಾಗಾಗಿ ಈ ಭಾಗದ ರೈತರು ಸಂವಿಧಾನದತ್ತ ನೆಮ್ಮದಿಯ ಬದುಕುವ ಹಕ್ಕನ್ನು ಕೇಳಿ ಈವರೆಗೆ ಮಾಡಿದ ವಿನಂತಿ, ಮನವಿ, ಅವರು ನೀಡಿದ ಭರವಸೆಗಳು ಈಡೇರಿಸಿಲ್ಲ.

ಆದ್ದರಿಂದ ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸುವವರೆಗೆ 5–6ನೇ ಘಟಕ ಸ್ಥಾಪಿಸಬಾರದೆಂದು ಕರ್ನಾಟಕ ಪ್ರಾಂತ ರೈತ ಸಂಘ ಜಿಲ್ಲಾ ಸಮಿತಿ ಆಗ್ರಹಿಸಿದೆ:

1. ಹರ್ಟುಗಾ, ಬಾಳೆಮನೆ, ಕುಚೇಗಾರ, ಬಳಸೆ, ಹರೂರು, ಸುಳಗೇರಿ ಮುಂತಾದ 5 ಕಿ.ಮೀ. ಒಳಗಿನ ಹಳ್ಳಿಗಳ ರೈತರ ಜಮೀನು ಸರ್ಕಾರವೇ ಸ್ವಾಧೀನ ಪಡಿಸಿಕೊಳ್ಳಲಿ.
2. ಕೃಷಿ ಭೂಮಿಗೆ ಪರ್ಯಾಯ ಕೃಷಿಯೋಗ್ಯ ಭೂಮಿ ನೀಡಬೇಕು.
3. ಈ ಜನರಿಗೆಲ್ಲ ಸೂಕ್ತ ಪರಿಹಾರ, ಪುನರ್ ವಸತಿ ನೀಡಬೇಕು.
4. ಮನೆಗೊಂದು ಖಾಯಂ ಸರ್ಕಾರಿ ಉದ್ಯೋಗ ನೀಡಬೇಕು.
5. ತಕ್ಷಣ ಈ ಕುರಿತು ಈ ಭಾಗದ ಜನರ ಜೊತೆಗೆ ಜಂಟಿ ಸಭೆ ಕರೆಯಬೇಕು. ಈ ಭಾಗದ ಜನರನ್ನೂ ಒಳಗೊಂಡ ಪುನರ್ವಸತಿ ಸಮಿತಿನ ರಚಿಸಬೇಕು. ಹಿಂದಿನ ಪುನರ್ವಸತಿ ಸಭೆಯ ತೀರ್ಮಾನ ಜಾರಿಯಾಗಬೇಕು.
6. ಕೈಗಾ ನೌಕರರಿಗೆ ಪುನರ್ ವಸತಿ ಮಾಡಿದಂತೆ 15 ಕಿ.ಮೀ. ಹೊರಗಡೆ ಪುನರ್ ವಸತಿ ಆಗಬೇಕು. ಅಲ್ಲಿಯವರೆಗೆ 5–6ನೇ ಘಟಕ ಬೇಡವೇ ಬೇಡ.



ಕೈಗಾ ಅಹವಾಲು ಸಭೆಗೆ ಬಹಿಷ್ಕಾರ

ಡಿಸೆಂಬರ್ 15 ರಂದು ಕೈಗಾದ 5–6ನೇ ಘಟಕದ ಸ್ಥಾಪನೆ ಬಗ್ಗೆ ಅಹವಾಲು ಸಭೆ ಏರ್ಪಡಿಸಲಾಗಿದ್ದು ಆ ಸಭೆಯನ್ನು ಪಕ್ಷಾತೀತವಾಗಿ ಬಹಿಷ್ಕರಿಸಲಾಗಿದೆ. 1ರಿಂದ 4 ನೇ ಘಟಕದ ಸ್ಥಾಪನೆಯ ಸಮಯದಲ್ಲಿ ಕೊಡಲಾದ ಯಾವ ಭರವಸೆಗಳನ್ನು ಕೈಗಾ ಆಡಳಿತ ಈಡೇರಿಸಿಲ್ಲ. (ವಿವರಗಳು ರೈತ ಸಂಘದ ಪತ್ರಿಕಾ ಹೇಳಿಕೆಯಲ್ಲಿದೆ). ಆದ್ದರಿಂದ ಸಭೆಗೆ ಸೇರಿದ್ದ ಸುಮಾರು 3 ಶಾವಿರಕ್ಕೂ ಹೆಚ್ಚುಜನ ಪ್ರತಿಭಟನಾ ಸಭೆ ನಡೆಸಿ ಅಹವಾಲು ಸಭೆಯನ್ನು ಬಹಿಷ್ಕರಿಸಲು ನಿರ್ಧರಿಸಿದರು. ರೈತ ಸಂಘದ ಜಿಲ್ಲಾ ಅಧ್ಯಕ್ಷ ಶಾಂತಾರಾಂ ನಾಯಕ್, ಕಾರ್ಯದರ್ಶಿ ಶ್ಯಾಮನಾಥ ನಾಯಕ್, ಕಾಂಗ್ರೆಸ್ ಮಾಜಿ ಶಾಸಕ ಸತೀಶ, ಜೆಡಿ–ಎಸ್ ನ ಮಾಜಿ ಸಚಿವ ಆನಂದ ಆಸ್ನೋಟಿಕರ್ ಮುಂತಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಜನವರಿ 8–9 ರ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಿ.......... ಪುಟ 3 ರಿಂದ

ಪ್ರವೇಶಿಸುತ್ತಿದ್ದರೆ, ಉದ್ಯೋಗ ಸೃಷ್ಠಿ ಕೇವಲ ಅದರ ಶೇ. ಒಂದರಷ್ಟು ಮಾತ್ರವೇ ಆಗಿದೆ. ಇರುವ ಉದ್ಯೋಗಗಳನ್ನು ಜನತೆ ಕಳೆದುಕೊಂಡು ಬೀದಿಪಾಲಾಗುತ್ತಿದ್ದಾರೆ. ಶಿಕ್ಷಣದ ವ್ಯಾಪಾರೀಕರಣ ಮತ್ತು ಖಾಸಗೀಕರಣದ ನೀತಿಗಳು ಸಾಮಾನ್ಯರ ಮಕ್ಕಳಿಗೆ ಶಿಕ್ಷಣ ದೊರೆಯದಂತಹ ಪರಿಸ್ಥಿತಿ ಉಂಟುಮಾಡುತ್ತಿವೆ..

ಎಲ್ಲ ದುಡಿಯುವ ಜನತೆ ನಾಗರಿಕರನ್ನು ಅಗತ್ಯ ವಸ್ತುಗಳ ಬೆಲೆ ಏರಿಕೆಯ ಲೂಟಿಗೆ ಬಿಡಲಾಗಿದೆ. ಈ ಅವಧಿಯಲ್ಲಿ ಪೆಟ್ರೋಲ್ ಡೀಸೆಲ್ ಬೆಲೆಗಳು ಗಗನಮುಖಿಯಾಗಿವೆ. ಸರಕು ಸಾಗಾಣೆ ಮತ್ತು ಸಾರಿಗೆ ವೆಚ್ಚಗಳು ಏರುತ್ತಿವೆ. ಇದರೊಂದಿಗೆ ಕೃಷಿ ಉತ್ಪನ್ನಗಳ ಹೂಡಿಕೆಗಳಾದ ಬೀಜ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳ ಬೆಲೆಗಳು ಏರುತ್ತಲೇ ಇವೆ. ಇವುಗಳ ಜೊತೆ ಒಂದೆಡೆ ದೊಡ್ಡ ಬಂಡವಾಳದಾರರಿಗೆ ಲಕ್ಷಾಂತರ ಕೋಟಿ ರೂ.ಗಳ ತೆರಿಗೆ ಬಾಕಿ ಮನ್ನಾ ಮಾಡುವ ಕೇಂದ್ರ ಸರಕಾರ ಏಕ ರೂಪದ ತೆರಿಗೆ ಹೆಸರಲ್ಲಿ ಹೇರುತ್ತಿರುವ ತೆರಿಗೆಗಳು ಸಾಮಾನ್ಯ ಜನತೆಯನ್ನು ತೀವ್ರ ಬಾಧೆಗೀಡಾಗಿಸಿವೆ. ಒಂದೆಡೆ ಉದ್ಯೋಗಾವಕಾಶಗಳ ಕೊರತೆ ಮತ್ತೊಂದೆಡೆ ಅತ್ಯಂತ ಕಡಿಮೆ ಕೂಲಿ ಇನ್ನೊಂದೆಡೆ ಅಗತ್ಯ ವಸ್ತುಗಳ ಬೆಲೆ ಏರಿಕೆಗಳು ಸಾಮಾನ್ಯ ಜನತೆಯನ್ನು ತೀವ್ರವಾಗಿ ಬಾದಿಸುತ್ತಿವೆ.

ಪರಿಣಾಮವಾಗಿ, ಸಾಮಾನ್ಯ ಜನತೆ ಜೀವನ ನಿರ್ವಹಣೆಗಾಗಿ ಸಾಲಗಾರರಾಗಿ ಗ್ರಾಮೀಣ ಹಾಗೂ ನಗರದ ಶ್ರೀಮಂತರಿಗೆ ತಮ್ಮ ಇದ್ದ ಬದ್ದ ಆಸ್ತಿಗಳನ್ನು ಮಾರಾಟ ಮಾಡುತ್ತಿದ್ದಾರೆ. ಹೀಗಾಗಿ ಶ್ರೀಮಂತರು ಭಾರೀ ಶ್ರೀಮಂತರಾದರೇ ಬಡವರು ಕಡುಬಡವರಾಗುತ್ತಿದ್ದಾರೆ. ಬೆಳೆಯುತ್ತಿರುವ ಇವರ ನಡುವಿನ ಈ ಅಂತರವು ಶ್ರೀಮಂತರ ಮೇಲಿನ ಬಡವರ ಪರಾವಲಂಬನೆಯು ದಲಿತರು, ಕೂಲಿಕಾರರು, ಬಡರೈತರು, ಕಾರ್ಮಿಕರು ಮತ್ತು ಮಹಿಳೆಯರ ಮೇಲೆ ವ್ಯಾಪಕ ದೌರ್ಜನ್ಯಗಳು ಹೆಚ್ಚುವಂತಾಗಿವೆ.

ಬಿಜೆಪಿ ಹಲವು ಭಷ್ಟರನ್ನು ರಕ್ಷಿಸುತ್ತಿರುವುದು ಮಾತ್ರವಲ್ಲ, ಸ್ವತಃ ಅದರ ಸರ್ಕಾರದ ಪ್ರಧಾನ ಮಂತ್ರಿಗಳೇ ರಕ್ಷಣಾ ವ್ಯವಹಾರದ ಸಾವಿರಾರು ಕೋಟಿ ಮೊತ್ತದ ರಫೆಲ್ ಹಗರಣದ ಆರೋಪದಲ್ಲಿ ಸಿಲುಕಿದ್ದಾರೆ. ಉನ್ನತ ಮಟ್ಟದ ಭ್ರಷ್ಟಾಚಾರ ನಿಯಂತ್ರಣಕ್ಕಾಗಿ ಲೋಕಪಾಲ ಮಸೂದೆಯನ್ನು ಜಾರಿಗೊಳಿಸುತ್ತಿಲ್ಲ.

ದೇಶದಾದ್ಯಂತ ಈ ಅನ್ಯಾಯದ ವಿರುದ್ಧ ದುಡಿಯುವ ಜನತೆಯ ಪ್ರತಿರೋಧಗಳಿಂದ ಭಯ ಭೀತರಾದ ಬಹುರಾಷ್ಟ್ರಿಯ ಸಂಸ್ಥೆಗಳು, ಬಿಜೆಪಿ ಮತ್ತು ಸಂಘ ಪರಿವಾರ ಜನತೆಯ ಹೋರಾಟಗಳನ್ನು ಹತ್ತಿಕ್ಕಲು ಒಡೆದಾಳುವ ತಂತ್ರಗಳನ್ನು ಅನುಸರಿಸುತ್ತಿವೆ. ಹಿಂದೂ ಮತಾಂಧತೆಯನ್ನು ಹೇರಲಾಗುತ್ತಿದೆ. ಗೋಸಂರಕ್ಷಣೆಯ ಹೆಸರಿನಲ್ಲಿ, ನೈತಿಕ ಪೋಲೀಸ್ ಗಿರಿ ಮುಂತಾದ ಹೆಸರಿನಲ್ಲಿ ಮುಸ್ಲಿಂ ಮತ್ತಿತರೇ ಅಲ್ಪ ಸಂಖ್ಯಾತರ ಮೇಲೆ ಮತ್ತು ದಲಿತರ ಮೇಲೆ ದೈಹಿಕ ಹಲ್ಲೆಗಳನ್ನು ಸಂಘಟಿಸಲಾಗುತ್ತಿದೆ. ಆಹಾರದ ಹಾಗೂ ಬದುಕುವ ಹಕ್ಕು, ಧಾರ್ಮಿಕ ಹಕ್ಕು. ಮೀಸಲಾತಿಯ ಹಕ್ಕುಗಳ ಮೇಲೆ ಮಾತ್ರವಲ್ಲಾ, ಅಭಿವ್ಯಕ್ತಿ ಸ್ವಾತಂತ್ರ್ಯ ಮುಂತಾದ ಸಂವಿಧಾನ ಕೊಟ್ಟಿರುವ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಗಂಭೀರ ಹಲ್ಲೆ ಮಾಡಗುತ್ತಿದೆ. ಕೊಲೆಗಳನ್ನು ನಡೆಸಲಾಗುತ್ತಿದೆ.

ದೇಶದ ಸಾರ್ವಭೌಮತೆಯನ್ನು ಅಮೇರಿಕಕ್ಕೆ ಒತ್ತೆ ಹಾಕುವ ಕೆಲಸದಲ್ಲಿ ಸಹ ತೊಡಗಿದೆ. ಅಮೇರಿಕದ ಅಣತಿಯಂತೆ ನಡೆಯುತ್ತಿದೆ.

ಈ ರೀತಿಯಲ್ಲಿ ಬಿಜೆಪಿ ಜನತೆಯ ಹಿತವನ್ನು ರಕ್ಷಿಸುವಲ್ಲಿ ಘೋರವಾಗಿ ವಿಫಲವಾಗಿದೆ. ಜನತೆಯನ್ನು ಯಥೇಚ್ಛವಾಗಿ ಕೊಳ್ಳೆ ಹೊಡೆಯಲು ದೊಡ್ಡ ಬಂಡವಾಳದಾರರಿಗೆ, ಬಹುರಾಷ್ಟ್ರಿಯ ಸಂಸ್ಥೆಗಳಿಗೆ, ಭೂಮಾಲಕರುಗಳಿಗೆ ಅವಕಾಶ ನೀಡಲಾಗುತ್ತಿದೆ. ಆದ್ದರಿಂದ ರಾಜ್ಯದಾದ್ಯಂತ ಜನತೆ ಇದರ ಜನವಿರೋಧಿ ನೀತಿಗಳನ್ನು ಬಲವಾಗಿ ಪ್ರತಿರೋಧಿಸಲು ಒಗ್ಗೂಡಿ ಚಳುವಳಿಯಲ್ಲಿ ತೊಡಗಬೇಕಾಗಿದೆ.

ಅದೇ ರೀತಿ, ದೇಶದಾದ್ಯಂತ ಈ ಕೇಂದ್ರ ಸರಕಾರದ ಈ ಎಲ್ಲಾ ಜನವಿರೊಧಿ ನೀತಿಗಳನ್ನು ಕೈಬಿಡಲು ಮತ್ತು ತಮ್ಮ ಹಕ್ಕೊತ್ತಾಯಗಳಿಗಾಗಿ ಒತ್ತಾಯಿಸಿ, ಕಾರ್ಮಿಕರು ದೇಶವ್ಯಾಪ್ತಿಯಾಗಿ ಜನವರಿ 8–9, 2019 ರಂದು ನಡೆಸುವ ಮಹಾ ಸಾರ್ವತ್ರಿಕ ಎರಡು ದಿನಗಳ ಮುಷ್ಕರಕ್ಕೆ ಕರೆ ನೀಡಿದ್ದಾರೆ. ಇದನ್ನು ದೇಶದ ರೈತ ಸಂಘಗಳು ಬೆಂಬಲಿಸಿ ತಮ್ಮ ಹಕ್ಕೊತ್ತಾಯಗಳನ್ನು ಮಂಡಿಸಿ ಅವುಗಳು ಕೂಡಾ ಗ್ರಾಮೀಣ ಮುಷ್ಕರ ನಡೆಸಲು ಮುಂದಾಗಿವೆ. ಕ್ಯಾಂಪಸ್‌ಗಳನ್ನು ಉಳಿಸಿ, ಶಿಕ್ಷಣವನ್ನು ಉಳಿಸಿ, ದೇಶವನ್ನು ಉಳಿಸಿ ಎನ್ನುವ ಘೋಷಣೆಯಡಿ ವಿದ್ಯಾರ್ಥಿ – ಯುವಜನರು ಮುಷ್ಕರದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಭಾರತ ಕಮ್ಯುನಿಷ್ಠ ಪಕ್ಷ (ಮಾರ್ಕ್ಸವಾದಿ) ರಾಜ್ಯ ಸಮಿತಿಯು ಈ ಮುಷ್ಕರವನ್ನು ಬೆಂಬಲಿಸಿ ಪಾಲ್ಗೊಳ್ಳಲಿದ್ದು ಎಲ್ಲಾ ನಾಗರೀಕರು ಆ ಎರಡು ದಿನ ಮುಷ್ಕರವನ್ನು ಅಭೂತ ಪೂರ್ವಕವಾಗಿ ಯಶಸ್ವಿಗೊಳಿಸಲು ವ್ಯಾಪಕವಾಗಿ ಪಾಲ್ಗೊಳ್ಳುವಂತೆ ಕರೆ ನೀಡುತ್ತದೆ.

ಕನಿಷ್ಠ ಮಾಸಿಕ ಪಿಂಚಣಿ 6 ಸಾವಿರಕ್ಕೆ ಒತ್ತಾಯ
ಜನವರಿ 9 ರಂದು ರಾಜ್ಯಾದ್ಯಂತ ಪಿಎಫ್ ಪಿಂಚಣಿದಾರರ ಪ್ರತಿಭಟನೆ

ದೇಶದಲ್ಲಿರುವ ಸುಮಾರು 63 ಲಕ್ಷ ಪಿಎಫ್ ಪಿಂಚಣಿದಾರರಲ್ಲಿ ಬಹುತೇಕ ಜನರು ತಮ್ಮ ಇಳಿವಯಸ್ಸಿನಲ್ಲಿ ಹತ್ತಾರು ವರ್ಷ ಭವಿಷ್ಯನಿಧಿಯ ಸದಸ್ಯರಾಗಿದ್ದು ವಂತಿಕೆ ಪಾವತಿಸಿ ಕೇವಲ 1000, 1500 ರೂಪಾಯಿ ಪಿಂಚಣಿಯಲ್ಲಿ ಬದುಕು ಸಾಗಿಸುವಂತಹ ದಾರುಣ ಸ್ಥಿತಿ ಸರ್ಕಾರಗಳಿಗೆ ಕಾಣುತ್ತಿಲ್ಲವೇ ಎಂದು ಕರ್ನಾಟಕ ರಾಜ್ಯ ಪಿಎಫ್ ಪಿಂಚಣಿದಾರರ ಸಂಘ ಪ್ರಶ್ನಿಸಿದೆ. ಈ ಕೂಡಲೇ ಎಲ್ಲಾ ಪಿಎಫ್ ಪಿಂಚಣಿದಾರರಿಗೆ ಕನಿಷ್ಠ ಮಾಸಿಕ 6000 ರೂಪಾಯಿ ಪಿಂಚಣಿಯನ್ನು ನಿಗದಿಗೊಳಿಸಬೇಕು. ಎಲ್ಲಾ ಪಿಂಚಣಿದಾರರಿಗೂ ಬೆಲೆ ಏರಿಕೆ ಸೂಚ್ಯಂಕದ ಆಧಾರದಲ್ಲಿ ತುಟ್ಟಿಭತ್ಯೆಯನ್ನು ಜಾರಿಗೊಳಿಸಬೇಕು ಹಾಗೂ ಪಿಂಚಣಿದಾರರು ಮತ್ತು ಅವರ ಅವಲಂಬಿತರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ಸೌಲಭ್ಯವನ್ನು ಜಾರಿಗೊಳಿಸಬೇಕು, ಎಂದು ಒತ್ತಾಯಿಸಿದೆ.

ಸರ್ಕಾರ ಏಕಪಕ್ಷೀಯವಾಗಿ ಹಿಂದಕ್ಕೆ ಪಡೆದಿರುವ ರೆಡ್ಯೂಸ್ ಪೆನ್ಷನ್, ಕಮ್ಯುಟೇಷನ್ ಮರುಜಾರಿಗೊಳಿಸಬೇಕು. ಪಿಂಚಣಿಗಾಗಿ 60 ತಿಂಗಳ ಸರಾಸರಿಯನ್ನು ಪರಿಗಣಿಸುವುದನ್ನು ಹಿಂದಕ್ಕೆ ಪಡೆದು ಕಡೆಯ ಹನ್ನೆರಡು ತಿಂಗಳ ವೇತನದ ಸರಾಸರಿಯನ್ನು ಪರಿಗಣಿಸಬೇಕು. ಇದೇ ಮೊದಲಾದ ಬೇಡಿಕೆಗಳ ಆಧಾರದಲ್ಲಿ ಪಿಂಚಣಿದಾರರ ಜನವರಿ 9, 2019ರಂದು ರಾಜ್ಯಾದ್ಯಾಂತ್ಯ ತಾಲೂಕು ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲು ಕರೆ ನೀಡಿದೆ. ಕೇಂದ್ರ ಸರ್ಕಾರ ಕನಿಷ್ಠ ಪಿಂಚಣಿ 1000 ರೂಪಾಯಿ ನಿಗದಿಗೊಳಿಸಿದ್ದಾಗ್ಯೂ ರೆಡ್ಯೂಸ್ ಪೆನ್ಷನ್ ಪಡೆದ ಹಾಗೂ ಕಮ್ಯುಟೇಷನ್ ಹಣ ಪಡೆದಂತಹ 1000 ರೂಗಳಿಗಿಂತ ಕಡಿಮೆ ಪಿಂಚಣಿ ಬರುತ್ತಿದೆ. ಇಳಿವಯಸ್ಸಿನಲ್ಲಿ ಹಲವು ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವ ಪಿಂಚಣಿದಾರರಿಗೆ ಕನಿಷ್ಠ ವೈದ್ಯಕೀಯ ವೆಚ್ಚಕ್ಕೂ ಈ ಮೊತ್ತ ಸಾಕಾಗುತ್ತಿಲ್ಲ ಎಂದು ಪಿಂಚಣಿದಾರರ ಸಂಘ ಅಭಿಪ್ರಾಯಪಟ್ಟಿದೆ.

ದೆಹಲಿಯ ರಾಜ್ಯ ಸರ್ಕಾರ ನೀಡುವ ಸಾಮಾಜಿಕ ಭದ್ರತಾ ಪಿಂಚಣಿಯೇ ಮಾಸಿಕ 2000 ರೂಪಾಯಿಗಳಿದ್ದು 10 ವರ್ಷಕ್ಕೂ ಹೆಚ್ಚು ಭವಿಷ್ಯನಿಧಿ ಸದಸ್ಯರಾಗಿ ವಂತಿಕೆ ಪಾವತಿಸಿ ಈ ಸಮಾಜಕ್ಕೆ ತಮ್ಮ ಶ್ರಮ ಶಕ್ತಿಯನ್ನು ಧಾರೆ ಎರೆಯುವ ಕಾರ್ಮಿಕರು ತಮ್ಮ ಇಳಿವಯಸ್ಸಿನಲ್ಲಿ 1000 ರೂಗೂ ಕಡಿಮೆ ಪಿಂಚಣಿಯಲ್ಲಿ ಬದುಕುವುದು ಹೇಗೆಂದು ಪಿಂಚಣಿದಾರರ ಸಂಘ ಪ್ರಶ್ನಿಸಿದೆ. ಈ ಕೂಡಲೇ ಸರ್ಕಾರದ ಪಾರ್ಲಿಮೆಂಟರಿ ಹೈಪವರ್ ಕಮಿಟಿ ಅಂಡ್ ಪೆನ್ಷನ್ ತನ್ನ ವರದಿಯನ್ನು ಬಹಿರಂಗಪಡಿಸುವಂತೆ ಹಾಗೂ ಪಿಂಚಣಿದಾರರ ಬದುಕಿಗೆ ಒಂದು ರಕ್ಷಣೆ ನೀಡುವಂತೆ ಸಂಘವು ಆಗ್ರಹಿಸಿದೆ.

ಬೆಲೆ ಏರಿಕೆ, ಕಾರ್ಮಿಕ ಕಾನೂನುಗಳ ತಿದ್ದುಪಡಿ, ರೈತರ ಸಂಕಷ್ಟಗಳನ್ನು ಬಗೆಹರಿಸಲು ನೀತಿಗಳನ್ನು ಬದಲಿಸಲು ಒತ್ತಾಯಿಸಿ ಜನವರಿ 8, 9 ರಂದು ನಡೆಯುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ಕರ್ನಾಟಕ ರಾಜ್ಯ ಪಿಂಚಣಿದಾರರ ಸಂಘ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ. ಈ ಸಂಬಂಧ ಸಂಘದ ರಾಜ್ಯ ಮಟ್ಟದ ಸಭೆಯು ರಾಜ್ಯ ಅಧ್ಯಕ್ಷರಾದ ಜೆ. ಬಾಲಕೃಷ್ಣ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯಲ್ಲಿ ಸಿಐಟಿಯುನ ಹಿರಿಯ ಉಪಾಧ್ಯಕ್ಷರು ಕಾರ್ಮಿಕರ ಭವಿಷ್ಯ ನಿಧಿಯ ಸೆಂಟ್ರಲ್ ಬೋರ್ಡ್ ಆಫ್ ಟ್ರಸ್ಟೀಸ್ (ಸಿಬಿಟಿ) ಸದಸ್ಯರು ಆದ ಸಂಗಾತಿ ಎ.ಕೆ.ಪದ್ಮನಾಭನ್ ಅವರು ಸಭೆಯಲ್ಲಿ ಹಾಜರಿದ್ದು ಮಾರ್ಗದರ್ಶನ ನೀಡಿದರು, ಎಂದು ಸಂಘದ ಪತ್ರಿಕಾ ಹೇಳಿಕೆ ತಿಳಿಸಿದೆ.

ಎಸ್.ಎಸ್. ಸೆನ್ ಲಾಲ್ ಸಲಾಂ!

ಸಂಗಾತಿ ಎಸ್.ಎಸ್.ಸೆನ್ ಹಿರಿಯ ಅಂಚೆ ಮತ್ತು ದೂರಸಂಪರ್ಕ ನೌಕರ ಸಂಘದ ಮುಂಖಡರು. ತುರ್ತುಪರಿಸ್ಥಿತಿಯಲ್ಲಿ 18 ತಿಂಗಳ ಕಾಲ ಸೆರೆ ಮನೆ ವಾಸದಲ್ಲಿದ್ದವರು. ಸಿಪಿಐ(ಎಂ) ಪಕ್ಷದ ಹಿರಿಯ ಸದಸ್ಯರು. ಅವರು ಇತ್ತೀಚೆಗೆ ಬೆಂಗಳೂರಿನಲ್ಲಿ ನಿಧನ ಹೊಂದಿದ್ದಾರೆ. ಇವರಿಗೆ 86 ವರ್ಷವಾಗಿತ್ತು. ಮೂಲತಃ ಇವರು ಅಸ್ಸಾಂ ರಾಜ್ಯದವರು, ಆರೋಗ್ಯದ ಸಮಸ್ಯೆಯಿಂದಾಗಿ, ಬೆಂಗಳೂರಿನಲ್ಲಿರುವ ತಮ್ಮ ಮಗನ ಮನೆಯಲ್ಲಿ ವಾಸ ಮಾಡುತ್ತಿದ್ದರು. ದೀರ್ಘಕಾಲದಿಂದ ಅನಾರೋಗ್ಯ ದಿಂದ ಬಳಲುತ್ತಿದ್ದರು. ನಮ್ಮ ಪಕ್ಷದ ಪೂರ್ವ ವಲಯದ ವ್ಯಾಪ್ತಿಯಲ್ಲಿ ಬರುವ ಉದಯ ನಗರ ಶಾಖೆಯ ಸದಸ್ಯರಾಗಿದ್ದರು.

ಅದು ನವೆಂಬರ್ 1975ರ 6 ನೇ ದಿನವಾಗಿತ್ತು. ಶ್ರೀಮತಿ ಇಂದಿರಾ ಗಾಂಧಿ ಅವರ ತುರ್ತು ಪರಿಸ್ಥಿತಿಯ ಕರಾಳ ದಿನಗಳು. ನಮ್ಮ ದೇಶದ ಪ್ರಜಾಪ್ರಭುತ್ವ ಚಳುವಳಿಗಳ ಮೇಲೆ ದುಷ್ಪರಿಣಾಮಗಳನ್ನು ಬೀರಿತ್ತು. ಹೊರಗೆ ತನ್ನ ಪಡೆಯನ್ನು ಇರಿಸಿ ಒಂದು ಪೊಲೀಸ್ ಇನಸ್ಪೆಕ್ಟರ್ ಗುವಾಹಾಟಿಯಲ್ಲಿ ಆಗಿನ ಸಬ್ ರೆಕಾರ್ಡ್ ಆಫೀಸಿನಲ್ಲಿ ಜಿ.ಹೆಚ್. ವಿಭಾಗ ಪ್ರವೇಶಿಸಿ, ಕೆಲಸ ಮಾಡುತ್ತಿದ್ದ ಯುವಕನ ಮುಂದೆ ಕುಳಿತುಕೊಳ್ಳುತ್ತಾ, "ಇಲ್ಲಿ ಸಂಘದ ಮುಖಂಡರು ಯಾರೆಂದು ಕೇಳಿದಾಗ, "ಹೌದು, ನೀವು ಹುಡುಕುತ್ತಿರುವ ಶ್ರೀ ಸುಧೇಂದ್ರ ಶೇಖರ್ ಸೇನ್ ನಾನೇ" ಎಂದು ಎದೆಗುಂದದೆ ಉತ್ತರಿಸಿದರು. ಯಾವ ಹಿರಿಯ ವರಿಷ್ಠಾಧಿಕಾರಿ ಅನುಮತಿಯನ್ನು ಪಡೆಯದೆ, ಸಂಗಾತಿ ಎಸ್. ಎಸ್ ಸೇನ್ (ಜನಪ್ರಿಯವಾಗಿ ಸುಧ ಸೇನ್ ಎಂದು ಕರೆಯುತ್ತಾರೆ) ಅವರನ್ನು ಎಳೆದುಕೊಂಡು ಹೋಗಿ, ಗುವಾಹಾಟಿ ಕೇಂದ್ರೀಯ ಜೈಲಿನಲ್ಲಿ ಇಡಲಾಯಿತು. ಕೇಂದ್ರ ಜೈಲಿನಲ್ಲಿ ಮತ್ತು ಅಸ್ಸಾಂನಲ್ಲಿ ಬೇರೆಡೆ ಇಡಲಾಯಿತು. ತುರ್ತು ಪರಿಸ್ಥಿತಿಯನ್ನು ತೆಗೆದು ಹಾಕುವ ವರೆಗೂ ಜೈಲಿನಿಂದ ಬಿಡುಗಡೆಯಾಗಲು 15 ರಿಂದ 19 ತಿಂಗಳುಗಳ ಕಾಲ ಕಾಯಬೇಕಾಯಿತು. ಜೈಲಿನಿಂದ ಬಿಡುಗಡೆಯಾದ ಬಳಿಕವೂ ಅವರಿಗೆ ತೊಂದರೆ ತಪ್ಪಲಿಲ್ಲ. ಇದರಿಂದಾಗಿ ಇವರನ್ನು, ಈಶಾನ್ಯ ಪ್ರದೇಶದ ದೂರದ ಬೆಟ್ಟದ ಮೂಲೆಯ ಕಚೇರಿಗೆ ವರ್ಗಾಯಿಸಲಾಯಿತು. 1977 ರಲ್ಲಿ ಜನತಾ ಸರ್ಕಾರ ಅಧಿಕಾರಕ್ಕೆ ಬಂದಾಗ ಮಾತ್ರ ಗುವಾಹಾಟಿಗೆ ಮರಳುವು ಸಾಧ್ಯವಾಯಿತು.

ಕೇಂದ್ರ ಸರಕಾರದ ಉದ್ಯೋಗಿಗಳ ಟ್ರೇಡ್ ಯೂನಿಯನ್ ಚಳವಳಿಯ ಇತಿಹಾಸದ ಸರಿಸಾಟಿಯಿಲ್ಲದ ಹೋರಾಟ ಗಳಲ್ಲಿ ಇವರ ಪಾತ್ರ ಅಮೋಘವಾದದ್ದು. ಐತಿಹಾಸಿಕ 1968 ಕೇಂದ್ರ ಸರ್ಕಾರದ ಉದ್ಯೋಗಿಗಳ ಮುಷ್ಕರವನ್ನು ನಾಶಮಾಡುವ ಸರ್ಕಾರದ ಪ್ರಯತ್ನದಿಂದಾಗಿ, ಪಿ & ಟಿ ಯಲ್ಲಿ ಎರಡನೇ ಯೂನಿಯನ್ (ಎಫ್. ಎಂ.ಟಿ.ಒ) ರಚನೆಯಾಯಿತು. ಸಂಗಾತಿ ಎಸ್ ಎಸ್ ಸೇನ್ರ ರು ಆಗಲೂ ನಾಯಕರಾಗಿ, ಒಕ್ಕೂಟವನ್ನು ಬೆಳೆಸಲು ದುಡಿದಿದ್ದರು. ಇವರ ಹೋರಾಟದ ಜೀವನ ಮತ್ತು ಬದುಕು ಇಂದಿನ ಯುವ ಹೋರಾಟಗಾರರಿಗೆ ಸ್ಪೂರ್ತಿಯಾಗಲಿ.

– ನಾಗರಾಜ್ ನಂಜುಂಡಯ್ಯ



ಬೆಂಗಳೂರು ಗುತ್ತಿಗೆ ಕಾರ್ಮಿಕರ ಧರಣಿ

ಡಿಸೆಂಬರ್ 27 ರಂದು ಬೆಂಗಳೂರು ದಕ್ಷಿಣ ಮತ್ತು ಉತ್ತರ ಗುತ್ತಿಗೆ ಕಾರ್ಮಿಕರು ಕಾರ್ಮಿಕ ಭವನದ ಮುಂದೆ ಪ್ರತಿಭಟನಾ ಧರಣಿ ನಡೆಸಿದರು. Industrial Establishments (Conferment of Permanent status to workmen) Act ನ್ನು ಎಲ್ಲಾ ಉದ್ಯಮಗಳಿಗೆ ಅನ್ವಯಿಸಬೇಕೆಂದು ಅವರು ಹಕ್ಕೊತ್ತಾಯ ಸಲ್ಲಿಸಿದರು. ಜೆಸಿಟಿಯು ಕರೆ ಕೊಟ್ಟಿರುವ ಜನವರಿ 8–9ರ ಸಾರ್ವತ್ರಿಕ ಮುಷ್ಕರದ ಭಾಗವಾಗಿ 12 ಅಂಶಗಳ ಹಕ್ಕೊತ್ತಾಯ ಪಟ್ಟಿಯನ್ನು ಸಲ್ಲಿಸಿದರು. ಪ್ರತಿಭಟನೆಯ ನೇತೃತ್ವವನ್ನು ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಎನ್. ಉಮೇಶ್, ಬೆಂಗಳೂರು ಉತ್ತರ ಸಿಐಟಿಯು ಜಿಲ್ಲಾಧ್ಯಕ್ಷ ಪ್ರತಾಪ ಸಿಂಹ, ಬೆಂಗಳೂರು ದಕ್ಷಿಣ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎನ್. ಮಂಜುನಾಥ, ಜಿಲ್ಲಾ ಕಾರ್ಯದರ್ಶಿಗಳಾದ ಎಸ್.ಎಂ. ಕುಮಾರ್, ಎನ್.ಬಿ.ಮಹಾಂತೇಶ್ ವಹಿಸಿದ್ದರು. MCEA, MCWU, BBMP COU, ಮತ್ತು TRMN ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಮಾಳಮ್ಮ ರಾಜ್ಯದ ಮೊದಲ ದೇವದಾಸಿ ಮಹಿಳೆಯರ ಸಹಕಾರ ಸಂಘದ ಮೊದಲ ಅಧ್ಯಕ್ಷರು

ದೇವದಾಸಿ ಮಹಿಳೆಯರ ಸಹಕಾರ ಸಂಘ. ನಿ ಹಗರಿಬೊಮ್ಮನ ಹಳ್ಳಿ ತಾಲ್ಲೂಕು ಇದರ ಪ್ರಥಮ ಆಡಳಿತ ಮಂಡಳಿ ಸದಸ್ಯರ ಸಭೆ ದಿನಾಂಕ 23/12/2018 ಭಾನುವಾರ ರಂದು ಜರುಗಿತು. ಆಡಳಿತ ಮಂಡಳಿ ನೂತನ ಅಧ್ಯಕ್ಷರಾಗಿ ಬಿ.ಮಾಳಮ್ಮ ಹಾಗೂ ಉಪಾಧ್ಯಕ್ಷರಾಗಿ ಕೆ.ಅಂಜೀನಮ್ಮ ಇವರುಗಳು ಅವಿರೋಧವಾಗಿ ಆಯ್ಕೆ ಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿಗಳಾದ ಶ್ರೀ ರಾಮಾಂಜೀನಿ ರಡ್ಡಿ ಘೋಷಣೆ ಮಾಡಿದರು. ಆಡಳಿತ ಮಂಡಳಿಯ ನಿರ್ದೇಶಕರಾಗಿ ಬಿ ಮೈಲಮ್ಮ. ತಟ್ನೆಮ್ಮ. ಎ.ಹನುಮಕ್ಕ., ಮಲಿಯಮ್ಮ, ನೀಲಮ್ಮ, ವಿಶಾಲಾಕ್ಷಮ್ಮ, ಹುಲಿಗೆಮ್ಮ, ಬಸಮ್ಮ.ಆರ್., ಹನುಮಕ್ಕ ಕೆ, ದೊಡ್ಡ ಬಸಮ್ಮ, ರಾಜೇಶ್ವರಿ ಆಯ್ಕೆ ಯಾಗಿದ್ದಾರೆ.



ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಕಾದಂಬರಿಯ ನಾಯಕ ವಿನ್‌ಸ್ಟನ್ ಸ್ಮಿತ್ ಕೆಲಸ ಮಾಡುತ್ತಿರುವುದು ಈ ಪ್ರಭುತ್ವದ ಒಂದು ಕಛೇರಿಯಲ್ಲಿ. ಅವನ ಕೆಲಸವೆಂದರೆ ಭೂತಕಾಲದ ವರದಿಗಳನ್ನು ತಿದ್ದಿ ಬದಲಾಯಿಸುವುದು! ಏಕೆಂದರೆ ಈ ಪ್ರಭುತ್ವದ ನಾಯಕ **Big Brother** ಹಾಗೂ ಅವನ ಪಕ್ಷ **(The Party)** ದ ಪ್ರಕಾರ ಭೂತಕಾಲದ ನೆನಪುಗಳನ್ನು, ಸಾಕ್ಷಿಗಳನ್ನು ತಿದ್ದಿ ಸಂಪಾದಿಸಬೇಕು. ಉದಾಹರಣೆಗೆ ವರ್ಷಗಳ ಹಿಂದೆ **Big Brother** ತನ್ನ ಭಾಷಣದಲ್ಲಿ ನಾಡಿನ ಪ್ರಗತಿ ಶೇಕಡಾ ಇಷ್ಟು ಎಂದು ಹೇಳಿರುತ್ತಾನೆ. ಆದರೆ ವಾಸ್ತವವಾಗಿ ಮುಂದೆ ಅದಕ್ಕಿಂತ ಕಮ್ಮಿಯಾಗುತ್ತದೆ. ಆದ್ದರಿಂದ ಅವನ ಭಾಷಣದ ವರದಿಗಳನ್ನು ಆ ಕಾಲದ ಪತ್ರಿಕೆಗಳಿಂದ ಹುಡುಕಿ ತೆಗೆದು ಅವನ್ನು ತಿದ್ದಿ ಆ ಪುಟಗಳನ್ನು ಪುನರ್ ಮುದ್ರಣ ಮಾಡಲಾಗುತ್ತದೆ!
ಪ್ರಿಯ ಓದುಗರೇ ಕ್ಷಮಿಸಿ. ಯಾವುದೋ ಕಾಲದಲ್ಲಿ ಆರ್‌ವೆಲ್ ಬರೆದ ಕಾಲ್ಪನಿಕ ಕತೆಯನ್ನು ನಿಮಗೆ ವಿವರಿಸಿದ್ದೇನೆ. ಖಂಡಿತ ಇದಾವುದು ಭಾರತದಲ್ಲಿ ನಡೆದಿಲ್ಲ ಹಾಗೂ ನಡೆಯುವುದಿಲ್ಲ. ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವವಾದಿ ದೇಶದಲ್ಲಿ ಇದಾವುದು ನಡೆಯುವುದಿಲ್ಲ. ನಡೆಯಬಹುದು ಎನ್ನುವ ದೇಶದ್ರೋಹಿಗಳನ್ನು ನೋಡಿಕೊಳ್ಳೋಣ.

ನೀವು 'ಬಿಗ್ ಬ್ರದರ್' ವಿರುದ್ಧ "ಥಾಟ್ ಕ್ರೈಂ' ಮಾಡುತ್ತಿದ್ದೀರಿ! ಹುಷಾರ್!!




ಪ್ರಸಿದ್ಧ ಇಂಗ್ಲೀಷ್ ಕಾದಂಬರಿಕಾರನಾದ ಜಾರ್ಜ್ ಆರ್ ವೆಲ್ 1984 ಎನ್ನುವ ಶೀರ್ಷಿಕೆಯ ಕಾದಂಬರಿಯನ್ನು 1949 ರಲ್ಲಿ ಬರೆದ. ಅದು ಪ್ರಕಟವಾದಾಗಿನಿಂದ ಇಂದಿನವರೆಗೆ ಸರ್ವಾಧಿಕಾರಿ ವ್ಯವಸ್ಥೆಯ ಅತ್ಯಂತ ಭೀತಿ ಹುಟ್ಟಿಸುವ ಕಲ್ಪನೆಯಾಗಿ ಪರಿಗಣಿಸಲ್ಪಟ್ಟಿದೆ. ಈ ಕಲ್ಪನೆಯನ್ನು ಹೋಲುವ ರಾಜಕೀಯ ವ್ಯವಸ್ಥೆ ಇಲ್ಲಿಯವರೆಗೆ ಅಸ್ತಿತ್ವಕ್ಕೆ ಬಂದಿದೆಯೆ ಎಂದರೆ ಪ್ರಾಯಶಃ ಇಲ್ಲವೆನ್ನಬಹುದು. ಆರ್‌ವೆಲ್ ಅದನ್ನು ಬರೆದಿದ್ದು ಭವಿಷ್ಯದ ಕರಾಳ ಕಲ್ಪನೆಯ ಮಾದರಿಯಲ್ಲಿ (dystopia). ಆದರೆ ಅದು ಸಂಪೂರ್ಣ ಕಾಲ್ಪನಿಕವೂ ಅಲ್ಲ. ಭಾರತದಲ್ಲಿ ಹುಟ್ಟಿದ ಆರ್‌ವೆಲ್ ಬ್ರಿಟಿಷ್ ಸರಕಾರದ ಸೇವೆಯಲ್ಲಿದ್ದು ವಸಾಹತುಶಾಹಿಯ ಕ್ರೌರ್ಯವನ್ನು, ಅಸಂಗತತೆಯನ್ನು ನೋಡಿ, ಅನುಭವಿಸಿದ್ದ. ಅಲ್ಲದೆ ಅನಾಮಧೇಯ ಅಲೆಮಾರಿಯ ಹಾಗೆ ಅತ್ಯಂತ ಗತಹೀನರೊಂದಿಗೆ ಇದ್ದು ಅನುಭವಿಸಿದ್ದ. ಅವನ ಕಾಲದ ಸಿದ್ಧಾಂತಗಳು ಹಾಗೂ ರಾಜಕೀಯ ವ್ಯವಸ್ಥೆಗಳ ಬಗ್ಗೆ ಅತ್ಯಂತ ಸೂಕ್ಷ್ಮವಾದ ಅಷ್ಟೇ ಕಟುವಾದ ವಿಮರ್ಶಕನೂ ಆಗಿದ್ದ. ವಾಸ್ತವ, ಸುಳ್ಳು, ಹಿಂಸೆ, ಭಾಷೆ ಇವೆಲ್ಲವುಗಳ ಬಗ್ಗೆ ಚಿಂತಿಸಿ ಬರೆದಿದ್ದ. ಅವನು ಬರೆದ 'Politics and the English Language' ಎನ್ನುವ ಲೇಖನವು ಇಂದಿಗೂ ರಾಜಕೀಯದ ಒತ್ತಡದಲ್ಲಿ ಭಾಷೆಯು ಸುಳ್ಳುಗಳ ವಾಹಕವಾಗುವುದರ ಅತ್ಯಂತ ಹರಿತವಾದ ವಿಶ್ಲೇಷಣೆಯಾಗಿದೆ.

ರಶಿಯಾದ ರಾಜಕೀಯ ಸ್ಥಿತ್ಯಂತರಗಳನ್ನು ಕಂಡು ಅವನು ಬರೆದ Animal Farm (ಪ್ರಾಣಿ ಪ್ರಭುತ್ವ) ಕಾದಂಬರಿಯು ಆ ಕಾಲದ ರಾಜಕೀಯದ ಅತ್ಯಂತ ಕಟುವಾದ ವಿಡಂಬನೆಯಾಗಿದೆ. ನಮ್ಮ ದೇಶದಲ್ಲಿ ಸಂವಿಧಾನವನ್ನು ಬದಲಾಯಿಸುವ ಬಯಸುವವರು ಈಗ ಕಣ್ಣು ಬಿಡುತ್ತಿದ್ದಾರೆ. ಆದರೆ ಈ ಕಾದಂಬರಿಯಲ್ಲಿ ಪ್ರಾಣಿಗಳೆಲ್ಲಾ ಸೇರಿ ತಮ್ಮ ಪ್ರಜಾಪ್ರಭುತ್ವವನ್ನು ರಚಿಸಿಕೊಂಡು ಅದಕ್ಕಾಗಿ ಒಂದು ಸಂವಿಧಾನವನ್ನು ರಚಿಸಿ, ಅದರ ಪ್ರಮುಖ ಆಶಯವಾಗಿ "All animals are equal" ಎಂದು ರೂಪಿಸಿಕೊಳ್ಳುತ್ತವೆ. ಆದರೆ ಸಮಾನತೆಯನ್ನು ಸಹಿಸದ ಒಂದು ವರ್ಗ (ಕಾದಂಬರಿಯಲ್ಲಿ ಇದು ಹಂದಿಗಳ ವರ್ಗ) "All animall are equal; but some animals are more equal than others" ಎಂದು ತಿದ್ದುಪಡಿಮಾಡುತ್ತವೆ! ಖಂಡಿತವಾಗಿಯೂ ಭಾರತದ ಸಂವಿಧಾನವನ್ನು ಬದಲಾಯಿಸಲು ಹೊರಟವರು ತಾವು 'more equal' ಎಂದು ಸಾಧಿಸಲು ಹೊರಟಿದ್ದಾರೆ. ಶೋಷಣೆ, ಅಸಮಾನತೆಗಳಿಂದ ಹೊರಬರಲು ಪ್ರಾಣಿಗಳು ತಾವೇ ಕಟ್ಟಿಕೊಂಡಿದ್ದ ಪ್ರಜಾಪ್ರಭುತ್ವವು ಕ್ರಮೇಣವಾಗಿ ಕ್ರೂರ ಅಸಮಾನತೆಗಳುಳ್ಳ ಸರ್ವಾಧಿಕಾರಿ ರಾಜ್ಯವಾಗಿ ಬದಲಾಗುತ್ತದೆ. ಈ ಪುಟ್ಟ ಕಾದಂಬರಿಯು 20ನೇ ಶತಮಾನದಿಂದ ಈವರೆಗೆ ಜಗತ್ತಿನ ಪ್ರಜಾಪ್ರಭುತ್ವಗಳ ಹಣೆಬರಹವನ್ನು ಕರಾರುವಾಕ್ಕಾಗಿ ವ್ಯಾಖ್ಯಾನಿಸಿದೆ.

ಆದರೆ 1984 ಮತ್ತೆ ಸರ್ವಾಧಿಕಾರವು ತರಬಹುದಾದ ಭಯಂಕರ ಸ್ಥಿತಿಗಳನ್ನು ಬೆಚ್ಚಿ ಬೀಳುವಂತೆ ಕಲ್ಪಿಸಿಕೊಡುತ್ತದೆ. ಕಾದಂಬರಿಯು ಭವಿಷ್ಯದಲ್ಲಿ ನಡೆಯುವಂತವು. ಅಷ್ಟರಲ್ಲಿ ಎರಡು ಮಹಾಯುದ್ಧಗಳು ಮುಗಿದಿವೆ. ಜಗತ್ತು ಮೂರು ಪ್ರಬಲ ಘಟಕಗಳಲ್ಲಿ ವಿಭಜನೆಯಾಗಿದೆ. ಕತೆ ನಡೆಯುವುದು Oceania ಎನ್ನುವ ಪ್ರಭುತ್ವದಲ್ಲಿ. ಕಾದಂಬರಿಯ ನಾಯಕ ವಿನ್‌ಸ್ಟನ್ ಸ್ಮಿತ್ ಕೆಲಸ ಮಾಡುತ್ತಿರುವುದು ಈ ಪ್ರಭುತ್ವದ ಒಂದು ಕಛೇರಿಯಲ್ಲಿ. ಅವನ ಕೆಲಸವೆಂದರೆ ಭೂತಕಾಲದ ವರದಿಗಳನ್ನು ತಿದ್ದಿ ಬದಲಾಯಿಸುವುದು! ಏಕೆಂದರೆ ಈ ಪ್ರಭುತ್ವದ ನಾಯಕ Big Brother ಹಾಗೂ ಅವನ ಪಕ್ಷ (The Party)ದ ಪ್ರಕಾರ ಭೂತಕಾಲದ ನೆನಪುಗಳನ್ನು, ಸಾಕ್ಷಿಗಳನ್ನು ತಿದ್ದಿ ಸಂಪಾದಿಸಬೇಕು. ಉದಾಹರಣೆಗೆ ವರ್ಷಗಳ ಹಿಂದೆ Big Brother ತನ್ನ ಭಾಷಣದಲ್ಲಿ ನಾಡಿನ ಪ್ರಗತಿ ಶೇಕಡಾ ಇಷ್ಟು ಎಂದು ಹೇಳಿರುತ್ತಾನೆ. ಆದರೆ ವಾಸ್ತವವಾಗಿ ಮುಂದೆ ಅದಕ್ಕಿಂತ ಕಮ್ಮಿಯಾಗುತ್ತದೆ. ಆದ್ದರಿಂದ ಅವನ ಭಾಷಣದ ವರದಿಗಳನ್ನು ಆ ಕಾಲದ ಪತ್ರಿಕೆಗಳಿಂದ ಹುಡುಕಿ ತೆಗೆದು ಅವನ್ನು ತಿದ್ದಿ ಆ ಪುಟಗಳನ್ನು ಪುನರ್ ಮುದ್ರಣ ಮಾಡಲಾಗುತ್ತದೆ! ಇತ್ತೀಚೆಗೆ ನಮ್ಮ ದೇಶದಲ್ಲಿ ಈ ಹಿಂದೆ ನಿಜವಾದ ಉಆಕ ಎಷ್ಟಿತ್ತು ಎನ್ನುವುದನ್ನು ಈಗ ಕಂಡುಹಿಡಿದು ಭೂತಕಾಲವನ್ನು ತಿದ್ದಲಾಗುತ್ತಿದೆಯಲ್ಲವೆ. ಅಂಥದೇ ಈ ಕಾದಂಬರಿಯಲ್ಲಿ ನಡೆಯುತ್ತದೆ. ಹಾಗೆಯೆ Big Brother ನ ಸಂಗಾತಿಯಾದವನು ಅವನ ಶತ್ರುವಾಗಿಬಿಟ್ಟಿದ್ದರಿಂದ ಹಿಂದಿನ ಎಲ್ಲಾ ಫೋಟೋಗಳನ್ನು ವರದಿಗಳನ್ನು ನಾಶಮಾಡಿ ಅವನು ಮೊದಲಿನಿಂದಲೂ ನಾಯಕನ ಶತ್ರುವಾಗಿದ್ದ ಎಂದು ಗತಕಾಲದ ಎಲ್ಲಾ ದಾಖಲೆಗಳನ್ನು ತಿದ್ದಲಾಗುತ್ತದೆ.

ಇಂಥ ಅಸಂಗತ ಕೆಲಸದಲ್ಲಿ ತೊಡಗಿರುವವರನ್ನು ಪ್ರಭುತ್ವದ 24 ಗಂಟೆಯೂ Telescreen ನಿಂದ ನೋಡುತ್ತ ದಾಖಲಿಸುತ್ತಾ ಇರುತ್ತದೆ. ಎಂಥಾ ಸೂಕ್ಷ್ಮ ತಂತ್ರಜ್ಞಾನವೆಂದರೆ ನಿಮ್ಮ ಮಾತುಗಳನ್ನಲ್ಲ, ನಿಮ್ಮ ಕಣ್ಣ ರೆಪ್ಪೆ, ಎದೆಬಡಿತ ಇವುಗಳ ದಾಖಲೆ ಇಟ್ಟು ನೀವೇನಾದರು ಮನಸ್ಸಿನೊಳಗೇ ಪ್ರಭುತ್ವದ ವಿರುದ್ಧ ಒಂದು ಕ್ಷಣ ಯೋಚಿಸಿದರಾ ಎನ್ನುವುದನ್ನು ಕಂಡು ಹಿಡಿಯುತ್ತದೆ. ಇದಕ್ಕೆ Thought Crime ಎಂದು ಕರೆಯುತ್ತಾರೆ. ನಿಮ್ಮ ಸುತ್ತಲೂ ಇರುವವರು thought police ಆಗಿರಬಹುದು. ಈ ಟೆಲಿಸ್ಕ್ರೀನ್ ಮತ್ತು ದೊಡ್ಡ ಫಲಕಗಳಲ್ಲಿ Big Brother is watching you! ಎನ್ನುವ ಸಂದೇಶವಿದೆ. ಯಾವುದನ್ನು ವಿದ್ವಾಂಸರು surrveillance society ಎಂದು ಕರೆಯುತ್ತಾರೇ ಅದರ ಪರಕಾಷ್ಠೆ ಇಲ್ಲಿದೆ. ಇದನ್ನು ಅಸಂಭವ ಎನ್ನಲಾಗದು.

ಕಳೆದ ವಾರವಷ್ಟೆ ನಮ್ಮ ಸರಕಾರವು ತನ್ನ 10 ಘಟಕಗಳು ಯಾವುದೇ ವ್ಯಕ್ತಿಯ ಕಂಪ್ಯೂಟರ್ ಗಳನ್ನು, ಅದರಲ್ಲಿ ಮಾಹಿತಿಯನ್ನು ಪಡೆಯಬಲ್ಲದು ಎಂದು ಫರ್ಮಾನು ಹೊರಡಿಸಿದೆ. ಇದು ಸರ್ವಾಧಿಕಾರದ ಖಚಿತವಾದ ಹೆಜ್ಜೆಯಲ್ಲವೆ! ಆರ್‌ವೆಲ್ ಅತಿಶಯೋಕ್ತಿಯನ್ನು ಬಳಸುವುದು ನಮ್ಮನ್ನು ಎಚ್ಚರಿಸುವುದಕ್ಕಾಗಿ. ಯಾವುದು ಅತಿಶಯ, ಅಸಂಭವವೆಂದುಕೊಳ್ಳುತ್ತೇವೆಯೋ ಅದು ನಮ್ಮ ರಾಜಕೀಯದ ವಾಸ್ತವಗಳ ಬೀಜಸ್ವರೂಪವಾಗಿರುತ್ತದೆ.


ಕೃಪೆ: ಪಿ. ಮಹಮ್ಮದ್

ಈ ಪ್ರಭುತ್ವವು ಅಧಿಕಾರದಲ್ಲಿರುವುದು ತನ್ನ ಪ್ರಜೆಗಳಿಗಾಗಿ ಕಾಲ್ಪನಿಕ ಶತ್ರುಗಳನ್ನು ಸೃಷ್ಟಿಸಿ ಅವರು ಆ ಶತ್ರುಗಳ ದ್ವೇಷದಲ್ಲಿಯೇ ಅತಾರ್ಕಿಕವಾಗಿ ಮುಳುಗಿ ಹೋಗಿ ತಮ್ಮ ಸ್ವಂತದ ಪರಿಸ್ಥಿತಿಗಳನ್ನು ಮರೆಯುವಂತೆ ಮಾಡುವುದರಿಂದ ಉದಾಹರಣೆಗೆ ಎಲ್ಲಾ ಕಚೇರಿಗಳಲ್ಲಿ "Hate" ಎನ್ನುವ ಹಲವು ನಿಮಿಷಗಳ ಕಾರ್ಯಕ್ರಮವು ಟೆಲಿಸ್ಕ್ರೀನ್ ನಿಂದ ಬಿತ್ತರವಾಗುತ್ತದೆ. ಆಗ ಪರದೆಯಲ್ಲಿ Big Brother ನ ಶತ್ರುವಾದ ಗೋಲ್ಡ್‌ಸ್ಟೈನ್ ನ ಚಿತ್ರತೋರಿಸಲಾಗುತ್ತದೆ. ಆಗ ಎಲ್ಲರು ಕಡ್ಡಾಯವಾಗಿ ಆ ಚಿತ್ರದ ಮೇಲೆ ತಮ್ಮ ದ್ವೇಷವನ್ನು ತೋರಿಸಲೇಬೇಕು. ಬಯ್ಗುಳದ ಮೂಲಕ, ಮುಖದ ಭಾವದ ಮೂಲಕ ಇತ್ಯಾದಿ. ಒಂದು ಕ್ಷಣ ಹಾಗೆ ಮಾಡದಿದ್ದರೆ ಅದು Thought-Crime. ಹಾಗೆಯೆ ಇಡೀ ದೇಶ ಒಂದು ವಾರದವರೆಗೆ 'Hate week' ಅನ್ನು ಆಚರಿಸುತ್ತದೆ. ದೇಶದ ಶತ್ರುವಾದ Eurasia ದ ಬಂಧಿತ ಸೈನಿಕರ ವಿರುದ್ಧ ದೇಶದ ಎಲ್ಲರೂ ಸಾರ್ವಜನಿಕವಾಗಿ ತಮ್ಮ ದ್ವೇಷವನ್ನು ತೋರಿಸಲೇಬೇಕು. ಈ ಕಾರ್ಯಕ್ರಮದಲ್ಲಿ ಅತ್ಯಂತ ಉಗ್ರ ವಾಗ್ಮಿಯೊಬ್ಬನು ಶತ್ರು ದೇಶದ ಹೇಯ ಕೃತ್ಯಗಳನ್ನು ವರ್ಣಿಸುತ್ತಾ ಜನರನ್ನು ಭಾವೋದ್ರೇಕದ ಹುಚ್ಚಿಗೆ ತಳ್ಳುತ್ತಾನೆ. ಆದರೆ ಅವನು ಭಾಷಣ ಮಾಡುತ್ತಿರುವಾಲೇ ಪಾರ್ಟಿಯಿಂದ ಒಂದು ಚೀಟಿ ಅವನಿಗೆ ಬರುತ್ತದೆ. ಅದರ ಪ್ರಕಾರ ಅವನು ತನ್ನ ವಾಕ್ಯವನ್ನೂ ಬದಲಿಸದೇ ನಮ್ಮ ದೇಶದ ಶತ್ರುಇಭಣಘುಚಿ ಎಂದು ಬದಲಾಯಿಸಿ ಅದೇ ಧಾಟಿಯಲ್ಲಿ ಮುಂದುವರೆಯುತ್ತಾನೆ! ಅಂದ ಹಾಗೆ ನಮ್ಮ ಪಕ್ಕದ ದೇಶವು ಇಲ್ಲದಿದ್ದರೆ ನಮ್ಮ ಮಾಧ್ಯಮದ ಚಾನೆಲ್ ಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದವು ಅಲ್ಲವೆ? ಅಂದ ಹಾಗೆ ಈ ಉಗ್ರ ವಾಗ್ಮಿಯ ಸಹೋದರನನ್ನು ದಿನವೂ ಸಾಯಂಕಾಲ ಒಂದು ಚಾನೆಲ್ ನಲ್ಲಿ ನೋಡುತ್ತೇವೆಯಲ್ಲವೆ?

1984 ಅತ್ಯಂತ ಕರಾಳವಾದ, ನಿರಾಸೆಗಳ ಭೀಕರ ವಾತಾವರಣದ ಕೃತಿಯಾಗಿದೆ. ಇಲ್ಲಿ ಸ್ನೇಹ, ಸಂಬಂಧ, ಪ್ರೀತಿ ಇವುಗಳನ್ನು ಮುಗಿಸಿಬಿಡಲಾಗಿದೆ. ಎಲ್ಲರು ಇಲ್ಲಿ ಪಾರ್ಟಿಗಾಗಿ ಇತರ ಮನುಷ್ಯ ಜೀವಿಗಳನ್ನು ಮುಗಿಸಲೆಂದೇ ಕಾಯ್ದಿದ್ದಾರೆ. ಪ್ರತಿರೋಧ ಸಾಧ್ಯವೆಂದು ಎಲ್ಲಿಯೋ ನಂಬಿಕೊಂಡಿದ್ದ ಸ್ಮಿತ್ ಆ ನಂಬಿಕೆಯಿಂದಲೇ ಪ್ರಭುತ್ವದ ಬೇಟೆಗೆ ಸಿಕ್ಕುತ್ತಾನೆ.

ಈ ಪ್ರಭುತ್ವವನ್ನು ಮಾಡುತ್ತಿರುವ ಕೆಲಸಗಳು ಹೀಗಿವೆ. ಒಂದು, ಹೊಸಭಾಷೆಯನ್ನೇ Newspeak ಹೆಸರಿನಲ್ಲಿ ಕಂಡುಹಿಡಿಯಲಾಗಿದೆ. ಇದರಲ್ಲಿ ಇಂದಿನಿಂದ ಜಾರಿಗೆ ಬಂದಿರುವ ರೇಶನ್ ಕಡಿತದಿಂದ "ಪ್ರಜೆಗಳು ಆನಂದದಿಂದ ಮನತುಂಬಿ Big Brother ಗೆ ತಮ್ಮ ಕೃತಜ್ಞತೆ ಸಲ್ಲಿಸುತ್ತಾರೆ". "ಸಣ್ಣ ಮಾರ್ಪಾಡು" ಎಂದರೆ ಹಲವು ನೂರು ವ್ಯಕ್ತಿಗಳನ್ನು ಕೊಲ್ಲಲಾಗಿದೆಯೆಂದು. ಇನ್ನೊಂದು ಕೆಲಸವೆಂದರೆ ಭಾಷೆಗೇ ಶಸ್ತ್ರಚಿಕಿತ್ಸೆ ಮಾಡಿಬಿಡುವುದು. ಮೂರನೇಯದೆಂದರೆ ಎಲ್ಲ ನೆನಪುಗಳನ್ನು memory Hole ಎನ್ನುವ ರಂಧ್ರಗಳಲ್ಲಿ ಹಾಕಿ ಸಂಪೂರ್ಣ ನಾಶಮಾಡಿಬಿಡುವುದು. ಅಂದ ಹಾಗೆ ಈ ಪ್ರಭುತ್ವದ ಧ್ಯೇಯ ವಾಕ್ಯಗಳು ಹೀಗಿವೆ: "ಅಜ್ಞಾನವೇ ಬಲ". "ಯುದ್ಧವೇ ಶಾಂತಿ".

ಪ್ರಿಯ ಓದುಗರೇ ಕ್ಷಮಿಸಿ. ಯಾವುದೋ ಕಾಲದಲ್ಲಿ ಆರ್‌ವೆಲ್ ಬರೆದ ಕಾಲ್ಪನಿಕ ಕತೆಯನ್ನು ನಿಮಗೆ ವಿವರಿಸಿದ್ದೇನೆ. ಖಂಡಿತ ಇದಾವುದು ಭಾರತದಲ್ಲಿ ನಡೆದಿಲ್ಲ ಹಾಗೂ ನಡೆಯುವುದಿಲ್ಲ. ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವವಾದಿ ದೇಶದಲ್ಲಿ ಇದಾವುದು ನಡೆಯುವುದಿಲ್ಲ. ನಡೆಯಬಹುದು ಎನ್ನುವ ದೇಶದ್ರೋಹಿಗಳನ್ನು ನೋಡಿಕೊಳ್ಳೋಣ.



2019:
ಮಹಾ ಸಮರಕ್ಕೆ ಸನ್ನದ್ಧರಾಗೋಣ

2018 ಒಂದೆಡೆಯಲ್ಲಿ ಮೋದಿ ಸರಕಾರದ ಸಂಪೂರ್ಣ ವೈಫಲ್ಯವನ್ನು ದಾಖಲಿಸಿದ ವರ್ಷವಾದರೆ, ಇನ್ನೊಂದೆಡೆಯಲ್ಲಿ ಕಾರ್ಮಿಕ ವರ್ಗ ಮತ್ತು ದುಡಿಯುವ ಜನತೆಯ ಇತರ ವಿಭಾಗಗಳ ಅವಿರತ ಹೋರಾಟಗಳು ಹಾಗೂ ಚಳವಳಿಗಳು ಎದ್ದು ಬಂದ ವರ್ಷವೂ ಆಗಿದೆ, 2019ರ ಲೋಕಸಭೆ ಚುನಾವಣೆ 1977ರ ಸಂಸದೀಯ ಚುನಾವಣೆಗಳ ನಂತರದಲ್ಲಿ ದೇಶದ ಅತಿ ಪ್ರಮುಖ ಚುನಾವಣೆ ಆಗಲಿದೆ. ಇದು ಕೇವಲ ಒಂದು ಸರಕಾರವನ್ನು ಸೋಲಿಸುವ ಚುನಾವಣೆಯಲ್ಲ, ಸಂವಿಧಾನ, ಜಾತ್ಯತೀತತೆ ಮತ್ತು ಸ್ವತಃ ಸಂಸದೀಯ ಪ್ರಜಾಪ್ರಭುತ್ವವನ್ನು ಉಳಿಸುವ ಹಾಗೂ ರಕ್ಷಿಸುವ ಹೋರಾಟವಾಗಲಿದೆ. ಈ ದೊಡ್ಡ ಕಾರ್ಯಭಾರವನ್ನು ಕೈಗೆತ್ತಿಕೊಳ್ಳುವ ಪ್ರತಿಜ್ಞೆಯೊಂದಿಗೆ ನಾವು ಹೊಸ ವರ್ಷವನ್ನು ಬರಮಾಡಿಕೊಳ್ಳಬೇಕಾಗಿದೆ.





*** ಪ್ರಕಾಶ್ ಕಾರಟ್**

ನಾವೆಲ್ಲಾ 2018ರ ಕೊನೆಯನ್ನು ತಲುಪುತ್ತಿದ್ದಂತೆ ಇದು ಆರ್ಥಿಕ ರಂಗದಲ್ಲಿ ಮೋದಿ ಸರಕಾರದ ಸಂಪೂರ್ಣ ವೈಫಲ್ಯ ಹಾಗೂ ಅದರ ಪರಿಣಾಮವಾಗಿ ಜನತೆಯ ಮೇಲೆ ಹೊರೆಗಳು ಜಾಸ್ತಿಯಾದ ವರ್ಷವಾಗಿ ಸ್ಪಷ್ಟವಾಗಿ ಎದ್ದು ಕಾಣುತ್ತಿದೆ. ಈ ಸರಕಾರದ ಚಮಚಾಶಾಹಿಯನ್ನು ಹಾಗೂ ಆಡಳಿತದ ಭ್ರಷ್ಟತೆಯನ್ನು ಕೂಡ ಈ ವರ್ಷ ಸ್ಪಷ್ಟವಾಗಿ ಬೆಚ್ಚಿಟ್ಟಿದೆ. ಸಂವಿಧಾನವನ್ನು ಹಾಗೂ ನಾಗರಿಕರ ಮೂಲಭೂತ ಹಕ್ಕುಗಳನ್ನು ಬುಡಮೇಲು ಮಾಡುವಲ್ಲಿ ಹಿಂದುತ್ವ ಶಕ್ತಿಗಳ ಛಿದ್ರಕಾರಿ ಅಜೆಂಡಾವನ್ನು ಕೂಡ ಈ ವರ್ಷ ಬೆತ್ತಲುಗೊಳಿಸಿದೆ.

ಆರ್ಥಿಕತೆಯನ್ನು ನಿರ್ವಹಿಸುವಲ್ಲಿನ ವೈಫಲ್ಯವೇ ಮೋದಿ ಸರಕಾರದ ಅತ್ಯಂತ ದೊಡ್ಡ ವೈಫಲ್ಯವಾಗಿದೆ. ಕೃಷಿ ಬಿಕ್ಕಟ್ಟು ಆಳಗೊಂಡಿದ್ದು ರೈತರ ಹಾಗೂ ಗ್ರಾಮೀಣ ಬಡವರ ಹತಾಶೆ ವ್ಯಾಪಕಗೊಂಡಿದೆ. ಸ್ವಾಮಿನಾಥನ್ ಆಯೋಗದ ಸೂತ್ರದ ಪ್ರಕಾರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡುವ ಮೋದಿ ಸರಕಾರದ ಘೋಷಣೆ ಪೊಳ್ಳೆಂಬುದು ಸಾಬೀತಾಗಿದೆ. 2022ರೊಳಗೆ ರೈತರ ಆದಾಯ ದುಪ್ಪಟ್ಟುಗೊಳಿಸುವ ಮಾತುಗಳು ಸಾಲದ ಬಲೆಯಲ್ಲಿ ಸಿಲುಕಿರುವ ರೈತರಿಗೆ ಒಂದು ಕ್ರೂರ ವ್ಯಂಗ್ಯವಾಗಿ ಕಾಣಿಸುತ್ತಿದೆ.

2014ರಲ್ಲಿ ನೀಡಿದ ಅಚ್ಛೇ ದಿನ್ ಆಶ್ವಾಸನೆಯ ಭಾಗವಾಗಿ ಐದು ವರ್ಷಗಳ ಅವಧಿಯಲ್ಲಿ ಹತ್ತು ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆಯನ್ನು ನೀಡಲಾಗಿತ್ತು. 2018ರ ಮೇನಲ್ಲಿ ಮೋದಿ ಸರಕಾರದ ಆಡಳಿತದ ನಾಲ್ಕು ವರ್ಷ ಪೂರ್ಣಗೊಳ್ಳುವ ಹೊತ್ತಿಗೆ ಇದು ಇನ್ನೊಂದು ರಮ್ಯ ಕಟ್ಟು ಕಥೆಯೆಂಬುದು ಯುವಜನರಿಗೆ ಮನದಟ್ಟಾಗಿದೆ. ಯುವಜನರು ಹಾಗೂ ಉನ್ನತ ಶಿಕ್ಷಿತ ಭಾರತೀಯರಲ್ಲಿ ನಿರುದ್ಯೋಗ ಪ್ರಮಾಣ ಕಳೆದ 20 ವರ್ಷಗಳಲ್ಲೇ ಅಧಿಕವಾದುದು ಎಂದು ಅಧ್ಯಯನವೊಂದು ಬಯಲುಮಾಡಿದೆ. ನಿರುದ್ಯೋಗದ ಪ್ರಮಾಣವನ್ನು ಮುಚ್ಚಿಡುವ ಉದ್ದೇಶದಿಂದ ಲೇಬರ್ ಬ್ಯೂರೋದ ವಾರ್ಷಿಕ ನಿರುದ್ಯೋಗ ಸಮೀಕ್ಷೆಯನ್ನು ಬಿಡುಗಡೆ ಮಾಡುವುದನ್ನು ಸರಕಾರ ತಡೆಹಿಡಿದರೂ 2018ರ ವರ್ಷದಾದ್ಯಂತ ಉದ್ಯೋಗ ರಹಿತ ಬೆಳವಣಿಗೆ ಎನ್ನುವುದು ಒಂದು ಕಟು ವಿದ್ಯಮಾನವಾಗಿ ಬಿಟ್ಟಿದೆ.

ಬ್ಯಾಂಕಿಂಗ್ ವಲಯದ ಬಿಕ್ಕಟ್ಟು ಇನ್ನೊಂದು ತೀವ್ರಗೊಂಡ ಬಿಕ್ಕಟ್ಟಾಗಿದೆ. ಬ್ಯಾಂಕ್‌ಗಳ ವಸೂಲಾಗದ ಸಾಲ (ಎನ್‌ಪಿಎ)ದ ಪ್ರಮಾಣ ಮಂಜೂರು ಮಾಡಲಾದ ಒಟ್ಟು ಸಾಲದ ಶೇಕಡಾ 12ರಷ್ಟನ್ನು ಸಮೀಪಿಸಿದೆ. 2017–18ನೇ ಆರ್ಥಿಕ ವರ್ಷದಲ್ಲಿ 1.44 ಲಕ್ಷ ಕೋಟಿ ರೂಪಾಯಿಗಳಷ್ಟು ಕೆಟ್ಟ ಸಾಲವನ್ನು (ಎನ್‌ಪಿಎ) ದೊಡ್ಡ ಸಾಲಗಾರರಿಂದ ವಸೂಲಿ ಮಾಡಲು ಯಾವುದೇ ಗಂಭೀರ ಪ್ರಯತ್ನಗಳನ್ನು ಮಾಡದೆಯೇ ವಜಾ ಮಾಡಲಾಗಿದೆ.

ದೊಡ್ಡ ವಾಣಿಜ್ಯೋದ್ಯಮಿಗಳನ್ನು ಭಾರೀ ಸಾಲಗಳನ್ನು ಮರುಪಾವತಿಸುವುದರಿಂದ ಪಾರು ಮಾಡುವುದು ಚಮಚಾ ಬಂಡವಾಳಶಾಹಿಯ ಒಂದು ಅಂಶವಾದರೆ, ಆಫ್‌ಸೆಟ್ ಗುತ್ತಿಗೆ ಮೂಲಕ ಅನಿಲ್ ಅಂಬಾನಿ ಕಂಪೆನಿ ಪಡೆದ ಭಾರೀ ವ್ಯವಹಾರವಾದ ರಫೆಲ್ ವ್ಯವಹಾರ ಚಮಚಾ ಬಂಡವಾಳಶಾಹಿಯ ಅತಿ ಕೆಟ್ಟ ಉದಾಹರಣೆಯಾಗಿದೆ. 2016ರಲ್ಲಿ ರಫೆಲ್ ಒಪ್ಪಂದಕ್ಕೆ ಸಹಿ ಹಾಕಲಾಗಿತ್ತಾದರೂ ಇದರಲ್ಲಿನ ಹಗರಣ 2018ರಲ್ಲಿ ಬಯಲಿಗೆ ಬಂತು. ಡಸೋ ಕಂಪೆನಿಗೆ ಆಫ್‌ಸೆಟ್ ಪಾಲುದಾರರನ್ನು ಆಯ್ಕೆ ಮಾಡಲು ಮೋದಿ ಸರಕಾರ ನಿರ್ಧರಿಸಿದ್ದು ಹೇಗೆ ಎನ್ನುವುದನ್ನು ಫ್ರಾನ್ಸ್‌ನ ಮಾಜಿ ಅಧ್ಯಕ್ಷ ಫ್ರಾಂಕೊಯ್ ಹಾಲಾಂಡ್ ಬಯಲು ಮಾಡಿದಾಗ ಇದು ಮುನ್ನೆಲೆಗೆ ಬಂತು. ರಫೆಲ್ ಹಗರಣವು ನರೇಂದ್ರ ಮೋದಿಯ ಭ್ರಷ್ಟಾಚಾರ–ವಿರೋಧಿ ಹೋರಾಟಗಾರನೆಂಬ ಳಿದುಳಿದ ಪ್ರತಿಷ್ಠೆಯನ್ನೂ ಮಣ್ಣುಪಾಲು ಮಾಡಿತು..

ನೋಟು ಅಮಾನ್ಯೀಕರಣಕ್ಕೆ ಹಿಂದೆ ನೀಡಲಾಗಿದ್ದ ಎಲ್ಲಾ ಹುಸಿ ದಾವೆಗಳು ಈ ವರ್ಷ ಮಾರಣಾಂತಿಕ ಏಟನ್ನು ಅನುಭವಿಸಿದವು. 500 ಮತ್ತು 1000 ರೂಪಾಯಿ ನೋಟುಗಳ ವಾಪಸಾತಿ ಕಪ್ಪು ಹಣವನ್ನು ಹೊರತರಲು ದೊಡ್ಡ ಉಪಕ್ರಮ ಎಂದು ಮೋದಿ ದೊಡ್ಡದಾಗಿ ಟಾಂಟಾಂ ಮಾಡಿದ್ದರು. ನೋಟು ಅಮಾನ್ಯೀಕರಣದಿಂದ ಮೂರರಿಂದ ನಾಲ್ಕು ಲಕ್ಷ ಕೋಟಿ ರೂಪಾಯಿ ಕಪ್ಪು ಹಣವನ್ನು ನಾಶ ಮಾಡಲಾಗುವುದೆಂದು ಹೇಳಲಾಗಿತ್ತು. ಆದರೆ, 99.3 ಶೇಕಡಾ ನೋಟುಗಳನ್ನು ಬ್ಯಾಂಕ್‌ಗಳಲ್ಲಿ ಜಮಾ ಮಾಡಲಾಯಿತು ಎಂದು ಆರ್‌ಬಿಐ ತುಂಬಾ ವಿಳಂಬವಾಗಿ 2018ರ ಆಗಸ್ಟ್‌ನಲ್ಲಿ ಅಂತಿಮವಾಗಿ ಪ್ರಕಟಿಸಿತು. ಹೀಗಾಗಿ, ಮೋದಿ ಕಾರ್ಯಾಚರಣೆಯಿಂದಾಗಿ ಎಲ್ಲಾ ಕಪ್ಪು ಹಣ "ಬಿಳಿ" ಹಣವಾಗಿ ಪರಿವರ್ತನೆಗೊಂಡಿತು ಎಂದು ಯಾರಾದರೂ ಊಹಿಸಿಕೊಳ್ಳಬಹುದಾಗಿದೆ.

2018 ಸಂವಿಧಾನಿಕ ಸಂಸ್ಥೆಗಳು ಮತ್ತು ಸಾಂವಿಧಾನಿಕ ಮೌಲ್ಯಗಳ ಮೇಲೆ ಮೋದಿ ಸರಕಾರದ ದಾಳಿ ಉತ್ತುಂಗಕ್ಕೆ ತಲುಪಿದ ವರ್ಷವಾಗಿದೆ. ವರ್ಷದ ಆರಂಭದಲ್ಲಿ, ದೇಶದ ಮುಖ್ಯ ನ್ಯಾಯಾಧೀಶರ ಸ್ಥಾನದ ನಂತರದಲ್ಲಿರುವ ಸುಪ್ರೀಂ ಕೋರ್ಟ್‌ನ ನಾಲ್ವರು ಅತ್ಯಂತ ಹಿರಿಯ ನ್ಯಾಯಾಧೀಶರು ಒಂದು ಅಭೂತಪೂರ್ವ ಸುದ್ದಿಗೋಷ್ಠಿ ನಡೆಸಿ ಬಾಹ್ಯ ಪ್ರಭಾವದಿಂದ ನ್ಯಾಯಾಂಗದ ವಿಶ್ವಾಸಾರ್ಹತೆ ಹೇಗೆ ಕುಂದುತ್ತಿದೆ ಎಂಬುದಾಗಿ ಗಂಭೀರ ಕಳವಳ ವ್ಯಕ್ತಪಡಿಸಿದರು.

ವರ್ಷದ ಕೊನೆ ಭಾಗದಲ್ಲಿ ಸಿಬಿಐನ ನಿರ್ದೇಶಕರನ್ನು ಹಠಾತ್ತನೆ ತೆಗೆದು ಹಾಕಲಾಯಿತು. ಅವರ ಜಾಗದಲ್ಲಿ ಜೀ ಹುಜೂರ್ ವ್ಯಕ್ತಿಯನ್ನು ಕೂರಿಸಲು ಪ್ರಯತ್ನಿಸಲಾಯಿತು. ತನ್ನಲ್ಲಿರುವ ಮೀಸಲು ಹಣವನ್ನು ಸರಕಾರಕ್ಕೆ ನೀಡುವಂತೆ ರಿಸರ್ವ್ ಬ್ಯಾಂಕ್ ಮೇಲೆ ಸತತ ಒತ್ತಡ ಹೇರಿದ ಪರಿಣಾಮವಾಗಿ ಆರ್‌ಬಿಐ ಗವರ್ನರ್ ಊರ್ಜಿತ್ ಪಟೇಲ್ ರಾಜಿನಾಮೆ ನೀಡಿದರು.

ಆರ್‌ಎಸ್‌ಎಸ್–ಪರ ಸಿಬ್ಬಂದಿಗಳನ್ನು ಪ್ರಮುಖ ಸ್ಥಾನಗಳಲ್ಲಿ ನಿಯೋಜಿಸಲಾಯಿತು. ಸಿಬಿಐನ ಹಂಗಾಮಿ ನಿರ್ದೇಶಕ ನಾಗೇಶ್ವರ ರಾವ್ ವಿಷಮಯ ಹಿಂದುತ್ವ ಅಭಿಪ್ರಾಯಗಳ ಪ್ರಚಾರಕರೆನ್ನುವುದು ಗೊತ್ತಿರುವ ಸಂಗತಿ. ಮೇಘಾಲಯ ಹೈಕೋರ್ಟ್‌ನ ಒಬ್ಬ ನ್ಯಾಯಾಧೀಶ ಕೂಡ (ಸುದೀಪ್ ರಂಜನ ಸೇನ್) ಭಾರತವು ಹಿಂದೂರಾಷ್ಟ್ರ ಆಗಬೇಕಿತ್ತು ಎಂದು ಒಂದು ತೀರ್ಪಿನಲ್ಲಿ ಅಭಿಪ್ರಾಯ ಪಡುವ ಮಟ್ಟಕ್ಕೆ ಹೋಗಿದ್ದಾರೆ.

ಈ ವರ್ಷವೂ ಅಲ್ಪಸಂಖ್ಯಾತರು ಮತ್ತು ದಲಿತರ ಮೇಲೆ ನಿರಂತರ ದಾಳಿಗಳು ನಡೆದವು. ಮುಸ್ಲಿಂ ಜಾನುವಾರು ವ್ಯಾಪಾರಿಗಳನ್ನು ದೊಂಬಿ ದಾಳಿಗಳಲ್ಲಿ ಕೊಂದ ಹಲವು ಪ್ರಕರಣಗಳಾದ ಮೇಲೆ, ಮುಂದಿನ ಬಲಿಪಶು ಆಗಿದ್ದು ಉತ್ತರ ಪ್ರದೇಶದ ಬುಲಂದ್‌ಶಹರ್ ಜಿಲ್ಲೆಯ ಒಬ್ಬ ಪೊಲೀಸ್ ಅಧಿಕಾರಿ. ಒಂದು ಹಸುವ್ನು ಕೊಲ್ಲುವುದು ಒಬ್ಬ ಪೊಲೀಸ್ ಅಧಿಕಾರಿಯ ಹತ್ಯೆಗಿಂತ ಹೇಯವಾದುದು ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಆದಿತ್ಯನಾಥ ಹೇಳಿದ್ದಾರೆ. ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳ ಕಾನೂನನ್ನು ದುರ್ಬಲಗೊಳಿಸುವುದರ ವಿರುದ್ಧ ಎಪ್ರಿಲ್ 2ರಂದು ನಡೆದ ಬಂದ್ ವೇಳೆ ದಲಿತ ಪ್ರತಿಭಟನೆಕಾರರ ಮೇಲೆ ಎಸಗಿದ ದಬ್ಬಾಳಿಕೆ ಬಿಜೆಪಿಯ ದಲಿತ–ವಿರೋಧಿ ಮುಖವನ್ನು ಅನಾವರಣಗೊಳಿಸಿತು. ಪಿತೃಪ್ರಾಧಾನ್ಯದ ಕೋಮುವಾದಿ ಶಕ್ತಿಗಳು ವಿಷಮಯಗೊಳಿಸಿರುವ ಸನ್ನಿವೇಶದಲ್ಲಿ ಮಹಿಳೆಯರು ಹಾಗೂ ಬಾಲಕಿಯರ ಮೇಲಿನ ದೌರ್ಜನ್ಯಗಳು ಈ ವರ್ಷವೂ ನಿಲ್ಲದೆ ಮುಂದುವರಿದವು.

ಲೋಕಸಭೆ ಚುನಾವಣೆ ಸಮೀಪಿಸುತ್ತಿದ್ದಂತೆ ಆರ್‌ಎಸ್‌ಎಸ್–ಬಿಜೆಪಿ ಕೂಟ ಅಯೋಧ್ಯೆಯ ವಿವಾದಿತ ಜಾಗದಲ್ಲಿ ರಾಮ ಮಂದಿರ ನಿರ್ಮಿಸಬೇಕೆಂಬ ಬೇಡಿಕೆಯನ್ನು ತೀವ್ರಗೊಳಿಸಿದೆ. ಈ ಪ್ರಚಾರ ಹಾಗೂ ಇಂಥದ್ದೇ ಇನ್ನಿತರ ವಿಭಜನಕಾರಿ ವಿಚಾರಗಳು ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಾಗಿ ಮುನ್ನೆಲೆಗೆ ಬರಲಿದ್ದು ಬಿಗುವು ಸೃಷ್ಟಿಸುವುದು ಹಾಗೂ ಕೋಮುವಾದಿ ಧ್ರುವೀಕರಣ ಮಾಡುವುದು ಅದರ ಉದ್ದೇಶವಾಗಿದೆ.

ಈ ಪ್ರಯತ್ನಗಳನ್ನು ತಡೆಯಬಹುದಾಗಿದೆ ಹಾಗೂ ವಿಫಲಗೊಳಿಸಬಹುದಾಗಿದೆ. ಕಳೆದ ವರ್ಷವು ಇನ್ನೊಂದು ಕಾರಣಕ್ಕೂ ಮಹತ್ವದ್ದಾಗಿದೆ. ರೈತರು, ಕಾರ್ಮಿಕ ವರ್ಗ ಮತ್ತು ದುಡಿಯುವ ಜನತೆಯ ಇತರ ವಿಭಾಗಗಳ ಅವಿರತ ಹೋರಾಟಗಳು ಹಾಗೂ ಚಳವಳಿಗಳು ಈ ವರ್ಷ ಎದ್ದು ಬಂದವು.. 2017ರ ಉತ್ತರಾರ್ಧದಲ್ಲಿ ಆರಂಭವಾದ ಚಳವಳಿಗಳನ್ನು ಅವು ಮುಂದುವರಿಸಿದವು. ಮಹಾರಾಷ್ಟ್ರದ ನಾಸಿಕ್‌ನಿಂದ ಮುಂಬಯಿವರೆಗೆ ನಡೆದ ರೈತರ ದೀರ್ಘ ಜಾಥಾ, ರಾಜಸ್ಥಾನ ರೈತರ ರಾಜಿರಹಿತ ಸಂಘರ್ಷ, ಕಿಸಾನ್ ಸಭಾ ಮತ್ತು ಟ್ರೇಡ್ ಯೂನಿಯನ್‌ಗಳ ಆಗಸ್ಟ್ 9ರ ಜೈಲ್ ಭರೋ ಆಂದೋಲನ, ಬೆಳೆಯುತ್ತಿರುವ ರೈತ–ಕಾರ್ಮಿಕರ ಸಖ್ಯತೆಗೆ ಸಾಕ್ಷಿಯಾದ ಸೆಪ್ಟೆಂಬರ್ 5ರಂದು ದೆಹಲಿಯಲ್ಲಿ ನಡೆದ ಐತಿಹಾಸಿಕ ಕಿಸಾನ್–ಮಜ್ದೂರ್ ಸಂಘರ್ಷ ರ್‍ಯಾಲಿ; ನವೆಂಬರ್ 29–30ರಂದು ನಡೆದ ಕಿಸಾನ್ ಮುಕ್ತಿ ಮೋರ್ಚಾ ರ್‍ಯಾಲಿ – ಇವೆಲ್ಲವೂ ದೇಶದ ದುಡಿಯುವ ಜನತೆಯಲ್ಲಿ ಬೆಳೆಯುತ್ತಿರುವ ಅತೃಪ್ತಿ ಮತ್ತು ಪ್ರತಿಭಟನೆಗಳನ್ನು ಪ್ರತಿಬಿಂಬಿಸುತ್ತವೆ. ಈ ಹೋರಾಟ ಮತ್ತು ಚಳವಳಿಗಳು ವ್ಯಾಪಕಗೊಂಡು ತೀವ್ರವಾದರೆ ಕೋಮುವಾದಿ ಕಾರ್ಯಸೂಚಿಯನ್ನು ಎದುರಿಸಲು ಅದೊಂದು ಪರಿಣಾಮಕಾರಿ ಅಸ್ತ್ರ ಆಗಲಿದೆ.

ಈ ಪ್ರಚಾರಾಂದೋಲನ ಮತ್ತು ಹೋರಾಟಗಳು ಬಿಜೆಪಿ ವಿರುದ್ಧ ಜನತೆಯ ಅತೃಪ್ತಿಯನ್ನು ಕ್ರೋಢೀಕರಿಸಲು ನೆರವಾಗಿವೆ. ರಾಜಸ್ಥಾನ, ಮಧ್ಯ ಪ್ರದೇಶ ಮತ್ತು ಛತ್ತೀಸ್‌ಗಢ ವಿಧಾನ ಸಭೆ ಚುನಾವಣೆಗಳಲ್ಲಿ ಬಿಜೆಪಿ ತನ್ನ ಸಾಂಪ್ರದಾಯಿಕ ಭದ್ರಕೋಟೆಗಳಲ್ಲಿ ಸೋಲನ್ನು ಅನುಭವಿಸಿದ್ದು ಜಾತ್ಯತೀತ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಪ್ರಬಲ ಒಗ್ಗಟ್ಟನ್ನು ಪ್ರದರ್ಶಿಸಿದರೆ ಅದರ ಪರಿಣಾಮ ಏನಾಗಬಹುದು ಎಂಬುದರ ದ್ಯೋತಕ ಅದಾಗಿದೆ.

ನಾವು ಹೊಸ ವರ್ಷವನ್ನು ಪ್ರವೇಶಿಸುತ್ತಿರುವಂತೆ, ಬಿಜೆಪಿ ವಿರುದ್ಧ ಹೋರಾಡಲಿಕ್ಕೆ ಹಾಗೂ ಮೋದಿ ಸರಕಾರವನ್ನು ಸೋಲಿಸಲಿಕ್ಕೆ ಒಂದು ಪ್ರಬಲ ಒಗ್ಗಟ್ಟನ್ನು ರೂಪಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕಾಗಿದೆ. 2019ರ ಜನವರಿ 8–9ರಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಕರೆ ನೀಡಿರುವ ಎರಡು ದಿನಗಳ ಸಾರ್ವತ್ರಿಕ ಮುಷ್ಕರ ಈ ದಿಕ್ಕಿನಲ್ಲಿ ಒಂದು ಪ್ರಮುಖ ಹೆಜ್ಜೆಯಾಗಲಿದೆ.

ಕೇವಲ ಮೂರುವರೆ ತಿಂಗಳ ದೂರದಲ್ಲಿರುವ 2019ರ ಲೋಕಸಭೆ ಚುನಾವಣೆ, 1977ರ ಸಂಸತ್ ಚುನಾವಣೆಗಳ ನಂತರದಲ್ಲಿ ದೇಶದ ಅತಿ ಪ್ರಮುಖ ಚುನಾವಣೆ ಆಗಲಿದೆ. ಇದು ಕೇವಲ ಒಂದು ಸರಕಾರವನ್ನು ಸೋಲಿಸುವ ಚುನಾವಣೆಯಲ್ಲ, ಸಂವಿಧಾನ, ಜಾತ್ಯತೀತತೆ ಮತ್ತು ಸ್ವತಃ ಸಂಸದೀಯ ಪ್ರಜಾಪ್ರಭುತ್ವವನ್ನು ಉಳಿಸುವ ಹಾಗೂ ರಕ್ಷಿಸುವ ಹೋರಾಟವಾಗಲಿದೆ.

ಈ ದೊಡ್ಡ ಕಾರ್ಯಭಾರವನ್ನು ಕೈಗೆತ್ತಿಕೊಳ್ಳುವ ಪ್ರತಿಜ್ಞೆಯೊಂದಿಗೆ ನಾವು ಈ ಹೊಸ ವರ್ಷವನ್ನು ಬರಮಾಡಿಕೊಳ್ಳಬೇಕಾಗಿದೆ.

ಅನು: ವಿಶ್ವ

ಮತ್ತೊಂದು ಚಾರಿತ್ರಿಕ ಕಾರ್ಯಾಚರಣೆಗೆ ದೇಶದ ಕಾರ್ಮಿಕ ವರ್ಗ ಸಜ್ಜು

ಜನವರಿ 8–9: ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ



ದೇಶದ ಕಾರ್ಮಿಕ ವರ್ಗ ಇನ್ನೊಂದು ಬೃಹತ್ ಕಾರ್ಯಾಚರಣೆಗೆ ಸಿದ್ಧಗೊಳ್ಳುತ್ತಿದೆ. ಕೇಂದ್ರದಲ್ಲಿನ ಬಿಜೆಪಿ ನೇತೃತ್ವದ ಸರಕಾರ ಮತ್ತು ಹಲವು ರಾಜ್ಯ ಸರಕಾರಗಳು ಅನುಸರಿಸುತ್ತಿರುವ ಜನವಿರೋಧಿ, ಕಾರ್ಮಿಕ–ವಿರೋಧಿ ಹಾಗೂ ದೇಶ–ವಿರೋಧಿ ನೀತಿಗಳ ಮತ್ತು ಕಾರ್ಪೋರೇಟ್ ಪರ ನೀತಿಗಳಿಂದಾಗಿ ದೇಶದ ಕೋಟ್ಯಾಂತರ ದುಡಿಯುವ ಜನರ ದೈನಂದಿನ ಬದುಕು ಅಸಹನೀಯಗೊಂಡಿದೆ. ಇದಲ್ಲದೆ, ಜನಗಳ ಗಮನವನ್ನು ತಮ್ಮ ನಿಜ ಸಮಸ್ಯೆಗಳಿಂದ ಬೇರೆಡೆಗೆ ತಿರುಗಿಸಲು ಈ ಸರಕಾರಗಳ ಕೃಪಾಪೋಷಣೆಯಲ್ಲಿ ಕೋಮುವಾದಿ ಹುನ್ನಾರದ ಸಂಘಟನೆಗಳು ವಿಷವನ್ನು ಹರಡುತ್ತಿರುವ ಬಗ್ಗೆಯೂ, ಮತ್ತು ಯುಎಪಿಎ, ಎನ್ ಎಸ್ಎ ಮುಂತಾದ ಕರಾಳ ಕಾನೂನುಗಳನ್ನು ಪ್ರಯೋಗಿಸಿ, ಸಿಬಿಐ, ಎನ್ಐಎ ಮುಂತಾದ ಕೇಂದ್ರೀಯ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡು ಭಿನ್ನ ಅಭಿಪ್ರಾಯಗಳನ್ನು ಹತ್ತಿಕ್ಕುವ, ದೇಶದ ಶಾಂತಿ ಪ್ರಿಯ, ಜಾತ್ಯಾತೀತ ಶಕ್ತಿಗಳ ಪರವಾಗಿರುವ ವ್ಯಕ್ತಿಗಳನ್ನು ಬಂಧಿಸುವ ಮೂಲಕ ಭಯ–ಭೀತಿಯ ವಾತಾವರಣವನ್ನು ನಿರ್ಮಿಸುತ್ತಿರುವ ಬಗ್ಗೆಯೂ ಈ ಸಮಾವೇಶ ತನ್ನ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿತ್ತು.

ಈ ಹಿನ್ನೆಲೆಯಲ್ಲಿ ಇಂತಹ ಧೋರಣೆಗಳ ವಿರುದ್ಧ ಕಾರ್ಮಿಕ ವರ್ಗದ ಪ್ರತಿರೋಧವನ್ನು ಇನ್ನಷ್ಟು ತೀವ್ರಗೊಳಿಸಲು ಜನವರಿ 8 ಮತ್ತು 9ರಂದು ಎರಡು ದಿನಗಳ ಸಾರ್ವತ್ರಿಕ ಮುಷ್ಕರವನ್ನು ನಡೆಸಲು ಕರೆ ನೀಡಿತ್ತು. **ಈ ನಿಟ್ಟಿನಲ್ಲಿ ಸಾರ್ವತ್ರಿಕ ಮುಷ್ಕರಕ್ಕೆ ಸಿದ್ಧತೆಯಾಗಿ ರಾಷ್ಟ್ರೀಯ ಸಮಾವೇಶವು ನೀಡಿದ ಕರೆಯಂತೆ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ರಾಜ್ಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಮತ್ತು ಕೈಗಾರಿಕಾ/ಉದ್ಯಮವಾರು ಜಂಟಿ ಸಮಾವೇಶಗಳು ದೇಶಾದ್ಯಂತ ನಡೆದಿವೆ. ಡಿಸೆಂಬರ್ ತಿಂಗಳಲ್ಲಿ ಕೈಗಾರಿಕಾವಾರು ಜಂಟಿ ಗೇಟ್ ಮೀಟಿಂಗುಗಳು, ರ‍್ಯಾಲಿಗಳನ್ನು ಸಂಘಟಿಸಲಾಗುತ್ತಿದೆ.**

ಕರ್ನಾಟಕದಲ್ಲಿ ಕಾರ್ಮಿಕ ಸಂಘಟನೆಗಳ ರಾಜ್ಯ ಮಟ್ಟದ ಜಂಟಿ ವೇದಿಕೆಯಾದ ಜೆಸಿಟಿಯು ನೇತೃತ್ವದಲ್ಲಿ ಈ ಸಿದ್ಧತೆಗಳು ನಡೆದಿವೆ. ಈ ಸಂದರ್ಭದಲ್ಲಿ ಅದು ಪ್ರಕಟಿಸಿರುವ ಕರಪತ್ರವನ್ನು ಈ ಕೆಳಗೆ ಕೊಡಲಾಗಿದೆ.

ಈ ನಡುವೆ ದೇಶದ ರೈತರ ಐಕ್ಯ ಹೋರಾಟಗಳೂ ತೀವ್ರಗೊಳ್ಳುತ್ತಿವೆ. ದೇಶದ ಮೂಲೆ–ಮೂಲೆಗಳಿಂದ ರೈತರು ದಿಲ್ಲಿಗೆ ಬಂದು ಎರಡು ದಿನಗಳ ಕಾಲ ಇಡೀ ದೇಶದ ಗಮನವನ್ನು ಸೆಳೆದಿದ್ದಾರೆ. ಕೃಷಿ ಬಿಕ್ಕಟ್ಟು ಮತ್ತು ರೈತರ ಸಂಕಟಗಳನ್ನು ಚರ್ಚಿಸಲು ಸಂಸತ್ತಿನ ಒಂದು ವಿಶೇಷ ಅಧಿವೇಶನವನ್ನು ನಡೆಸಬೇಕು, ತಾವೇ ಚರ್ಚಿಸಿ, ತಯಾರಿಸಿ, ತಮ್ಮ ಪರವಾಗಿ ಸಂಸತ್ತಿನಲ್ಲಿ ಈಗಾಗಲೇ ಮಂಡಿಸಿರುವ ಎರಡು ಮಸೂದೆಗಳನ್ನು ಅಂಗೀಕರಿಸಬೇಕು ಎಂದು ಆಗ್ರಹಿಸಿದ್ದಾರೆ.

ಇದಾದ ನಂತರ ನಡೆದ ಐದು ವಿಧಾನಸಭಾ ಚುನಾವಣೆಗಳಲ್ಲಿ, ವಿಶೇಷವಾಗಿ ಬಿಜೆಪಿಯ ಭದ್ರನೆಲೆಗಳೆನಿಸಿದ್ದ ಮೂರು ರಾಜ್ಯಗಳಲ್ಲಿ ರೈತರ, ಕಾರ್ಮಿಕರ ಮತ್ತು ಈ ರಾಜ್ಯಗಳ ದುಡಿಯುವ ಜನಗಳ ಆಕ್ರೋಶ ವ್ಯಕ್ತಗೊಂಡಿದೆ. ಜನವಿರೋಧಿ, ಕಾರ್ಮಿಕ–ವಿರೋಧಿ ಹಾಗೂ ಮತ್ತು ಕಾರ್ಪೋರೇಟ್ ಪರ ನೀತಿಗಳನ್ನು ಅನುಸರಿಸುತ್ತಿದ್ದ ಇಲ್ಲಿನ ಬಿಜೆಪಿ ಸರಕಾರಗಳನ್ನು ಅಧಿಕಾರದಿಂದ ಇಳಿಸಿದ್ದಾರೆ.

ವಿಶೇಷವಾಗಿ, ಮೋದಿ ಸರಕಾರ ಸಂಸತ್ತಿನಲ್ಲಿ ಮತ್ತು ಹೊರಗೆ ತೀವ್ರ ಪ್ರತಿರೋಧದಿಂದಾಗಿ ತರಲಾಗದ ಕಾರ್ಮಿಕ ಕಾಯ್ದೆಗಳಿಗೆ ಕಾರ್ಮಿಕ–ವಿರೋಧಿ, ರೈತ–ವಿರೋಧಿ ಮತ್ತು ಕಾರ್ಪೊರೇಟ್ ಪರವಾದ ತಿದ್ದುಪಡಿಗಳನ್ನು ಒಂದೊಂದಾಗಿ ಜಾರಿಗೆ ತರುತ್ತಿದ್ದ, ಈ ನಿಟ್ಟಿನಲ್ಲಿ ಮೋದಿಯವರ ಇನ್ನೊಂದು 'ಮಾದರಿ ರಾಜ್ಯ'ವಾಗಿ ಬಿಟ್ಟಿದ್ದ ರಾಜಸ್ಥಾನದಲ್ಲಿ ರೈತರು ಮತ್ತು ಕಾರ್ಮಿಕರು ತಕ್ಕ ಉತ್ತರ ನೀಡಿದ್ದಾರೆ.

ಈ ಹೊಸ ಸನ್ನಿವೇಶದಲ್ಲಿ ಈಗ ದೇಶದ ಕೋಟ್ಯಂತರ ಕಾರ್ಮಿಕರು ಈ ಬೃಹತ್ ಕಾರ್ಯಾಚರಣೆಗೆ ಅಣಿಯಾಗುತ್ತಿದ್ದಾರೆ. ಇನ್ನು ನಾಲ್ಕು ತಿಂಗಳೊಳಗೆ ಸಾರ್ವತ್ರಿಕ ಚುನಾವಣೆಗಳು ನಡೆಯಲಿರುವುದರಿಂದ ಈ ಕಾರ್ಯಾಚರಣೆ ಈಗ ಪರ್ಯಾಯ ಧೋರಣೆಗಳ ಬಗ್ಗೆ ಯೋಚಿಸುವಂತೆ ಮಾಡುವ ವಿಶೇಷ ರಾಜಕೀಯ ಮಹತ್ವವನ್ನು ಪಡೆದಿದೆ.

ಈ ನಡುವೆ ಕೋಮುಧ್ರುವೀಕರಣದ ಪ್ರಯತ್ನಗಳೊಂದಿಗೆ ಮೋದಿ ಸರಕಾರ 'ಕಾನ್ಸೆಂಟ್' ಅಂದರೆ ಕಾನ್ಫೆಡರೇಶನ್ ಆಫ್ ಸೆಂಟ್ರಲ್ ಟ್ರೇಡ್ ಯೂನಿಯನ್ಸ್' (ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಮಹಾಒಕ್ಕೂಟ) ಎಂಬೊಂದು ಹೊಸ ಸಂಘಟನೆಯ ಮೂಲಕ ಕಾರ್ಮಿಕರ ಬೆಳೆಯುತ್ತಿರುವ ಐಕ್ಯತೆಯನ್ನು ಮುರಿಯುವ ಮತ್ತೊಂದು ಪ್ರಯತ್ನಕ್ಕೂ ಕೈ ಹಾಕಿದೆ. ಇದು ಈಗಾಗಲೇ 'ಜನಶಕ್ತಿ'ಯ ಹಿಂದಿನ ಸಂಚಿಕೆಯಲ್ಲಿ ವರದಿಯಾಗಿರುವಂತೆ, ಸಂಘಪರಿವಾರಕ್ಕೆ ಸೇರಿರುವ ಮತ್ತು ಕೇಂದ್ರದಲ್ಲಿ ಮೋದಿ ಸರಕಾರ ಬಂದಂದಿನಿಂದ ಕಾರ್ಮಿಕರ ಐಕ್ಯ ಹೋರಾಟಗಳಿಗೆ ವಿಶ್ವಾಸಘಾತ ಮಾಡಿ ಏಕಾಂಗಿಯಾಗಿ ಬಿಟ್ಟಿರುವ ಬಿಎಂಎಸ್‌ನ ಕಚೇರಿಯಿಂದ ಕಾರ್ಯನಿರ್ವಹಿಸುತ್ತಿದೆ ಎಂಬುದೇ ಇದರ ನಿಜ ಸ್ವರೂಪವನ್ನು ತೋರಿಸುತ್ತದೆ. ವಾಸ್ತವವಾಗಿ ಇದು ಕೇಂದ್ರದಲ್ಲಿನ ಬಿಜೆಪಿ ಸರಕಾರದ ಕಾರ್ಮಿಕ–ವಿರೋಧಿ ಧೋರಣೆಗಳಿಗೆ 'ಸಮ್ಮತಿ' ಉತ್ಪಾದಿಸುವ ಹತಾಶ ಪ್ರಯತ್ನವಾಗಿ ರೂಪು ತಳೆದಿರುವ ಒಂದು ರಾಜಕೀಯ ಉಪಕರಣ. ಕಾರ್ಮಿಕರು ಒಂದಾಗಿ ತಮ್ಮ ಬೇಡಿಕೆಗಳನ್ನು ಮಂಡಿಸಿದಾಗಲೆಲ್ಲ ಈ ಬೇಡಿಕೆಗಳನ್ನು ಮಂಡಿಸಿದವರ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆಸುವ ಬದಲು, ಈ ಬೇಡಿಕೆಗಳನ್ನೇ ಎತ್ತದ ಬಿಎಂಎಸ್ ನೊಡನೆ 'ಮಂತ್ರಿಗಳ ಗುಂಪು' ಮಾತುಕತೆ ನಡೆಸುವ ಹಾಸ್ಯಾಸ್ಪದ ಪರಿಪಾಟವನ್ನು ಈ ಸರಕಾರ ಆರಂಭಿಸಿತ್ತು. ಆದರೆ ಅದು ಈ ನಾಲ್ಕು ವರ್ಷಗಳಲ್ಲಿ ನಡೆದ ಎರಡೂ ದೇಶವ್ಯಾಪಿ ಹೋರಾಟಗಳ ಸಂದರ್ಭದಲ್ಲಿ ವಿಫಲವಾಯಿತು, ಬಿಎಂಎಸ್ ಗೆ ಸೇರಿದ ಕಾರ್ಮಿಕರೂ ಹಲವೆಡೆಗಳಲ್ಲಿ ಈ ಹೋರಾಟದಲ್ಲಿ ಭಾಗವಹಿಸಿದರು. ಆ ಕಪಟ ನಾಟಕದ ಮುಂದಿನ ಹೆಜ್ಜೆಯಾಗಿ ಈ 'ಕಾನ್ಸೆಂಟ್' ಹುಟ್ಟಿಕೊಂಡಿದೆ ಎಂಬುದನ್ನು ಈಗ ಕಾರ್ಮಿಕರು ಚೆನ್ನಾಗಿಯೇ ಅರಿತುಕೊಂಡಿದ್ದಾರೆ.

ಬೇಡಿಕೆಗಳು

1. ಕಾರ್ಪೊರೇಟ್ ಬಂಡವಾಳ–ಪರ ಕಾರ್ಮಿಕ ಕಾನೂನುಗಳ ತಿದ್ದುಪಡಿಗಳನ್ನು ಮಾಡಬಾರದು.
2. ಸಾರಿಗೆ ರಂಗವನ್ನು ಕಾರ್ಪೊರೇಟ್‌ಗೆ ಪರಭಾರೆ ಮಾಡುವ "ಮೋಟಾರು ವಾಹನ (ತಿದ್ದುಪಡಿ) ಮಸೂದೆ 2017"ನ್ನು ಹಿಂತೆಗೆದುಕೊಳ್ಳಬೇಕು
3. ಹಣ ದುಬ್ಬರ ತಡೆಗಟ್ಟಿ ಬೆಲೆ ಏರಿಕೆ ನಿಯಂತ್ರಣಕ್ಕಾಗಿ ಮತ್ತು ಸಾರ್ವತ್ರಿಕ ಪಡಿತರ ವ್ಯವಸ್ಥೆ ಬೇಕು.
4. ಎಲ್ಲಾ ಕಾರ್ಮಿಕರಿಗೂ ಮಾಸಿಕ ರೂ.18,000/– ಸಮಾನ ಕನಿಷ್ಟ ವೇತನ.
5. ಕಾರ್ಮಿಕ ಸಂಘದ ಕಡ್ಡಾಯ ಮಾನ್ಯತೆಗೆ ಶಾಸನಕ್ಕಾಗಿ ಮತ್ತು 45 ದಿನಗಳ ಒಳಗೆ ಕಾರ್ಮಿಕ ಸಂಘಗಳ ನೋಂದಾವಣೆಗೆ ಕ್ರಮಕ್ಕಾಗಿ ಹಾಗೂ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ (ILO)ನ ಕಾರ್ಮಿಕ ಸಂಘ ರಚಿಸುವ ಹಕ್ಕು (ಸಮಾವೇಶ–87) ಮತ್ತು ಸಾಮೂಹಿಕ ಚೌಕಾಸಿಯ ಹಕ್ಕು (ಸಮಾವೇಶ–98) ಗಳಿಗೆ ಸಂಸತ್ತಿನಲ್ಲಿ ಅನುಮೋದನೆ ಸಿಗಬೇಕು.
6. ಗುತ್ತಿಗೆ ಕಾರ್ಮಿಕ ಪದ್ಧತಿ ನಿಯಂತ್ರಣ, ಸಮಾನ ಕೆಲಸಕ್ಕೆ ಸಮಾನ ವೇತನ, ಗುತ್ತಿಗೆ ಮುಂತಾದ ಖಾಯಂಯೇತರ ಕಾರ್ಮಿಕರ ಖಾಯಂಗೆ ಶಾಸನ ಬೇಕು.
7. ಸಾರ್ವಜನಿಕ ಉದ್ದಿಮೆಗಳ ಶೇರು ವಿಕ್ರಯ ವಿರೋಧಿಸಿ ಹಾಗೂ ಬ್ಯಾಂಕ್, ವಿಮಾ, ರಕ್ಷಣಾ ವಲಯದಲ್ಲಿನ ವಿದೇಶಿ ನೇರ ಬಂಡವಾಳ ಹೂಡಿಕೆ ರದ್ಧತಿಯಾಗಬೇಕು.
8. 43ನೇ ಭಾರತೀಯ ಕಾರ್ಮಿಕ ಸಮ್ಮೇಳನ ಶಿಫಾರಸ್ಸಿನಂತೆ ಸ್ಕೀಂ ಯೋಜನಾ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ಖಾಯಂ ಮಾಡಬೇಕು.
9. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ನಿಧಿ ಸ್ಥಾಪನೆಗೆ ಮತ್ತು ಅದಕ್ಕೆ ಅಗತ್ಯ ಬಜೆಟ್ ಹಣಕ್ಕಾಗಿ ಹಾಗೂ ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ಸಾರ್ವಜನಿಕ ಭವಿಷ್ಯನಿಧಿ ಶಾಸನ ತರಬೇಕು.
10. ಉದ್ಯೋಗ ಸೃಷ್ಟಿಗಾಗಿ ಮತ್ತು ಆರ್ಥಿಕ ಬಿಕ್ಕಟ್ಟು, ನೋಟ್‌ರದ್ಧತಿ ಹಿನ್ನೆಲೆಯಲ್ಲಿ ಉದ್ಯೋಗಗಳ ಸಂರಕ್ಷಣೆಗಾಗಿ ಹಾಗೂ ಸಂಬಂಧಪಟ್ಟ ಕಾನೂನುಗಳಿಗೆ ಅಗತ್ಯ ತಿದ್ದುಪಡಿಗಳ ಮೂಲಕ NEEM, NETAP ಮತ್ತು FTE ಯ ನಿಯಂತ್ರಣ.
11. ಬೋನಸ್ ಪಾವತಿ, ಗ್ರಾಚ್ಯುಟಿ ಪಾವತಿ, ವೇತನ ಪಾವತಿ, ಇಎಸ್ಐ, ಇಪಿಎಫ್ ಕಾಯ್ದೆಗಳಲ್ಲಿನ ಅರ್ಹತೆಗೆ ವೇತನ ಮಿತಿ ಮತ್ತು ಪಾವತಿಗೆ ಗರಿಷ್ಟ ಮಿತಿ ತೆಗೆಯಬೇಕೆಂದು ಹಾಗೂ EPF ಹಣವನ್ನು ಶೇರು ಮಾರುಕಟ್ಟೆಗೆ ಹಾಕುವುದನ್ನು ಹಾಗೂ ESI ಹಣವನ್ನು ಅದರ ನಿರ್ವಹಣೆಯನ್ನು ರಿಲಯನ್ಸ್‌ಗೆ ನೀಡುವುದಕ್ಕೆ ವಿರೋಧ.
12. ರೈತರ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ ನಿಗದಿಗೆ ಡಾ॥ ಸ್ವಾಮಿನಾಥನ್ ಆಯೋಗದ ಶಿಫಾರಸ್ಸುಗಳ ಜಾರಿಗಾಗಿ, ರೈತರ ಆತ್ಮಹತ್ಯೆ ತಡೆಗಾಗಿ, ರೈತರ ಎಲ್ಲಾ ರೀತಿಯ ಸಾಲ ಮನ್ನಾ ಮಾಡಬೇಕು.

ದುಡಿಯುವ ಜನರ ಹಕ್ಕುಗಳ ರಕ್ಷಣೆಗಾಗಿ, ದೇಶದ ಉಳಿವಿಗಾಗಿ ಉತ್ತಮ ಜೀವನ ಮತ್ತು ಭವಿಷ್ಯಕ್ಕಾಗಿ ರಾಷ್ಟ್ರವ್ಯಾಪಿ ಸಾರ್ವತಿಕ ಮುಷ್ಕರವನ್ನು ಬೆಂಬಲಿಸಿ, ಹರತಾಳದಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಿ –ಕರ್ನಾಟಕ ಜೆಸಿಟಿಯು ಮನವಿ

ದೇಶದಲ್ಲಿ ಅಧಿಕಾರದಲ್ಲಿದ್ದ ಸರ್ಕಾರಗಳು 90ರ ದಶಕದಿಂದ ರೂಪಿಸಿದ **'ನವ ಉದಾರೀಕರಣ ನೀತಿ'**ಗಳನ್ನು ಪ್ರಸ್ತುತ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಎನ್‌ಡಿಎ ಸರ್ಕಾರ ಕಳೆದ ನಾಲ್ಕೂವರೆ ವರ್ಷಗಳಲ್ಲಿ ಮತ್ತಷ್ಟು ವೇಗವಾಗಿ ಜಾರಿ ಮಾಡುತ್ತಿದೆ. ಇದರ ಪರಿಣಾಮ ಸಂಪತ್ತನ್ನು ಸೃಷ್ಟಿಸುವ ಕಾರ್ಮಿಕರು, ದೇಶಕ್ಕೆ ಅನ್ನ ಕೊಡುವ ರೈತರು, ಸೇವೆಯನ್ನು ಮಾಡುವ ನೌಕರರು, ತಮ್ಮ ದುಡಿಮೆಯನ್ನೇ ನಂಬಿರುವ ಬಹುಸಂಖ್ಯಾತ ಕೃಷಿ ಕೂಲಿಕಾರರು ಮತ್ತು ಅಸಂಘಟಿತ ಕಾರ್ಮಿಕರು ಗಂಭೀರವಾದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಇದರಿಂದ ಕೇಂದ್ರ ಸರ್ಕಾರದ ಅಚ್ಚೆ ದಿನಗಳ ಘೋಷಣೆಯು ದೇಶದ ಶೇ.01 ರಷ್ಟು ಜನರಿಗೆ (ಬಂಡವಾಳದಾರರು–ಶ್ರೀಮಂತರು) ಲಾಭದಾಯಕವಾದರೆ, ಬಹುಸಂಖ್ಯಾತ ಶೇ.99.9% ರಷ್ಟು ಜನರಿಗೆ ಕಷ್ಟದ ದಿನಗಳಾಗಿವೆ.

1. ನಿಯಂತ್ರಣವಿಲ್ಲದ ಬೆಲೆ ಏರಿಕೆ, ಸೃಷ್ಟಿಯಾಗದ ಉದ್ಯೋಗ:

ಕೇಂದ್ರ ಸರ್ಕಾರ ಕಳೆದ ನಾಲ್ಕುವರೆ ವರ್ಷಗಳಲ್ಲಿ ರೂಪಿಸಿದ ನೀತಿಗಳು, ನೋಟು ಅನಾಣ್ಯೀಕರಣ, ಜಿಎಸ್‌ಟಿ ಜಾರಿ, ಪೆಟ್ರೋಲ್–ಡೀಸೆಲ್ ಮೇಲಿನ ಅಧಿಕ ತೆರಿಗೆ ಕ್ರಮಗಳಿಂದ ಹಾಗೂ ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಕುಂಠಿತಗೊಳಿಸಿದ ಹಿನ್ನೆಲೆ, ಜನಸಾಮಾನ್ಯರು ಉಪಯೋಗಿಸುವ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿವೆ. ಆದರೆ ಕಾರ್ಮಿಕರ ತುಟ್ಟಿಭತ್ಯೆ 2014 ರಲ್ಲಿದ್ದ 705 ಅಂಶಗಳಿಂದ 2018ರಲ್ಲಿ 263 ಅಂಶಗಳಿಗೆ ಇಳಿದಿದೆ. ನೋಟು ಬ್ಯಾನ್ ನಂತರದಲ್ಲಿ ವ್ಯಾಪಾರಸ್ಥರು, ಸಣ್ಣ ಉದ್ದಿಮೆಗಳು ಸಂಕಷ್ಟಕ್ಕೆ ಸಿಲುಕಿ ಲಕ್ಷಾಂತರ ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಾರೆ. ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆ ಸಂಪೂರ್ಣ ಸುಳ್ಳಾಗಿದೆ.

2. ಬಂಡವಾಳ ಪರ ಕಾರ್ಮಿಕ ಕಾನೂನುಗಳ ತಿದ್ದುಪಡಿ – ಕಾರ್ಮಿಕ ಹಕ್ಕುಗಳ ಮೇಲೆ ದಾಳಿ :

ಕೇಂದ್ರ ಸರ್ಕಾರ ಪ್ರಸ್ತುತ ಅಸ್ತಿತ್ವದಲ್ಲಿರುವ 44 ಕೇಂದ್ರ ಕಾರ್ಮಿಕ ಕಾನೂನುಗಳನ್ನು ಬಲಪಡಿಸಿ ಕಟ್ಟುನಿಟ್ಟಾಗಿ ಜಾರಿ ಮಾಡುವ ಬದಲಿಗೆ ಅವುಗಳನ್ನು ವಿಲೀನಗೊಳಿಸಿ 4 ಸಂಹಿತೆಗಳಾಗಿ ಬಂಡವಾಳ ಪರ ತಿದ್ದುಪಡಿ ತರಲು ಮುಂದಾಗಿದೆ. ಅದರಂತೆ ಅಪ್ರೆಂಟಿಸ್‌ಶಿಪ್ ಕಾಯ್ದೆಗೆ ತಿದ್ದುಪಡಿ ಮಾಡಿದ ಪರಿಣಾಮ NEEM, NETAP ಹೆಸರಿನಲ್ಲಿ ಉತ್ಪಾದನಾ ಕೆಲಸಗಳಲ್ಲಿ ತೊಡಗಿಸಲು ಹಾಗೂ ಸ್ಥಾಯಿ ಆದೇಶಗಳ ಕಾಯ್ದೆಗೆ ತಿದ್ದುಪಡಿ ತಂದು ಎಲ್ಲಾ ಕ್ಷೇತ್ರಗಳಲ್ಲಿ ನಿಗದಿತ ಅವಧಿಯ ಉದ್ಯೋಗವನ್ನು (FTE) ನೇಮಿಸಿಕೊಳ್ಳಲು ಮಾಲೀಕರಿಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ. ಕಾರ್ಮಿಕ ಸಂಘದ ಕಡ್ಡಾಯ ಮಾನ್ಯತೆಗೆ ಶಾಸನ, ಸಮಾನ ಕೆಲಸಕ್ಕೆ ಸಮಾನ ವೇತನ, 7ನೇ ವೇತನ ಆಯೋಗದ ಶಿಫಾರಸ್ಸಿನಂತೆ ರೂ.18,000/– ಕನಿಷ್ಟ ವೇತನ ನಿಗದಿ, ಗುತ್ತಿಗೆ ಪದ್ಧತಿ ನಿಯಂತ್ರಣಕ್ಕೆ ಮತ್ತು ಗುತ್ತಿಗೆ ಕಾರ್ಮಿಕರ ಖಾಯಂಗೆ ಶಾಸನ ಮರೀಚಿಕೆಯಾಗಿದೆ. ಹಂತ ಹಂತವಾಗಿ ಸಂವಿಧಾನ ಪುಟ 10 ಕ್ಕೆ





ಕಿಲ್ವೆನ್ಮಣಿ ದಲಿತ ನರಮೇಧ


ಮರೆಯಬಾರದ ದಲಿತ ಪ್ರತಿರೋಧಕ್ಕೆ 50 ವರ್ಷಗಳು

ವಸಂತರಾಜ ಎನ್.ಕೆ.

50 ವರ್ಷಗಳ ಹಿಂದಿನ ಕ್ರಿಸ್ಮಸ್ ಹಬ್ಬದ ರಾತ್ರಿ. ಜಗತ್ತಿನ ಎಲ್ಲೆಡೆ ಶಾಂತಿ ಸಂಭ್ರಮದ ದಿನ. ಆದರೆ ಕಿಲ್ವೆನ್ಮಣಿ ಎಂಬ ತಮಿಳುನಾಡಿನ ಹಳ್ಳಿಯಲ್ಲಿ ಅಂದು ಭೀಕರ ರಕ್ತದೋಕುಳಿ ಮತ್ತು ದಹನಕಾಂಡದ ದಿನವಾಗಿ ಚರಿತ್ರೆಯಲ್ಲಿ ದಾಖಲಾಯಿತು. ಅಂದು 44 ಜನರನ್ನು ಜೀವಂತವಾಗಿ ಸುಡಲಾಯಿತು. ಅವರಲ್ಲಿ 16 ಮಹಿಳೆಯರು ಮತ್ತು 23 ಮಕ್ಕಳು. 5 ಜನ ಮಾತ್ರ ವಯಸ್ಕ ಪುರುಷರು. ಸುಟ್ಟು ಕರಕಲಾದ ಎಲ್ಲಾ 44 ಜನ ಅಸ್ಪೃಶ್ಯ ಜಾತಿಗೆ ಸೇರಿದವರು. ಭಾರತದ ದುಡಿಯುವ ಜನರ ಚರಿತ್ರೆಯಲ್ಲಿ ಹಲವು ಕಾರಣಗಳಿಗಾಗಿ ಎಂದೂ ಮರೆಯಬಾರದ ದಿನ, ಡಿಸೆಂಬರ್ 25, 1968.

ಈ ನರಮೇಧ ಮತ್ತು ದಹನಕಾಂಡಕ್ಕೆ ಕಾರಣವಾಗಿದ್ದು ದಲಿತ ಕೃಷಿ ಕೂಲಿಕಾರರು ಕೂಲಿಯೇರಿಕೆಗೆ ಒತ್ತಾಯಿಸಿದ್ದು. ಕಿಲ್ವೆನ್ಮಣಿ ತಮಿಳುನಾಡಿನ ಆಗಿನ ತಂಜಾವೂರು ಜಿಲ್ಲೆಯ ಒಂದು ಹಳ್ಳಿ. ಈಗ ಅದು ನಾಗಪಟ್ಟಿನಂ ಜಿಲ್ಲೆಯಲ್ಲಿದೆ. ಈ ಹಳ್ಳಿ ಇರುವ ಪ್ರದೇಶ ಫಲವತ್ತಾದ ಕಾವೇರಿ ಡೆಲ್ಟಾದಲ್ಲಿ ಇದ್ದು ಭತ್ತದ ಕಣಜ ಎಂದು ಪ್ರಸಿದ್ಧವಾಗಿತ್ತು. 'ಹಸಿರು ಕ್ರಾಂತಿ' ಎಂದು ಕರೆಯಲಾಗುವ ಕೃಷಿ ಅಭಿವೃದ್ಧಿ ಸಫಲವಾದ ಪ್ರದೇಶ. ಭೂಮಿ ದೊಡ್ಡ ಭೂಮಾಲಕರ ಸ್ವಾಧೀನದಲ್ಲಿದ್ದು ಹೆಚ್ಚಾಗಿ ದಲಿತರಾಗಿದ್ದ ಕೃಷಿ ಕೂಲಿಕಾರರು ಭತ್ತದ ಗದ್ದೆಗಳಲ್ಲಿ ದುಡಿಯುತ್ತಿದ್ದರು. ಅವರು ಸಿಪಿಐ(ಎಂ) ನೇತೃತ್ವದ ಕೆಂಬಾವುಟದ ಯೂನಿಯನ್ ಅಡಿಯಲ್ಲಿ ಸಂಘಟಿತರಾಗಿ ಕೂಲಿಯೇರಿಕೆ ಮತ್ತು ಕೆಲಸದ ಪರಿಸ್ಥಿತಿಗಳನ್ನು ಉತ್ತಮ ಪಡಿಸುವಂತೆ ಒತ್ತಾಯಿಸಿದರು.


ಹಳ್ಳಿಯಲ್ಲಿ ಕೆಂಬಾವುಟ ಹಾರಿಸಿದ ದಲಿತ ಕೃಷಿಕೂಲಿಕಾರರ ಈ ಪ್ರತಿರೋಧ ಭೂಮಾಲಕರನ್ನು ಕೆರಳಿಸಿತು. ಅವರು ಕೆಂಬಾವುಟದ ಯೂನಿಯನ್ ವಿರುದ್ಧ 'ಹಳದಿ ಬಾವುಟ'ದ ಬಾಲಬಡುಕ ಯೂನಿಯನ್ ಕಟ್ಟಲು ಪ್ರಯತ್ನಿಸಿದರು. ಕೆಂಬಾವುಟ ಯೂನಿಯನಿಗೆ ಸೇರಿದ ಕೂಲಿಕಾರರನ್ನು ತೆಗೆದು ಹಾಕಿ ಹೊರಗಿನಿಂದ ಕೂಲಿಕಾರರನ್ನು ತರಲು ಪ್ರಯತ್ನಿಸಿದರು. ಕೆಂಬಾವುಟದ ಯೂನಿಯನ್ ಗದ್ದೆಗಳಲ್ಲಿ ಕೆಲಸವನ್ನು ಬಹಿಷ್ಕರಿಸಿತು. ಕಟಾವು ಕೆಲಸ ನಿಲ್ಲಿಸಿ ಒತ್ತಡ ಹೇರಿತು. ಭೂಮಾಲಕರು ಭತ್ತ ಉತ್ಪಾದಕರ ಸಂಘ ಎಂಬ ಹೆಸರಲ್ಲಿ ಸಂಘಟಿತರಾಗಿ ಹೊರಗಿನ ಕಾರ್ಮಿಕರಿಂದ ಕಟಾವಿಗೆ ಪ್ರಯತ್ನಿಸಿದರು. ಇದರಿಂದ ಘರ್ಷಣೆಯ ವಾತಾವರಣ ಸೃಷ್ಟಿಯಾಯಿತು. ಈ ನಡುವೆ ಭೂಮಾಲಕರ ಗೂಂಡಾಗಳು ಕೆಂಬಾವುಟದ ಯೂನಿಯನಿನ ಬೆಂಬಲಿಗನೊಬ್ಬನನ್ನು ಅಪಹರಣ ಮಾಡಿದರು. ಇದರಿಂದ ರೊಚ್ಚಿಗೆದ್ದ ಕೂಲಿಕಾರರು ಆತನನ್ನು ಬಚ್ಚಿಟ್ಟಿದ್ದ ಮನೆ ಮೇಲೆ ದಾಳಿ ಮಾಡಿ ಆತನನ್ನು ಬಿಡಿಸಿಕೊಂಡು ಬಂದರು. ಈ ಘರ್ಷಣೆಯಲ್ಲಿ ಭೂಮಾಲಕನ ಬಂಟನೊಬ್ಬ ಕೊಲ್ಲಲ್ಪಟ್ಟ.



ಇದರಿಂದ ಕುಪಿತರಾದ ಭೂಮಾಲಕರು ಈ ಕುಖ್ಯಾತ ನರಮೇಧವನ್ನು ಸಂಘಟಿಸಿದರು. ಡಿಸೆಂಬರ್ 25ರ ರಾತ್ರಿ 10 ಗಂಟೆಯಲ್ಲಿ ಸುಮಾರು 200 ಜನ ಗೂಂಡಾಗಳು ಪೋಲಿಸ್ ವಾಹನಗಳಲ್ಲಿ ಸಶಸ್ತ್ರರಾಗಿ ಬಂದು ದಲಿತ ಕೇರಿಯನ್ನು ಸುತ್ತುವರೆದು ದಾಳಿ ಆರಂಭಿಸಿದರು. ಗುಂಡನ್ನು ಹಾರಿಸಿದರು. ಅನಿರೀಕ್ಷಿತ ದಾಳಿಯ ವಿರುದ್ಧ ಪ್ರತಿರೋಧ ಒಡ್ಡಲು ಕೋಲು ಕಲ್ಲುಗಳಲ್ಲದೆ ದಲಿತರ ಬಳಿ ಇನ್ನೇನೂ ಇರಲಿಲ್ಲ. ಆದ್ದರಿಂದ ಓಡುವುದಲ್ಲದೆ ಇನ್ನೇನೂ ದಾರಿ ಉಳಿದಿರಲಿಲ್ಲ. ಓಡಲಾಗದ ಹಲವರು ಒಂದು ಗುಡಿಸಲಲ್ಲಿ ಅವಿತುಕೊಂಡರು. ಗೂಂಡಾಗಳು ಆ ಗುಡಿಸಲನ್ನು ಸುತ್ತುವರೆದು ಬೆಂಕಿ ಕೊಟ್ಟರು. ಆ ಗುಡಿಸಲು ಬರಿಯ 8–9 ಅಡಿ ಉದ್ದಗಲದ್ದು ಆಗಿತ್ತು. ಗೂಂಡಾಗಳು ಹಸಿ ಹುಲ್ಲು ಮತ್ತು ಕಟ್ಟಿಗೆಯಿಂದ ಬೆಂಕಿ ಉರಿಯುತ್ತಲೇ ಇರುವಂತೆ ನೋಡಿಕೊಂಡರು. ಒಳಗಿದ್ದ ಇಬ್ಬರು ಮಕ್ಕಳನ್ನು ಅವರು ಹೇಗಾದರೂ ಬದುಕುಳಿದಾರೋ ಎಂಬ ಆಶೆಯಿಂದ ಹೊರಗೆಸೆಯಲಾಯಿತು. ಆದರೆ ಗೂಂಡಾಗಳು ಅವರನ್ನು ಗುಡಿಸಲನ್ನು ಸುತ್ತಿದ್ದ ಬೆಂಕಿಗೆ ಮತ್ತೆ ಎಸೆದು ತಮ್ಮ ಬರ್ಬರತೆಯ ನಗ್ನ ಪ್ರದರ್ಶನ ಮಾಡಿದರು. ಆ ಗುಡಿಸಲಿನಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ 6 ಜನರಲ್ಲಿ ಇಬ್ಬರನ್ನು ಕೊಚ್ಚಿ ಹಾಕಿ ಮತ್ತೆ ಬೆಂಕಿಗೆ ಎಸೆಯಲಾಯಿತು. 4 ಜನ ಮಾತ್ರ ತಪ್ಪಿಸಿಕೊಂಡು ಹೋಗಲು ಸಾಧ್ಯವಾಯಿತು. 44 ಜನ ಸುಟ್ಟು ಕರಕಲಾದರು. ಅವರಲ್ಲಿ ಈಗಾಗಲೇ ಹೇಳಿದ ಹಾಗೆ 16 ಮಹಿಳೆಯರು ಮತ್ತು 23 ಮಕ್ಕಳು. 5 ಜನ ಮಾತ್ರ ವಯಸ್ಕ ಪುರುಷರು ಇದ್ದರು. ಜಮೀನುದಾರರ ಗೂಂಡಾಗಳು ಪ್ರತೀಕಾರದ ದಾಳಿ ನಿರೀಕ್ಷಿಸಿ ನೇರ ಪೋಲಿಸ್ ಸ್ಟೇಶನಿಗೆ ಹೋಗಿ ಪೋಲಿಸ್ 'ರಕ್ಷಣೆ' ಕೇಳಿದರು. ಅವರಿಗೆ ಪೋಲಿಸ್ ರಕ್ಷಣೆ ಕೊಡಲಾಯಿತು.

ಜಮೀನುದಾರರ ಈ ವ್ಯವಸ್ಥಿತ ಬರ್ಬರ ಹಿಂಸಾಚಾರ ಮತ್ತು ನರಮೇಧ ವರದಿಯಾದಾಗ ತಮಿಳುನಾಡು ಮಾತ್ರವಲ್ಲ, ದೇಶದಲ್ಲಿ ಮಾತ್ರವಲ್ಲ, ಜಗತ್ತಿನ ತುಂಬಾ ಪ್ರಜ್ಞಾವಂತ ನಾಗರಿಕರನ್ನು ನಡುಗಿಸಿತು. ಆಕ್ರೋಶಭರಿತರನ್ನಾಗಿಯೂ ಮಾಡಿತು. ಆದರೆ ಆ ಮೇಲೆ ಕೋರ್ಟುಗಳಲ್ಲಿ ನಡೆದದ್ದೂ ಅಷ್ಟೇ ಭೀಕರವಾಗಿತ್ತು. ಕೆಳಕೋರ್ಟುಗಳು ಭೂಮಾಲಕರು ಸೇರಿ ಈ ನರಮೇಧ ಸಂಘಟಿಸಿದ 10 ಜನರಿಗೆ 10 ವರ್ಷಗಳ ಸಜಾ ವಿಧಿಸಿತು. ಆದರೆ ಅಪೀಲ್ ಕೋರ್ಟು ಅದನ್ನು ವಜಾ ಮಾಡಿತು. ಭೂಮಾಲಕರ ನಾಯಕನಾಗಿದ್ದ ಇರಿಂಜೂರು ಗೋಪಾಕೃಷ್ಣ ನಾಯುಡು ಗೂ 10 ವರ್ಷಗಳ ಸಜಾ ಆಯಿತು. ಆದರೆ ಹೈಕೋರ್ಟು ಅವರನ್ನು 1975ರಲ್ಲಿ ಬಿಡುಗಡೆ ಮಾಡಿತು. 1980ರಲ್ಲಿ ಅವರ ಕೊಲೆ ಕೂಡಾ ಆಯಿತು.

ಭೂಮಾಲಕರ ದಮನದ ವಿರುದ್ಧ ಪ್ರತಿರೋಧವನ್ನು ತೋರಿಸಲು ಪ್ರತಿ ವರ್ಷ "ಕಿಲ್ವೆನ್ಮಣಿ ಹುತಾತ್ಮರ ದಿನ"ವನ್ನು ಡಿಸೆಂಬರ್ 25ರಂದು ಅದೇ ಜಾಗದಲ್ಲಿ ಸಿಪಿಐ(ಎಂ) ಸಂಘಟಿಸುತ್ತದೆ. ಮರುವರ್ಷವೇ ಕಿಲ್ವೆನ್ಮಣಿ ಹುತಾತ್ಮರ ಸ್ಮಾರಕ ನಿರ್ಮಿಸಲು ಆಗ ಪಶ್ಚಿಮ ಬಂಗಾಳದ ಉಪಮುಖ್ಯಮಂತ್ರಿಗಳಾಗಿದ್ದ ಜ್ಯೋತಿ ಬಸು ಅವರು ಅಡಿಗಲ್ಲು ಹಾಕಿದರು. ಅದರ ನಂತರ ಪ್ರತಿ ವರ್ಷ ಈ ಸ್ಮಾರಕದ ಬಳಿ "ಕಿಲ್ವೆನ್ಮಣಿ ಹುತಾತ್ಮರ ದಿನ"ವನ್ನು **ಪುಟ 10 ಕ್ಕೆ**



50 ನೇ ವಾರ್ಷಿಕಾಚರಣೆ

ಎಂದಿನಂತೆ ಈ ವರ್ಷವೂ 'ಕಿಲ್ವೆನ್ಮಣಿ ಹುತಾತ್ಮರ ದಿನ'ವನ್ನು ಡಿಸೆಂಬರ್ 25 ರಂದು ಆಚರಿಸಲಾಯಿತು. ನೆರೆಯ ಜಿಲ್ಲೆಗಳು ಸೇರಿದಂತೆ ಸಾವಿರಾರು ಜನ ಬಂದು ಕಿಲ್ವೆನ್ಮಣಿ ಹುತಾತರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಸಿಪಿಐ(ಎಂ) ಪಿಬಿ ಸದಸ್ಯ ಜಿ. ರಾಮಕೃಷ್ಣನ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಭೆಯಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾದ ಸೌಂದರಾಜನ್, ಪಿ.ಸಂಪತ್ ಮತ್ತು ಯು.ವಾಸುಕಿಅವರು ಸಮಾರಂಭದಲ್ಲಿ 'ಭಾಗವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಕೆ.ಬಾಲಕೃಷ್ಣನ್ ಕೆಂಬಾವುಟ ಹಾರಿಸಿದರು ಮತ್ತು ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಅವರ ಸಂದೇಶ ಓದಿ ಹೇಳಿದರು. ನಾಗಪಟ್ಟಿನಂ ಜಿಲ್ಲಾ ಕಾರ್ಯದರ್ಶಿ ನಾಗೈ ಆಲಿ ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಸಂದರ್ಭಧಲ್ಲಿ ತೀಕದೀರ ವಿಶೇಷ ಸಂಚಿಕೆ ಮತ್ತು ಮೂರು ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.

ಆರ್ಥಿಕ ಶೋಷಣೆ ಮತ್ತು ಸಾಮಾಜಿಕ ದಮನದ ವಿರುದ್ಧ ಹೋರಾಟಗಳ ಸಂಗಮದ ಪ್ರತೀಕ : ಯೆಚುರಿ

ಕಿಲ್ವೆನ್ಮಣಿ ಆರ್ಥಿಕ ಶೋಷಣೆ ಮತ್ತು ಸಾಮಾಜಿಕ ದಮನಗಳ ವಿರುದ್ಧ ಹೋರಾಟಗಳ ಸಂಗಮದ ಪ್ರತೀಕ. ಕಿಲ್ವೆನ್ಮಣಿ ಇಂದು ನಡೆಯುತ್ತಿರುವ ಇವೆರಡೂ ಹೋರಾಟಗಳಿಗೆ ಸ್ಫೂರ್ತಿಯಾಗುವಂತದ್ದು. ಮಾನವ ಶೋಷಣೆಯನ್ನೂ ಜಾತಿ ದೌರ್ಜನ್ಯಗಳು ಮತ್ತು ತಾರತಮ್ಯಗಳನ್ನೂ ಕೊನೆಗೊಳಿಸುವ ಅಂತಿಮ ಧ್ಯೆಯದೊಂದಿಗೆ, ಈ ಹೋರಾಟಗಳನ್ನು ಮುಂದೊಯ್ಯುವ ಸಿಪಿಐ(ಎಂ) ನ ಧೃಢ ನಿರ್ಧಾರವನ್ನು ತಿಳಿಸಲು ಬಯಸುತ್ತೇನೆ.

ಕಿಲ್ವೆನ್ಮಣಿ ಹುತಾತ್ಮರಿಗೆ ಸಿಪಿಐ(ಎಂ) ಕೇಂದ್ರ ಸಮಿತಿಯ ಪರವಾಗಿ ಲಾಲ್ ಸಲಾಂ!

– ಸೀತಾರಾಂ ಯೆಚುರಿ (ಸಮಾರಂಭಕ್ಕೆ ಕಳಿಸಿದ ಸಂದೇಶದಲ್ಲಿ)



ಕಿಲ್ವೆನ್ಮಣಿ ದಲಿತ ನರಮೇಧ
ಮರೆಯಬಾರದ ದಲಿತ ಪ್ರತಿರೋಧಕ್ಕೆ 50 ವರ್ಷಗಳು.......

ಪುಟ 9 ರಿಂದ



ಸೇರುತ್ತಾರೆ. ಈ ದಾರುಣ ಘಟನೆಯ 6 ವರ್ಷಗಳ ನಂತರ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಮ್ಮೇಳನವನ್ನು ಅಲ್ಲಿ ನಡೆಸಲಾಯಿತು. ಕಿಲ್ವೆನ್ಮಣಿ ನರಮೇಧದ ಬಗ್ಗೆ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಬರೆದಿದ್ದ ಮತ್ತು ಆ ಬಗ್ಗೆ ಸಂಶೋಧನೆ ಕೈಗೊಂಡಿದ್ದ ಮೈಥಿಲಿ ಶಿವರಾಮನ್ ಜನವಾದಿ ಮಹಿಳಾ ಸಂಘಟನೆಯ ಆಗಿನ ಪ್ರಮುಖ ಸಂಘಟಕರಲ್ಲಿ ಒಬ್ಬರಾಗಿದ್ದರು. 2014ರಲ್ಲಿ "ಮಣಿ ಮಂಡಪಂ" ಎಂದು ಕರೆಯಲಾಗುವ ಇನ್ನೊಂದು ಹೊಸ ಸ್ಮಾರಕವನ್ನೂ ಕಟ್ಟಲಾಗಿದೆ. ಹೊಸ ಸ್ಮಾರಕದಲ್ಲಿ ಒಂದು ಮ್ಯೂಸಿಯಂ ಲೈಬ್ರರಿ ಕಟ್ಟಡ ಮತ್ತು ಅದರ ಸುತ್ತಲೂ 44 ಹುತಾತ್ಮರನ್ನು ಪ್ರತಿನಿಧಿಸುವ ಗ್ರಾನೈಟ್ ಕಂಬಗಳು ಇವೆ.

ಕಿಲ್ವೆನ್ಮಣಿಯ ಈ ಬರ್ಬರ ನರಮೇಧ ಮತ್ತು ಕೋರ್ಟ್ ತೀರ್ಪುಗಳು ತಮಿಳುನಾಡಿನಲ್ಲೂ, ದೇಶದಲ್ಲೂ ಹಲವು ಚರ್ಚೆಗಳಿಗೆ ಬದಲಾವಣೆಗಳಿಗೆ ಕಾರಣವಾಯಿತು. ಕೃಷಿ ಕೂಲಿಕಾರರ ಕೂಲಿ, ಭೂಮಾಲಕರ ಭೂಒಡೆತನದ ಮಿತಿಯ ಕಟ್ಟುನಿಟ್ಟಿನ ಜಾರಿ, ಭೂರಹಿತರಿಗೆ ಭೂಮಿ ಹಂಚುವಿಕೆ ಮತ್ತು ಜಾತಿ ದಮನ–ಅಸ್ಪೃಶ್ಯತೆ ಬಗ್ಗೆ ಚರ್ಚೆಗಳನ್ನು ಮುನ್ನೆಲೆಗೆ ತಂದಿತು. ಕಿಲ್ವೆನ್ಮಣಿ ಮತ್ತು ಇತರ ಕಡೆ ಸಿಪಿಐ(ಎಂ) ನಡೆಸಿದ ಹೋರಾಟಗಳಿಂದಾಗಿ, ಆಗ ಅಧಿಕಾರದಲ್ಲಿದ್ದ ಡಿಎಂಕೆ ಸರಕಾರ ಭೂಒಡೆತನದ ಮಿತಿಯನ್ನು 30 ರಿಂದ 15 ಎಕರೆಗೆ ಇಳಿಸಬೇಕಾಯಿತು. ಸರಕಾರ ನೇಮಿಸಿದ್ದ ಗಣಪತಿಯ ಪಿಳ್ಳೆ ಕಮಿಷನ್ ಶಿಫಾರಸು ಮಾಡಿತು. ಈ ನರಮೇಧದಿಂದ ವಿಚಲಿತರಾದ ಕೆಲವು ಗಾಂಧಿವಾದಿಗಳು ಸಹ ಭೂಸುಧಾರಣೆಗೆ ಒತ್ತಾಯಿಸಲಾರಂಭಿಸಿದರು.

ಕಿಲ್ವೆನ್ಮಣಿ ಸ್ವತಂತ್ರ ಭಾರತದಲ್ಲಿ ಎರಡು ದಶಕಗಳ ನಂತರವೂ ದಲಿತರ ಸ್ಥಿತಿಗತಿಗಳ ಮತ್ತು ಅದರ ವಿರುದ್ಧ ಅವರ ಆಕ್ರೋಶದ ಪ್ರತಿರೋಧದ ಪ್ರತೀಕವಾಯಿತು. ಗಾಂಧಿ ಪ್ರಣೀತ ಸಾಮಾಜಿಕ ಸುಧಾರಣೆಗಳ ಮೂಲಕ ದಲಿತೋದ್ಧಾರದ ಭ್ರಮೆ ಕರಗುತ್ತಾ ಅದರ ವೈಫಲ್ಯ ಗೋಚರಿಸುತ್ತಾ, ದಲಿತರು ತಮ್ಮ ಹಕ್ಕುಗಳಿಗಾಗಿ ಸೆಟೆದು ನಿಲ್ಲಲಾರಂಭಿಸಿದ್ದರು. ಕಮ್ಯುನಿಸ್ಟರು ಮತ್ತು ಇತರ ರ್‍ಯಾಡಿಕಲ್ ವ್ಯಕ್ತಿ/ಸಂಘಟನೆಗಳ ನಾಯಕತ್ವದಲ್ಲಿ ದಲಿತರು ಸಂಘಟಿತರಾಗಲು ಆರಂಭವಾಗಿದ್ದು, ಆಳುವ ವರ್ಗಗಳ ದಮನ–ಶೋಷಣೆಗಳಿಗೆ ಪ್ರತಿರೋಧ ಒಡ್ಡಲು ಆರಂಭಿಸಿದ್ದರು. ಕಿಲ್ವೆನ್ಮಣಿ ದಲಿತರ ಪ್ರತಿರೋಧದ ವಿರುದ್ಧ ಆಳುವ ವರ್ಗಗಳ ಸಾಮೂಹಿಕ ದಮನದ ತೀಕ್ಷ್ಣ ಪ್ರತಿಕ್ರಿಯೆಯಾಗಿತ್ತು. ಅದು ವರೆಗೆ ದಲಿತರ ಮೇಲೆ ದೌರ್ಜನ್ಯ ಹೆಚ್ಚಾಗಿ ವ್ಯಕ್ತಿಗಳ (ಬಂಡಾಯವೆದ್ದ ಅಥವಾ ಎಲ್ಲರನ್ನೂ ಬೆದರಿಸುವ ಅಸ್ತ್ರವಾಗಿ) ಮೇಲೆ ಇದ್ದಿದ್ದು, (ಅದು ಮುಂದುವರೆಯುತ್ತಲೇ) ಈಗ ಸಾಮೂಹಿಕ ದಮನದ ದಲಿತ–ವಿರೋಧಿ ದಂಗೆ ರೂಪ ಪಡೆಯಲಾರಂಭಿಸಿತ್ತು. ಕಿಲ್ವೆನ್ಮಣಿ ಬಹುಶಃ ಅದಕ್ಕೆ ಒಂದು ತಿರುಗುಬಿಂದುವಾಯಿತು. ಆನಂತರ ಆಂಧ್ರದ ಕರಮಚೇಡು (1985), ತಮಿಳುನಾಡಿನ ಧರ್ಮಪುರಿ (2012), ಬಿಹಾರಿನ ಬೆಲ್ಚಿ (1977), ಲಕ್ಷ್ಮಣಪುರ ಬಾತೆ (1997) ಕರ್ನಾಟಕದ ಕಂಬಾಲಪಲ್ಲಿ (2000), ಮಹಾರಾಷ್ಟ್ರದ ರಾಮಬಾಯಿ ಕಾಲೋನಿ (1997), ಖೈರ್ಲಾಂಜಿ (2016) ಇಂತಹ ಹಲವು ಸಾಮೂಹಿಕ ದಮನ ಮತ್ತು ನರಮೇಧಗಳನ್ನು ಭಾರತ ಕಂಡಿತು. ಇವೆಲ್ಲದರಲ್ಲೂ ದಲಿತರ ಮೇಲೆ ಸಾಮೂಹಿಕ ದಮನದಲ್ಲಿ ಪೋಲಿಸರ ನಿರ್ಲಕ್ಷ್ಯ ಅಥವಾ ಶಾಮೀಲು, ಕೆಳಕೋರ್ಟುಗಳು ಅಪರಾಧಿಗಳಿಗೆ ಶಿಕ್ಷೆ ಕೊಟ್ಟು ಮೇಲಿನ ಕೋರ್ಟುಗಳಲ್ಲಿ ಖುಲಾಸೆಯಾಗುವುದು, ಘರ್ಷಣೆಯಲ್ಲಿ ದಲಿತರ ಮೇಲೆ ಕೇಸು ಬಿದ್ದು ಅವರಿಗೆ ಶಿಕ್ಷೆಯಾಗುವುದು – ಸಮಾನ ಸಂಗತಿಗಳಾಗಿದ್ದವು.

ಇನ್ನೊಂದು ಕಡೆ ಕಿಲ್ವೆನ್ಮಣಿ ಆಗ ತಾನೇ ಅಧಿಕಾರಕ್ಕೆ ಬಂದಿದ್ದ ಡಿ.ಎಂ.ಕೆ.ಯ 'ಸಾಮಾಜಿಕ ನ್ಯಾಯ'ಕ್ಕೆ ಬದ್ಧತೆಯನ್ನು ಪರೀಕ್ಷೆಗೆ ಒಡ್ಡಿತು. ಕಿಲ್ವೆನ್ಮಣಿ ನರಮೇಧವನ್ನು ಡಿ.ಎಂ.ಕೆ. ಖಂಡಿಸಲಿಲ್ಲ. ಮಾತ್ರವಲ್ಲ, ನರಮೇಧಕ್ಕೆ ದ್ರಾವಿಡ ಚಳುವಳಿಯ ನಾಯಕರ ಪ್ರತಿಕ್ರಿಯೆ, 'ಸಾಮಾಜಿಕ ನ್ಯಾಯ'ಕ್ಕೆ ಅವರ ಬದ್ಧತೆಯ ಪೊಳ್ಳನ್ನು ಕಿಲ್ವೆನ್ಮಣಿ ಬಯಲು ಮಾಡಿತು. ಅಣ್ಣಾದೊರೈ ಅದನ್ನು 'ಒಂದು ಭಗ್ಗನೆ ಮಿಂಚಿದ ಕೋಲ್ಮಿಂಚು ಎಂದು ಮರೆತು ಬಿಡಬೇಕು' ಎಂದರೆ, ಪೆರಿಯಾರ್ "ಕೂಲಿ ಇಷ್ಟೇ ಕೊಡಬೇಕು ಎಂದು ಕೇಳುವಂತದ್ದಲ್ಲ, ಅದು ಮಾರುಕಟ್ಟೆ ಪರಿಸ್ಥಿತಿಗೆ ಅನುಗುಣವಾಗಿ ಕೊಡುವಂತದ್ದು ಎಂದು ತಿಳಿದುಕೊಳ್ಳಬೇಕು'. ಇದನ್ನು ಅರ್ಥ ಮಾಡಿಕೊಳ್ಳದ 'ಕಮ್ಯುನಿಸ್ಟರೇ ಈ ನರಮೇಧಕ್ಕೆ ಹೊಣೆ' ಎಂದರು. ಈ ನರಮೇಧ ನಡೆಸಿದವರು ಆರ್ಥಿಕವಾಗಿ ಬಲಾಢ್ಯರಾಗಿದ್ದ ಹಿಂದುಳಿದ ಜಾತಿಗಳಿಗೆ ಸೇರಿದ್ದು, ಡಿಎಂಕೆ ಇದೇ ಜಾತಿಗಳ ರಾಜಕೀಯ ನೆಲೆ ಹೊಂದಿದ್ದು, ಅವರು ದಲಿತರ ರಕ್ಷಣೆಗೆ ಧಾವಿಸುವುದಿರಲಿ ಅದನ್ನು ಖಂಡಿಸಿದರೂ ರಾಜಕೀಯವಾಗಿ ತೊಂದರೆಯಾಗಬಹುದೆಂದು ಸುಮ್ಮನಿದ್ದರು.

ಇದು ತಮಿಳುನಾಡಿನಲ್ಲಿ ಜಾತಿ–ವರ್ಗ ಅಸಮಾನತೆಗಳ ವಿರುದ್ಧ ಹೋರಾಟಕ್ಕೆ ಹೊಸ ತಿರುವು ಕೊಟ್ಟಿತ್ತು. ಒಂದು ಕಡೆ ಕಮ್ಯುನಿಸ್ಟರು ಜಾತಿ–ವರ್ಗ ಅಸಮಾನತೆಗಳ ವಿರುದ್ಧ ಹೋರಾಟದ ಸಂಕೀರ್ಣತೆಗಳನ್ನು ತಿಳಿಯುತ್ತಾ ಹೋದರೆ, ಇನ್ನೊಂದು ಕಡೆ ದ್ರಾವಿಡ ಚಳುವಳಿಯ ಬೊಗಳೆ 'ಸಾಮಾಜಿಕ ನ್ಯಾಯ'ದ ಭ್ರಮೆ ಹರಿದ ಹೊಸ ದಲಿತ ಚಳುವಳಿಗಳು ಸಂಘಟನೆಗಳು ಮೂಡಿಬಂದವು. ಅವುಗಳಲ್ಲಿ ಕೆಲವು ರಾಜಕೀಯ ಪಕ್ಷಗಳೂ ಆದರೂ, ಅಧಿಕಾರ ಹಿಡಿಯುವ ಧಾವಂತದಲ್ಲಿ ಡಿಎಂಕೆ ಎಐಡಿಎಂಕೆ ಗಳ ಬಾಲಂಗೋಚಿಗಳಾಗಿ ತಮ್ಮ ನೆಲೆ ಕಳೆದುಕೊಳ್ಳುತ್ತಾ ಹೋದವು. ಸಿಪಿಐ(ಎಂ) ಜಾತಿ–ವರ್ಗ ಅಸಮಾನತೆಗಳ ವಿರುದ್ಧ ತನ್ನ ಹೋರಾಟವನ್ನು ಮುಂದುವರೆಸುತ್ತಾ, ಆರ್ಥಿಕ ಶೋಷಣೆ ಮತ್ತು ಸಾಮಾಜಿಕ ದಮನದ ವಿರುದ್ಧ ಒಟ್ಟೊಟ್ಟಿಗೆ ಮಾಡಬೇಕಾದ ಹೋರಾಟದ ಅಗತ್ಯವನ್ನು ಮನಗಂಡಿತು. ಮಧುರೈ ನಲ್ಲಿ 'ಅಸ್ಪೃಶ್ಯತೆ ಗೋಡೆ'ಯನ್ನು ಕೆಡವಿದ ಸಿಪಿಐ(ಎಂ) ನಾಯಕತ್ವದ 'ಜಾತಿ–ವಿನಾಶ ರಂಗ' ಉತ್ತಮ ಮುನ್ನಡೆ ಸಾಧಿಸಿದೆ. ಕಿಲ್ವೆನ್ಮಣಿ ಇಂತಹ ಹೋರಾಟಕ್ಕೆ ಸ್ಫೂರ್ತಿ ಮತ್ತು ಅದರ ಪ್ರತೀಕವೂ ಹೌದು.

ಹಲವು ಸಾಹಿತ್ಯ ಮತ್ತು ಕಲಾ ಕೃತಿಗಳು ಕಿಲ್ವೆನ್ಮಣಿ ನೆನಪನ್ನೂ ಸ್ಫೂರ್ತಿಯನ್ನೂ ಜೀವಂತವಾಗಿಟ್ಟಿವೆ. ಮೈಥಿಲಿ ಶಿವರಾಮನ್ ಅವರು ಇಂಗ್ಲೀಷಿನಲ್ಲಿ ಬರೆದ 'ಹಾಂಟೆಡ್ ಬೈ ಫೈರ್' (ಬೆಂಕಿಯ ಭಯ ಕಾಡಿದಾಗ) ಪ್ರಬಂಧಗಳ ಸಂಕಲನ ಚಳುವಳಿಯ ವಿಶ್ಲೇಷಣೆ ಮಾಡುತ್ತದೆ. 1977 ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಇಂದಿರಾ ಪಾರ್ಥಸಾರಥಿ ಅವರ 1983ರ 'ಕುರುದಿಪ್ಪನಲ್' (ರಕ್ತದ ನದಿ) ಎಂಬ ಕಾದಂಬರಿ ಮತ್ತು ಅದರ ಮೇಲೆ ಆಧಾರಿತ 'ಕಣ್ ಸಿವಾಂತಲ್ ಮಣ್ ಸಿವಕ್ಕುಂ' (ಕಣ್ಣು ಕೆಂಪಾದಾಗ ಮಣ್ಣು ಕೆಂಪಾಗುತ್ತೆ) ಫಿಲಂ ಕಿಲ್ವೆನ್ಮಣಿ ಪ್ರಕರಣದ ಮೇಲೆ ಆಧಾರಿತವಾಗಿವೆ. 2016ರ 'ರಾಮಯ್ಯವಿನ್ ಕುಡಿಸೈ' (ರಾಮಯ್ಯನ ಗುಡಿಸಲು) ಎಂಬ ಡಾಕ್ಯುಮೆಂಟರಿ ಫಿಲಂನಲ್ಲಿ ಈ ನರಮೇಧದಿಂದ ತಪ್ಪಿಸಿಕೊಂಡವರು ತಮ್ಮ ಕತೆ ಹೇಳುತ್ತಾರೆ. ಶರತ್ ಕುಮಾರ, ಪಾರ್ತಿಬನ್ ಮತ್ತು ನಗ್ಮಾ ನಟಿಸಿದ 1977ರ ಫಿಲಂ 'ಅರವಿಂದನ್' ಮತ್ತು ಮೀನಾ ಕಂದಸ್ವಾಮಿ ಅವರ 'ಜಿಪ್ಸಿ ಗಾಡೆಸ್' ಇಂಗ್ಲಿಷ್ ಕಾದಂಬರಿ ಸಹ ಇದೇ ಪ್ರಕರಣ ವಿಷಯವಾಗಿರುವಂತದ್ದು.

ರಾಷ್ಟ್ರವ್ಯಾಪಿ ಸಾರ್ವತಿಕ ಮುಷ್ಕರವನ್ನು ಬೆಂಬಲಿಸಿ, ಹರತಾಳದಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಿ–ಕರ್ನಾಟಕಜೆಸಿಟಿಯು ಮನವಿ

ಪುಟ 8 ರಿಂದ

ಬದ್ಧ ಕಾನೂನಾತ್ಮಕ ಕಾರ್ಮಿಕ ಹಕ್ಕುಗಳನ್ನು ದಮನ ಮಾಡಲು ಹೊರಟಿದೆ.

3. ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ:

ಸಾರ್ವಜನಿಕ ಉದ್ದಿಮೆಗಳು ಪಾವತಿಸುವ ತೆರಿಗೆಗಳು ಮತ್ತು ಲಾಭಾಂಶವು ರಾಷ್ಟ್ರೀಯ ಖಜಾನೆಗೆ ದೊಡ್ಡ ಕೊಡುಗೆ ನೀಡುತ್ತಿವೆ. ಆದರೆ ಕೇಂದ್ರ ಸರ್ಕಾರ ಇಂದು ಲಾಭದಲ್ಲಿರುವ ಸಾರ್ವಜನಿಕ ಉದ್ದಿಮೆಗಳಾದ BEML, BEL, BHEL, HAL ಮುಂತಾದ ಉದ್ದಿಮೆಗಳಲ್ಲಿ 2017–18ನೇ ಸಾಲಿನಲ್ಲಿ 1 ಲಕ್ಷ 57 ಕೋಟಿ ರೂ. ಬಂಡವಾಳ ಹಿಂಪಡೆಯುವ ಮೂಲಕ ಅದರ ಶೇರುಗಳನ್ನು ಖಾಸಗಿಯವರಿಗೆ ಮಾರಾಟ ಮಾಡುತ್ತಿದೆ. ಇತ್ತೀಚೆಗೆ HAL ನಿಂದ ತಯಾರಿಸಬಹುದಾದ ರಫೇಲ್ ಯುದ್ಧ ವಿಮಾನಗಳ ತಯಾರಿಕೆಯನ್ನು ರಿಲೆಯನ್ಸ್ ಕಂಪನಿಗೆ ವಹಿಸಿ ದೇಶದ ಸಾರ್ವಜನಿಕ ಉದ್ದಿಮೆಯಾದ ಊಂಐ ಗೆ ನಷ್ಟವುಂಟು ಮಾಡಿದೆ.

4.ಅಭದ್ರತೆಯ ಬದುಕಿನಲ್ಲಿ ಅಸಂಘಟಿತ ಕಾರ್ಮಿಕರು:

ದೇಶದಲ್ಲಿ ವಿವಿಧ ಕಸಬುಗಳಲ್ಲಿ ತೊಡಗಿರುವ ಶೇ.93 ರಷ್ಟಿರುವ ಮನೆಕೆಲಸಗಾರರು, ಕಟ್ಟಡ ನಿರ್ಮಾಣದ ಕಾರ್ಮಿಕರು, ಬೀದಿ ಬದಿ ವ್ಯಾಪಾರಿಗಳು, ಆಟೋಚಾಲಕರು, ಹಮಾಲಿಗಳು ಹಾಗೂ ಇನ್ನಿತರೆ ಅಸಂಘಟಿತ ಕಾರ್ಮಿಕರು ಯಾವುದೇ ಸಾಮಾಜಿಕ ಭದ್ರತೆಯಿಲ್ಲದೆ ದುಡಿಯುತ್ತಿದ್ದಾರೆ. ಅವರಿಗೆ ಸಂಬಂಧಿಸಿದ ಕಲ್ಯಾಣ ಮಂಡಳಿಗಳಿಗೆ ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಹಣ ನೀಡದೆ ಇರುವ ಕಲ್ಯಾಣ ಯೋಜನೆಗಳನ್ನು ಮೊಟಕುಗೊಳಿಸುತ್ತಿದೆ. ಅಸಂಘಟಿತ ಕಾರ್ಮಿಕರಿಗೆ ಭವಿಷ್ಯನಿಧಿ, ಪಿಂಚಣಿ ಯೋಜನೆ, ವಸತಿ ಯೋಜನೆ ರೂಪಿಸಲು ಹಣವಿಲ್ಲ ಎನ್ನುತ್ತಿದೆ. ವಿವಿಧ ರಾಜ್ಯಗಳ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಗಳಲ್ಲಿನ ನಿಧಿಯನ್ನು ಕೇಂದ್ರ ಸಾಮಾಜಿಕ ಭದ್ರತಾ ನಿಧಿಗೆ ವಶಪಡಿಸಿಕೊಳ್ಳಲು ಕೇಂದ್ರ ಸರ್ಕಾರ ಮುಂದಾಗಿದೆ. ಅದಕ್ಕಾಗಿ ಸಾಮಾಜಿಕ ಭದ್ರತಾ ಸಂಹಿತೆ ತರುತ್ತಿದೆ.

5. ಸ್ಕೀಂ ನೌಕರರನ್ನು ಖಾಯಂ ಮಾಡಿ :

ಅಂಗನವಾಡಿ, ಬಿಸಿಯೂಟ, ಆಶಾ ಮುಂತಾದ ಸ್ಕೀಮುಗಳಲ್ಲಿ ಕೆಲಸ ಮಾಡುವವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ಖಾಯಂ ಮಾಡಿ, ಕನಿಷ್ಠ ವೇತನ, ಮತ್ತು ಪಿಂಚಣಿ ವ್ಯವಸ್ಥೆಗಳನ್ನು ಕೊಡಬೇಕೆಂದು 43 ನೇ ಭಾರತೀಯ ಕಾರ್ಮಿಕ ಸಮ್ಮೇಳನ ಶಿಫಾರಸ್ಸು ಮಾಡಿದೆ. ಆದರೆ ಕೇಂದ್ರ ಸರ್ಕಾರ ಈ ಶಿಫಾರಸ್ಸು ಜಾರಿ ಮಾಡುವ ಬದಲಿಗೆ ICDS ಗೆ 75%, ಬಿಸಿಯೂಟಕ್ಕೆ 40%, ಆಶಾಗಳಿಗೆ 40% ಅನುದಾನ ಕಡಿತ ಮಾಡಿ NGO ಗಳಿಗೆ ಕೊಡಲು ಹೊರಟಿದೆ.

6. ಕೃಷಿ ಬಿಕ್ಕಟ್ಟು: ಹೆಚ್ಚುತ್ತಿರುವ ರೈತರ ಆತ್ಮಹತ್ಯೆ:

ತೀವ್ರವಾಗುತ್ತಿರುವ ಕಾರ್ಷಿಕ ಬಿಕ್ಕಟ್ಟು ಗ್ರಾಮೀಣ ಭಾರತದಲ್ಲಿ ಅಪಾರ ಸಂಕಷ್ಟ ಉಂಟುಮಾಡಿದೆ. ಡಾ॥ ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ರೈತರ ಬೆಳೆಗಳಿಗೆ ಕೃಷಿ ವೆಚ್ಚದ ಒಂದುವರೆ ಪಟ್ಟು ಬೆಂಬಲ ಬೆಲೆಯನ್ನು ನಿಗದಿ ಮಾಡಲು ಕೇಂದ್ರ ಸರ್ಕಾರ ಮುಂದಾಗುತ್ತಿಲ್ಲ. ಸಂಕಷ್ಟದಲ್ಲಿರುವ ರೈತರ ಸಾಲ ಮನ್ನಾಗೆ ಕ್ರಮ ವಹಿಸುತ್ತಿಲ್ಲ. ಇದರಿಂದಾಗಿ ದೇಶದಲ್ಲಿ ರೈತರ ಆತ್ಮಹತ್ಯೆಗಳು ಹೆಚ್ಚುತ್ತಿವೆ. ಅಲ್ಲದೆ ಕೇಂದ್ರ ಸರ್ಕಾರ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಬಜೆಟ್‌ನಲ್ಲಿ ಹಣ ಕಡಿತ ಮಾಡಿ ಕೂಲಿಕಾರರ ಹೊಟ್ಟೆ ಮೇಲೆ ಬರೆ ಎಳೆದಿದೆ.

ಇಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಜನವಿರೋಧಿ, ಕಾರ್ಮಿಕ ವಿರೋಧಿ, ದೇಶವಿರೋಧಿ



ನೀತಿಗಳನ್ನು ಹಿಮ್ಮೆಟ್ಟಿಸಿ ದುಡಿಯುವ ಜನರ ಹಕ್ಕುಗಳ ರಕ್ಷಣೆಗಾಗಿ, ದೇಶದ ಉಳಿವಿಗಾಗಿ ಉತ್ತಮ ಜೀವನ ಮತ್ತು ಭವಿಷ್ಯಕ್ಕಾಗಿ **2019ರ ಜನವರಿ 8 ಮತ್ತು 9ರಂದು ರಾಷ್ಟ್ರವ್ಯಾಪಿ ಸಾರ್ವತಿಕ ಮುಷ್ಕರಕ್ಕೆ ಕೇಂದ್ರ ಕಾರ್ಮಿಕ ಸಂಘಟನೆಗಳು ಜಂಟಿಯಾಗಿ ಕರೆ ನೀಡಿವೆ. ದೇಶಪ್ರೇಮಿಗಳಾದ ಕಾರ್ಮಿಕರು, ನೌಕರರು, ರೈತರು, ಮಹಿಳೆಯರು, ವಿದ್ಯಾರ್ಥಿ ಯುವಜನರು, ನಾಗರೀಕರು ಮುಷ್ಕರವನ್ನು ಬೆಂಬಲಿಸಿ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ಮನವಿ ಮಾಡುತ್ತೇವೆ.**

ಬನ್ನಿ, ಕಾರ್ಖಾನೆ, ಸಾರಿಗೆ, ವ್ಯಾಪಾರ – ವಾಣಿಜ್ಯ, ಬ್ಯಾಂಕ್, ವಿಮೆ, ಶಾಲಾ–ಕಾಲೇಜು, ರೈಲ್ವೆ, ವಿಮಾನ, ಮೆಟ್ರೋ, ವಿವಿಧ ಸಂಸ್ಥೆಗಳಲ್ಲಿ ಕೆಲಸ ಸ್ಥಗಿತಗೊಳಿಸಿ ಎರಡು ದಿನಗಳ ಹರತಾಳ ಆಚರಿಸಿ, ಜನ ವಿರೋಧಿ – ಕಾರ್ಮಿಕ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಿ.

“ಸಮೂಹ ಮಾಧ್ಯಮ ಮತ್ತು ಬಂಡಾಯ ಪ್ರಜ್ಞೆ” ಕಾರ್ಯಾಗಾರ

‘ಬಂಡಾಯವೆಂದರೆ ಬದಲಾವಣೆ’

ಕೆ.ಇ. ಸಿದ್ದಯ್ಯ



2018 ಡಿಸೆಂಬರ್ 8 ಮತ್ತು 9ರಂದು ತುಮಕೂರಿನಲ್ಲಿ ನಡೆದ “ಸಮೂಹ ಮಾಧ್ಯಮ ಮತ್ತು ಬಂಡಾಯ ಪ್ರಜ್ಞೆ” ರಾಜ್ಯಮಟ್ಟದ ಕಾರ್ಯಾಗಾರ ಯುವ ಪೀಳಿಗೆಯ ಜನರಲ್ಲಿ ಬಂಡಾಯದ ಬೀಜಗಳನ್ನು ಬಿತ್ತುವಲ್ಲಿ ಯಶಸ್ಸು ಕಂಡಿದ್ದು ಬಂಡಾಯದ ಮನೋಭಾವ ಬೆಳೆಯಲು ಅನುವು ಮಾಡಿಕೊಟ್ಟಿದೆ.

ಬಂಡಾಯ ಸಾಹಿತ್ಯ ಸಂಘಟನೆ ಆಯೋಜಿಸಿದ್ದ ರಾಜ್ಯಮಟ್ಟದ ಕಾರ್ಯಾಗಾರವನ್ನು ಗ್ರಾಮೀಣ ಜನರ ಬಗ್ಗೆ ವಿಶೇಷ ಕಾಳಜಿ ಹೊಂದಿರುವ ಹಿರಿಯ ಪತ್ರಕರ್ತ ಪಿ.ಸಾಯಿನಾಥ್ ಉದ್ಘಾಟಿಸಿ ಕಾರ್ಪೋರೇಟ್ ಸಂಸ್ಥೆಗಳು ಮತ್ತು ಕೆಲವೇ ಮಂದಿ ಶ್ರೀಮಂತರು ಮೀಡಿಯಾವನ್ನು ನಿಯಂತ್ರಿಸುತ್ತಿರುವ ಬಗ್ಗೆ ಎಲ್ಲರ ಗಮನ ಸೆಳೆದರು. ಉದ್ದಿಮೆದಾರರು ಮತ್ತು ಕಾರ್ಪೋರೇಟ್ ಸಂಸ್ಥೆಗಳು ರೈತರ, ಬಡವರು ಮತ್ತು ಮಹಿಳೆಯರು ಮತ್ತು ಗ್ರಾಮೀಣ ಜನರ ಸಮಸ್ಯೆಗಳ ಕುರಿತು ಗಮನಹರಿಸುತ್ತಿಲ್ಲವೆಂದು ಒತ್ತಿ ಹೇಳಿದರು.

ಕಾರ್ಪೋರೇಟ್ ಸಂಸ್ಥೆಗಳ ಬದಲು ಲಾಭರಹಿತ ಸಂಸ್ಥೆಗಳನ್ನು ಬೆಂಬಲಿಸಬೇಕಾಗಿದೆ. ಕಾರ್ಪೋರೇಟ್ ಸಂಸ್ಥೆಗಳ ಒಡೆತನ ಕೆಲವೇ ವ್ಯಕ್ತಿಗಳಿಗೆ ಸೇರಿದೆ. ಹಾಗಾಗಿ ನಾವು ಕಾರ್ಪೋರೇಟ್ ಅಲ್ಲದ ಸಂಸ್ಥೆಗಳನ್ನು ಗಟ್ಟಿಗೊಳಿಸಬೇಕಾದ ಅನಿವಾರ್ಯತೆ ಬಂದೊದಗಿದೆ. ಡಿಜಿಟಲ್ ಯುಗದಲ್ಲಿ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿದೆ. ಸ್ವಾತಂತ್ರ್ಯ ಮತ್ತು ಖಾಸಗಿತನ ನಮ್ಮ ಇಲ್ಲವಾಗಿದ್ದು ಕೆಲವೇ ವ್ಯಕ್ತಿಗಳು ನಿಯಂತ್ರಿಸುತ್ತಿದ್ದಾರೆ.

ದೇಶದಲ್ಲಿ ರೈತರು, ಕೃಷಿ ಕೂಲಿಕಾರರು, ರೈತ ಮಹಿಳೆಯರು, ಆದಿವಾಸಿಗಳು ಕೃಷಿಕರ ವ್ಯಾಪ್ತಿಯಲ್ಲಿ ಬರುತ್ತಾರೆ. ಅವರೆಲ್ಲರೂ ಸಂಕಷ್ಟ ಎದುರಿಸುತ್ತಿದ್ದಾರೆ. ಹೀಗಾಗಿ ರೈತ ಎಂಬ ಪದದ ವ್ಯಾಪ್ತಿ ವಿಸ್ತರಿಸಬೇಕಾಗಿದೆ. ರೈತರ ಸಂಕಟ ನಿವಾರಿಸಲು ನಾವೂ ರೈತರು ಎಂದು ಹೇಳಿಕೊಳ್ಳಬೇಕಾದಂತಹ ಪರಿಸ್ಥಿತಿ ಬಂದಿದೆ. ಇಲ್ಲದಿದ್ದರೆ ರೈತರಿಗೆ ಉಳಿಗಾಲವಿಲ್ಲ ಅವರ ಭಾಷಣದಲ್ಲಿ ಪ್ರಸ್ತಾಪಿಸಿದರು.

ಕಾರ್ಯಕ್ರಮದ ಆಧ್ಯಕ್ಷತೆ ವಹಿಸಿದ್ದ ನಾಡೋಜ ಬರಗೂರು ರಾಮಚಂದ್ರಪ್ಪ ಎಲ್ಲವೂ ಉದ್ಯಮವಾಗಿ ಪರಿವರ್ತನೆಯಾಗಿದೆ. ಚಲನಚಿತ್ರೋದ್ಯಮ, ಪತ್ರಿಕೋದ್ಯಮ, ಪುಸ್ತಕೋದ್ಯಮವಾಗಿರುವುದರಿಂದ ಸಮಸ್ಯೆ ತಲೆದೋರಿದೆ. ನಾವು ಬದಲಾದ ಕಾಲಘಟ್ಟದಲ್ಲಿದ್ದೇವೆ. ಬಂಡಾಯ ಎಂದರೆ ವಿರೋಧವಲ್ಲ. ಬಂಡಾಯವೆಂದರೆ ಪ್ರತಿಭಟನೆಯಲ್ಲ. ಆಡಂಬರವೂ ಅಲ್ಲ. ಬಂಡಾಯವೆಂದರೆ ಬದಲಾವಣೆ. ಸಮಾಜದಲ್ಲಿ ಬದಲಾವಣೆಯನ್ನು ಬಯಸುವುದೇ ಬಂಡಾಯ ಎಂಬ ಬಗ್ಗೆ ವಿವರಣೆ ನೀಡಿದರು.

ಟಿಆರ್‌ಪಿ ಗಾಗಿ ದೀಪಿಕಾ ಸುದ್ದಿ

ಮೊದಲ ಗೋಷ್ಠಿಯಲ್ಲಿ ‘ವಿದ್ಯುನ್ಮಾನ ಮಾಧ್ಯಮ ಮತ್ತು ಸಾಮಾಜಿಕ ಹೊಣೆ’ ವಿಷಯ ಕುರಿತು ಹಿರಿಯ ಪತ್ರಕರ್ತ ಜಿ.ಎನ್.ಮೋಹನ್ ಉಪನ್ಯಾಸ ನೀಡಿದರು. ಮಾಧ್ಯಮ ಸಂಸ್ಥೆಗಳು ಬೇರೆ ಬೇರೆ ಹೆಸರು ಹೊಂದಿದ್ದರೂ ಅವೆಲ್ಲವೂ ಒಬ್ಬ ವ್ಯಕ್ತಿಯ ಒಡೆತನಕ್ಕೆ ಸೇರಿವೆ. ಟಿಆರ್‌ಪಿ ಗಾಗಿ ದೀಪಿಕಾ ಪಡುಕೋಣೆ ಸೌಂದರ್ಯ, ತಿನ್ನುವ ಊಟ, ಧರಿಸುವ ಉಡುಪು ಬಗ್ಗೆ ಸುದ್ದಿಯಾಗುತ್ತದೆ. ರೈತರ ಸಮಸ್ಯೆಗಳ ಕುರಿತು ಸುದ್ದಿಯಾಗುವುದಿಲ್ಲ. ಟಿಆರ್‌ಪಿ ಹೆಸರಲ್ಲಿ ಜನರಿಗೆ ಬೇಡದ ಸುದ್ದಿ ಪ್ರಸಾರ ಮಾಡಲಾಗುತ್ತಿದೆ. ಇದನ್ನು ಯಾಕೆ ಪ್ರಸಾರ ಮಾಡುತ್ತಿದ್ದೀರಿ,. ಯಾರಿಗೆ ಪ್ರಯೋಜನವಾಗಲಿದೆ ಎಂಬುದನ್ನು ಯಾರೂ ಪ್ರಶ್ನಿಸುತ್ತಿಲ್ಲ ಎಂಬ ಬಗ್ಗೆ ಒತ್ತುಕೊಟ್ಟರು.

‘ರಂಗಭೂಮಿ ಮತ್ತು ಬಂಡಾಯ ಪ್ರಜ್ಞೆ’ ವಿಷಯ ಕುರಿತು ಉಪನ್ಯಾಸ ನೀಡಿದ ರಂಗಕರ್ಮಿ ಬಸವಲಿಂಗಯ್ಯ ಉತ್ತರಪ್ರದೇಶದ ಮುಖ್ಯಮಂತ್ರಿ ಆದಿತ್ಯನಾಥ್ ದೇವರುಗಳಿಗೂ ಜಾತಿ ಸರ್ಟಿಫಿಕೇಟ್ ಕೊಟ್ಟು ಅಲ್ಲೂ ಮೇಲು ಕೀಳು ಭಾವನೆ ಮೂಡಿಸತೊಡಗಿದ್ದಾರೆ. ಮುಂದೆ ಪ್ರತಿಯೊಂದು ದೇವರು ಜಾತಿ ಪ್ರಮಾಣ ಪತ್ರ ಪಡೆಯಬೇಕಾಗುತ್ತದೆ ಎಂದು ಲೇವಡಿ ಮಾಡಿದರು. ಸರ್ದಾರ್ ವಲ್ಲಭ ಭಾಯ್ ಪಟೇಲ್ ಇಲ್ಲದಿದ್ದರೆ ಭಾರತ ಛಿದ್ರವಾಗಿ ಹೋಗುತ್ತಿತ್ತು. ಪಕ್ಕದ ತಮಿಳುನಾಡು, ಮಹಾರಾಷ್ಟ್ರಕ್ಕೆ ಹೋಗಲು ವಿಸಾ ಬೇಕಾಗಿತ್ತು ಎಂದು ಬಿಂಬಿಸುವ ಪ್ರಯತ್ನವೂ ನಡೆಯುತ್ತಿದ್ದು ಪಟೇಲರು ಇಲ್ಲದೆ ಹೋಗಿದ್ದರೆ ಭಾರತ ಒಂದುಗೂಡುತ್ತಿರಲಿಲ್ಲವೇ? ಎಂದು ಪ್ರಶ್ನಿಸಿದರು. ರಾಮಾಯಣ ಕಾಲದಲ್ಲೇ ಗಣೇಶನಿಗೆ ಪ್ಲಾಸ್ಟಿಕ್ ಸರ್ಜರಿ ಮಾಡಿದ್ದರು. ನಮ್ಮಲ್ಲಿ ಆಗಲೇ ಪ್ಲಾಸ್ಟಿಕ್ ಸರ್ಜರಿ ಮಾಡುತ್ತಿದ್ದರು ಎಂದು ಸುಳ್ಳು ಹೇಳುವುದು ನಿರಂತರವಾಗಿ ನಡೆಯುತ್ತಿದ್ದು ಗಣಪತಿ ಅರ್ಧ ಮನುಷ್ಯ, ಅರ್ಧ ಆನೆ ತಲೆ ಇದೆ. ಇದು ಹೇಗೆ ಸಾಧ್ಯ ಎಂದು ಯಾರೂ ಪ್ರಶ್ನಿಸಿಕೊಳ್ಳುವುದಿಲ್ಲ ಎಂದು ಯುವಕರ ಗಮನ ಸೆಳೆದರು.

ಜಾಹಿರಾತುಗಳಿಲ್ಲದ ಪತ್ರಿಕೆ ಸಾಧ್ಯವಿಲ್ಲವೇ?

ಎರಡನೇ ದಿನ ಸಮಾರೋಪ ಸಮಾರಂಭ ನಡೆಯಿತು. ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಸಮಾರೋಪ ಭಾಷಣ ಮಾಡಿ ಓದುಗ ವರ್ಗದ ಮಹತ್ವದ ಬಗ್ಗೆ ತಿಳಿಸಿದರು. ಪತ್ರಿಕೆಯಲ್ಲಿ ಜಾಹಿರಾತು ಜಾಸ್ತಿ ಇದೆ. ಬಲಪಂಥೀಯ ನಿಲುವುಗಳು ಹೆಚ್ಚಾಗಿ ಬರುತ್ತಿವೆ ಎಂಬುದನ್ನು ಬಿಟ್ಟು ಓದುಗರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಬೆಲೆ ಸಮರದ ಅತ್ಯಂತ ಘೋರ ರೂಪ ಈಗ ನೋಡುತ್ತಿದ್ದೇವೆ. ಪತ್ರಿಕೆಯ ವೆಚ್ಚ ಸರಿದೂಗಿಸಲು ಮಾಲಿಕರು ಜಾಹಿರಾತು ಪ್ರಕಟಿಸಲು ಆರಂಭಿಸಿದರು. ಈಗ ಪತ್ರಿಕೆಗಳು ಜಾಹಿರಾತುಗಳಿಂದಲೇ ತುಂಬಿ ಹೋಗಿವೆ. ಜಾಹಿರಾತುಗಳಿಲ್ಲದ ಪತ್ರಿಕೆ ನೋಡಲು ಸಾಧ್ಯವಾಗಿಲ್ಲ. ಏಕೆಂದರೆ ಓದುಗರ ಋಣದಲ್ಲಿ ಪತ್ರಿಕೆಗಳು ಇರಬೇಕು. ಅದಕ್ಕಾಗಿ ಓದುಗರು ಹೆಚ್ಚಿನ ಬೆಲೆ ಕೊಟ್ಟು ಪತ್ರಿಕೆ ಕೊಂಡುಕೊಳ್ಳಬೇಕು. ಇಲ್ಲದೇ ಹೋದರೆ ಮಾಲಿಕರು ಕೊಟ್ಟ ಸುದ್ದಿಯನ್ನೇ ಓದಬೇಕಾಗಿದೆ ಎಂದರು.

ಜಾಹಿರಾತುಗಳು ಹೆಚ್ಚುತ್ತಿರುವ ಬಗ್ಗೆ ಮಾಲಿಕರನ್ನು ದೂರಿದರೆ ಪ್ರಯೋಜನವಿಲ್ಲ. ನಮ್ಮನ್ನು ಇಂತಹ ಸಭೆಸಮಾರಂಭಗಳಿಗೆ ಕರೆಯುವ ಬದಲು ಪತ್ರಿಕೆಗಳ ಮಾಲಿಕರನ್ನು ಕರೆದು ಚರ್ಚಿಸಬೇಕು. ಮಾಲಿಕರಿಗೂ ಸಮಸ್ಯೆಗಳು, ಕಷ್ಟಗಳು ಇವೆ. ಹೀಗಾಗಿ ಅವರ ಸಮಸ್ಯೆಗಳನ್ನು ಓದುಗರಾದ ನಾವು ಕೇಳಿಸಿಕೊಳ್ಳಬೇಕು. ಓದುಗ ಮತ್ತು ಮಾಲಿಕ ಪರಸ್ಪರ ಕುಳಿತು ಚರ್ಚಿಸುವುದರಿಂದ ಹಲವು ಸಮಸ್ಯೆಗಳು ಬಗೆಹರಿಯುತ್ತವೆ. ನಾವು ದೂರುವುದು ನಿಲ್ಲುತ್ತದೆ. ಇಂದು ಒಂದು ಪತ್ರಿಕೆಗೆ 10 ರೂಪಾಯಿ ವೆಚ್ಚ ವಾಗುತ್ತದೆ. ಅಷ್ಟು ಹಣವನ್ನು ಓದುಗರು ಮಾಲಿಕರಿಗೆ ನೀಡಿದರೆ ನಾವು ನಮ್ಮ ಸುದ್ದಿಗಳನ್ನು ನಿರೀಕ್ಷಿಸಲು ಅವಕಾಶವಿರುತ್ತದೆ.

ಪತ್ರಿಕೆಗಳು ಓದುಗರನ್ನು ಗ್ರಾಹಕರನ್ನಾಗಿ ಕಾಣಬಾರದು. ಹಾಗೆ ನೋಡಿದರೆ ಗ್ರಾಹಕ ಪತ್ರಿಕೆ ಕೊಳ್ಳುವುದನ್ನು ನಿಲ್ಲಿಸುತ್ತಾನೆ. ಆಗ ಪತ್ರಿಕೆಗಳು ಮುಚ್ಚಿ ಹೋಗುತ್ತವೆ. ಇದನ್ನು ಪ್ರತಿಯೊಬ್ಬ ಓದುಗನೂ ಅರ್ಥಮಾಡಿಕೊಳ್ಳಬೇಕು. ನಾವು ನೈತಿಕವಾಗಿ ಸರಿಯಿರಬೇಕು. ಆಗ ಪ್ರಶ್ನಿಸಲು ಹಕ್ಕಿರುತ್ತದೆ. ಹೀಗೆ ಮಾಡುವುದರಿಂದ ಪತ್ರಿಕೆಗಳು ಮತ್ತು ಪತ್ರಕರ್ತರು ಸರಿದಾರಿಯಲ್ಲಿ ನಡೆಯಬಹುದು ಅದು ಬಿಟ್ಟು ದೂರುವುದರಿಂದ ಪ್ರಯೋಜನವಿಲ್ಲ. ಇತ್ತೀಚಿನ ದಿನಗಳಲ್ಲಿ ವೈದ್ಯರು, ಸಾಹಿತಿಗಳು, ಸೇರಿದಂತೆ ಎಲ್ಲ ರಂಗವು ಕಲುಷಿತವಾಗಿದೆ. ಹಾಗೆಯೇ ಪತ್ರಕರ್ತನೂ ಕೂಡ ಭ್ರಷ್ಟನಾಗಿದ್ದಾನೆ. ಇದು ಹೋಗಬೇಕಾದ ನಾವು ಮೊದಲು ಸರಿಯಾಗಿರಬೇಕು.

ಹಿಂದೂ ಸಮಾಜೋತ್ಸವ, ನುಡಿಸಿರಿ, ಬಂಡಾಯ ಒಂದೇ ಅಲ್ಲ

ಒಂದು ಪತ್ರಿಕೆ ಎಲ್ಲಾ ಅನುಭವಗಳನ್ನು ಒಳಗೊಳ್ಳಬೇಕು. ಎಲ್ಲಾ ವರ್ಗದ ಪತ್ರಕರ್ತರಿಂದ ಕೂಡಿರಬೇಕು. ಇತ್ತೀಚೆಗೆ ಸಂಪಾದಕರೊಬ್ಬರು ಮಾಧ್ಯಮ ಕ್ಷೇತ್ರದಲ್ಲಿ ನಮ್ಮವರೇ ಹೆಚ್ಚಾಗಿದ್ದಾರೆ ಎಂದು ಹೇಳಿದರು. ಅಲ್ಲಿ ಕೆಲಸ ಮಾಡುವವರು ಪೂರ್ವ ಗ್ರಹಪೀಡಿತರಾಗಿರುತ್ತಾರೆ. ಯಾಕೆಂದರೆ ಅದು ಜಾತಿಯ ಕಾರಣಕ್ಕೆ. ನಾವು ಇಂದು ತೀವ್ರ ಸಂಘರ್ಷದ ಯುದ್ಧಭೂಮಿಯಲ್ಲಿ ಇದ್ದೇವೆ. ಸೈದ್ಧಾಂತಿಕ ಪೊಳ್ಳುತನದವರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ಹಿಂದೂ ಸಮಾಜೋತ್ಸವ, ನುಡಿಸಿರಿ, ಬಂಡಾಯ ಕಾರ್ಯಾಗಾರ ಎಲ್ಲವೂ ಒಂದೇ ಎಂದು ತಿಳಿದುಕೊಳ್ಳುವುದು ಅಪಾಯಕಾರಿ ಬೆಳವಣಿಗೆ ಎಂದು ವಿಶ್ಲೇಷಿಸಿದರು.

ಇತ್ತೀಚೆಗೆ ಕುಲಪತಿಯೊಬ್ಬರು ನುಡಿಸಿರಿಗೆ ಹೋದರು. ಇದಕ್ಕೆ ತೀವ್ರ ವಿರೋಧ ವ್ಯಕ್ತವಾಯಿತು. ಆಗ ಅವರು ಬಂಡಾಯದವರು ಯಾವ ಕಾರ್ಯಕ್ರಮಗಳಿಗೆ ಬೇಕಾದರೂ ಹೋಗಬಹುದು ಎಂದು ತೀರ್ಮಾನಿಸಲಾಗಿದೆ ಎಂದು ಸಮರ್ಥಿಸಿಕೊಂಡರು. ನುಡಿಸಿರಿ ಮತ್ತು ಹಿಂದೂಸಮಾಜೋತ್ಸವ ನಡೆಸುವ ವ್ಯಕ್ತಿ ಮೋಹನ್ ಆಳ್ವ ಒಬ್ಬರೇ. ಹಾಗಾಗಿ ವಿಸಿ ಹಿಂದೂ ಸಮಾಜೋತ್ಸವಕ್ಕೆ ಹೋಗಿ ಮಾತನಾಡಬಹುದು. ಬದಲಾವಣೆ ಮಾಡಬಹುದು. ಬರಗೂರು ರಾಮಚಂದ್ರಪ್ಪ ಅವರಿಗೆ ಸತ್ಯದ ಅರಿವಾಗಿ ಮೋಹನ್ ಆಳ್ವರಿಂದ ತೆಗೆದುಕೊಂಡ ಹಣವನ್ನು ವಾಪಸ್ ಮಾಡಿದರು ಎಂದು ಸ್ಪಷ್ಟಪಡಿಸಿದರು.

ಕಳೆದ ಐದು ವರ್ಷಗಳಲ್ಲಿ ನರೇಂದ್ರ ಮೋದಿ ವಿರುದ್ಧ ಪತ್ರಿಕೆಗಳು ಒಂದು ಸುದ್ದಿಯನ್ನೂ ಬರೆದಿಲ್ಲ. ಒಂದು ವಿರುದ್ದದ ಸುದ್ದಿ ಬರುತ್ತಿದ್ದಂತೆ ಆ ಮಾಧ್ಯಮ ಸಂಸ್ಥೆಯ ಮೇಲೆ ತನಿಖೆ ನಡೆಸಲಾಗುತ್ತದೆ. ಆ ಪತ್ರಕರ್ತ ಯಾರು? ಎಲ್ಲಿಯವನು ಹೀಗೆ ಆತನ ಹಿನ್ನೆಯನ್ನು ಕಲೆಹಾಕಿ ಕಿರುಕುಳ ಕೊಡುವ ಘಟನೆಗಳು ನಮ್ಮ ಮುಂದೆ ನಡೆದು ಹೋಗಿವೆ. ಮುಂದಿನ ದಿನಗಳಲ್ಲಿ ಕೇಬಲ್‌ಗಳು ಬಿದ್ದುಹೋಗಲಿವೆ. ಕಾರ್ಪೋರೇಟ್ ಸಂಸ್ಥೆಯೊಂದು ಈ ಕ್ಷೇತ್ರಕ್ಕೆ ಈಗಾಗಲೇ ಧುಮುಕಿದೆ. ಅನಿಲ್ ಅಂಬಾನಿ ಕೇಬಲ್ ಲೋಕಕ್ಕೆ ಕೋಟ್ಯಂತರ ರೂಪಾಯಿ ಹೂಡಿಕೆ ಮಾಡಿದ್ದಾರೆ. ಇನ್ನು ಮುಂದಿ ಇಂಟರ್ ನೆಟ್‌ನಲ್ಲಿ ನಾವು ಟಿವಿಗಳನ್ನು ನೋಡಬಹುದಾಗಿದೆ ಇದು ಅಪಾಯದ ಸಂಗತಿ ಎಂದರು.

ಬಂಡಾಯದ ಆಶಯಗಳು ಬತ್ತಿಲ್ಲ

ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಚಂದ್ರಶೇಖರಪಾಟೀಲ್ ಬಂಡಾಯ ಕೋಮಾದಲ್ಲಿದೆ ಎಂದು ಕೆಲವರು ಹಬ್ಬಿಸುತ್ತಿದ್ದಾರೆ ಇದು ಅರ್ಧ ಸತ್ಯ. ಬಂಡಾಯದ ಆಶಯಗಳು ಇಂದಿಗೂ ಬತ್ತಿಲ್ಲ. ಅದು ಕೆರೆ ಇದ್ದಂತೆ. ಸೆಲೆಗಳು ಹಾಗೆಯೇ ಇವೆ. ಹಿಂದಿನ ಹೋರಾಟದ ಬಿರುಸು ಇಂದು ಇಲ್ಲ ಎಂಬುದು ಸತ್ಯ. ಇವತ್ತಿನ ಸಮಸ್ಯೆಗಳು ಭೀಕರವಾಗಿವೆ.

ಸಾಹಿತಿ ಕೆ.ಬಿ.ಸಿದ್ದಯ್ಯ ಮಾತನಾಡಿ, ಬಂಡಾಯ ಸಾಹಿತ್ಯ ಸಂಘಟನೆ ದಲಿತರು, ರೈತರು ಮತ್ತು ಸ್ತ್ರೀ ಚಳವಳಿಯನ್ನು ಒಳಗೊಳ್ಳ ಬೇಕು. ಆ ಮೂಲಕ ಮರುಹುಟ್ಟು ಪಡೆಯಬೇಕು. ಬಂಡಾಯ ಸಂಘಟನೆ ಏಕಕಾಲದಲ್ಲಿ ಏಕವಾಗಿಯೂ ಬಹುತ್ವ ಚಳವಳಿ ಆಗಿಯೂ ಮುನ್ನಡೆಯಬೇಕು. ದಲಿತ ಚಳವಳಿಯ ವಿಶಾಲ ತಳಹದಿಯೂ ಬಂಡಾಯದಲ್ಲಿ ನೆಲೆಗೊಳ್ಳಬೇಕು. ಆಗ ಬಂಡಾಯ ಸಾಹಿತ್ಯ ಸಂಘಟನೆಗೆ ಬಲ ಬರುತ್ತದೆ. ಇಲ್ಲದೇ ಹೋದರೆ ಸ್ಥಗಿತಗೊಳ್ಳುತ್ತದೆ. ದರ್ಲೈಸ್ತ್ರೀ ಚಳವಳಿ ಒಳಗೊಂಡರ ಬಂಡಾಯದ ವ್ಯಾಪ್ತಿ ವಿಸ್ತರಿಸುತ್ತದೆ. ಇದಕ್ಕೆ ಈ ಕಾರ್ಯಾಗಾರ ಮುನ್ನಡಿ ಹಾಡಬೇಕು ಎಂದು ಅಭಿಪ್ರಾಯಪಟ್ಟರು. ●



48,000 ಕೋಟಿ ರೂ. ನಷ್ಟದ ಎಚ್ಚರಿಕೆಯನ್ನು ಉಪೇಕ್ಷಿಸಿದ ಬುಲೆಟ್ ರೈಲು ಖಯಾಲಿ

ನಮ್ಮ ಅಚ್ಛೇ ದಿನ್ ಬುಲೆಟ್ ರೈಲು ಖಯಾಲಿ ಕತೆಗಳು ಬೆಳೆಯುತ್ತಲೇ ಇವೆ. ಇತ್ತೀಚಿನ ಸುದ್ದಿಯೆಂದರೆ, ಬಡ ರೈತರು ಮತ್ತು ಆದಿವಾಸಿಗಳ ಆಕ್ಷೇಪಗಳನ್ನು ಮಾತ್ರವೇ ಅಲ್ಲ, ಸ್ವತಃ ತನ್ನದೇ ಹಲವು ಇಲಾಖೆಗಳು ಈ ಪ್ರಾಜೆಕ್ಟಿನಿಂದ ಮಹಾರಾಷ್ಟ್ರ ಸರಕಾರಕ್ಕೆ 48,000 ಕೋಟಿ ರೂ.ಗಳ ನಷ್ಟವಾಗುತ್ತದೆ ಎಂದು ಎಚ್ಚರಿಸಿರುವುದನ್ನೂ ಉಪೇಕ್ಷಿಸಿ ಮೋದಿಯವರ ಖಯಾಲಿಯ ಈಡೇರಿಕೆಗಾಗಿ ಮಹಾರಾಷ್ಟ್ರ ಸರಕಾರ ಮುಂದೆ ಸಾಗುತ್ತಿದೆ. ರಾಜ್ಯ ಸರಕಾರ ನಿರ್ಮಿಸಿರುವ ಬಾಂದ್ರಾ-ಕುರ್ಲಾ ಸಂಕೀರ್ಣವನ್ನು ಬುಲೆಟ್ ರೈಲು ವ್ಯವಸ್ಥೆಯ ಕೊನೆಯ ನಿಲ್ದಾಣಕ್ಕೆ ಕೊಡುವುದರಿಂದಾಗಿ ರಾಜ್ಯ ಸರಕಾರ 48 ಸಾವಿರ ಕೋಟಿ ಆದಾಯವನ್ನು ಕಳಕೊಳ್ಳುತ್ತದೆ ಎಂದು ಹಣಕಾಸು, ಯೋಜನೆ ಮತ್ತು ಸಾರಿಗೆ ಇಲಾಖೆಗಳು ಹಾಗೂ ಮುಂಬೈ ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ(ಎಂಎಂಆರ್‌ಡಿಎ) ಆಕ್ಷೇಪ ವ್ಯಕ್ತಪಡಿಸಿದ್ದವು. ಆದರೆ ಸರಕಾರ ಅವನ್ನೆಲ್ಲ ಉಪೇಕ್ಷಿಸಿದೆ ಎಂದು ಆರ್‌ಟಿಐ(ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಕೇಳಿದ ಪ್ರಶ್ನೆಗೆ) ಉತ್ತರದಿಂದ ತಿಳಿದು ಬಂದಿದೆಯೆಂದು ವರದಿಯಾಗಿದೆ.

ಇನ್ನೊಂದು ಆರ್‌ಟಿಐ ಉತ್ತರದ ಪ್ರಕಾರ ಈ ಬುಲೆಟ್ ರೈಲು ಯೋಜನೆಯ ಬಗ್ಗೆ ಅಧ್ಯಯನ ಮಾಡಲು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಅವರಲ್ಲದೆ ಇತರ ಮೂವರು ಮಂತ್ರಿಗಳಿದ್ದ ಒಂದು ಉಪಸಮಿತಿಯನ್ನು ಫೆಬ್ರುವರಿ 27, 2017ರಲ್ಲಿ ರಚಿಸಲಾಗಿತ್ತು. ಆದರೆ ನವಂಬರ್ 26, 2018ರ ವರೆಗೂ ಈ ಉಪಸಮಿತಿಯ ಒಂದೇ ಒಂದು ಸಭೆಯೂ ನಡೆದಿಲ್ಲ. ಆದರೂ ಸಪ್ಟಂಬರ್ 12, 2017ರಲ್ಲಿ ಈ ಪ್ರಾಜೆಕ್ಟ್ ಮಂಜೂರಾತಿ ಪಡೆದಿದೆ!

ಈ ಮೊದಲು, ಭೂಸ್ವಾಧೀನ ಕಾಯ್ದೆಯ ಅಡಿಯಲ್ಲಿ ವಿಧಿಸಿದ ಕ್ರಮಗಳನ್ನು ಪಾಲಿಸದೆ ಈ ಪ್ರಾಜೆಕ್ಟ್‌ಗಾಗಿ ಭೂಸ್ವಾಧೀನಕ್ಕೆ ಮುಂದಾದ ರಾಜ್ಯ ಸರಕಾರದ ನಡೆಗೆ ಭಾರೀ ಪ್ರತಿರೋಧ ಬಂದಿತ್ತು. ಮಹಾರಾಷ್ಟ್ರ ಮತ್ತು ಗುಜರಾತಿನ ರೈತರು ಮತ್ತು ಆದಿವಾಸಿಗಳು ತಮ್ಮ ಜೀವನೋಪಾಯಗಳನ್ನು ಪ್ರತಿಕೂಲ ರೀತಿಯಲ್ಲಿ ತಟ್ಟುವ ಈ ಪ್ರಾಜೆಕ್ಟನ್ನು ವಿರೋಧಿಸುತ್ತಲೇ ಇದ್ದಾರೆ. ಆದರೂ ಮೋದಿ ಸರಕಾರ ತಮ್ಮ ಪ್ರಧಾನಿಯ ಖಯಾಲಿಗೆ ಕಟ್ಟು ಬಿದ್ದು ಈ ಆಕ್ಷೇಪಗಳನ್ನು ಬದಿಗೊತ್ತಲಾಗುತ್ತಿದೆ.

ಇದನ್ನು ಕಂಡ ರೈತರು ನೇರವಾಗಿ ಈ ಪ್ರಾಜೆಕ್ಟಿಗೆ ಹಣಕಾಸು ಒದಗಿಸುವ ಜಪಾನಿನ ಸಂಸ್ಥೆಗೆ ದೂರನ್ನು ಒಯ್ದಿದ್ದಾರೆ ಎಂದು ಈ ಹಿಂದೆ ವರದಿಯಾಗಿತ್ತು. ಇದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಮೆಟ್ರೋ ರೈಲು ಪರಿಣಿತರು ಆರಂಭದಲ್ಲೇ ಇದನ್ನು ಅನಗತ್ಯ ಖರ್ಚಿನ ಬಾಬತ್ತು ಎಂದಿದ್ದರು.

56 ಅಂಗುಲದ ಎದೆಯ ಪ್ರದರ್ಶನದ ಖಯಾಲಿ!



"ಬುಲೆಟ್ ರೈಲು ಬಿಡಿ, ಸಾಮಾನ್ಯ ಜನರ ರೈಲು ಪ್ರಯಾಣಕ್ಕೆ ಸೌಕರ್ಯಗಳನ್ನು ಕಲ್ಪಿಸಿ"

ಬಿಜೆಪಿಯ ಹಿರಿಯ ಪಂಜಾಬೀ ಮುಖಂಡರಿಂದಲೇ ಆಗ್ರಹ

"ಬುಲೆಟ್ ರೈಲು ಬದಿಗಿಡಿ, ಗಂಟೆಗೆ 120 ಅಥವ 200 ಕಿ.ಮೀ. ಓಡುವ ರೈಲು ಮರೆತು ಬಿಡಿ, ಮೊದಲು ಈಗಿರುವ ರೈಲುಗಳು ಕೆಲಸ ಮಾಡುವಂತಾಗಲಿ...ಶತಾಬ್ಧಿಗಳು ರಾಜಧಾನಿಗಳು ಉತ್ತಮಗೊಂಡಿರಬಹುದು, ಇವು ಶ್ರೀಮಂತರಿಗಾಗಿ ಇರುವ ರೈಲುಗಳು...ಕೂಲಿಕಾರರು, ರೈತರು, ಸೈನಿಕರು ಪ್ರಯಾಣ ಮಾಡುವ ರೈಲುಗಳ ಕತೆಯೇನು, ಮೋದೀಜೀ, ಪೀಯೂಷ್‌ಜೀ?" ಇದು ಪ್ರತಿಪಕ್ಷದ ಮುಖಂಡರ ಪ್ರಶ್ನೆ ಅಲ್ಲ, ಪಂಜಾಬಿನ ಹಿರಿಯ ಬಿಜೆಪಿ ಮುಖಂಡರು ಮತು ಈ ಹಿಂದೆ ಪಂಜಾಬಿ ಮಂತ್ರಿಮಂಡಲದಲ್ಲಿ ಆರೋಗ್ಯಮಂತ್ರಿಗಳಾಗಿದ್ದ ಲಕ್ಷ್ಮಿ ಕಾಂತ ಛಾವ್ಲ ರವರ ಪ್ರಶ್ನೆ. ಸರಯೂ-ಯಮುನಾ 'ಫ್ಲೈಯಿಂಗ್ ಮೇಲ್' ನಲ್ಲಿ ಪ್ರಯಾಣದ ನಂತರ ಅವರು ಈ ಪ್ರಶ್ನೆಯನ್ನು ಕೇಳಿದ್ದಾರೆ ಎಂದು ವರದಿಯಾಗಿದೆ.

'ಅಚ್ಛೇ ದಿನ್'ಗಳು ಕೇವಲ ಬುಲೆಟ್ ರೈಲು, ರಾಜಧಾನಿ, ಶತಾಬ್ದಿವಾಲಾಗಳಿಗೆ ಮಾತ್ರ, ಜನಸಾಮಾನ್ಯರಿಗಾಗಲೀ, ರಾಜ್ಯಕ್ಕಾಗಲೀ ಇದರಿಂದ ಪ್ರಯೋಜನವಿಲ್ಲ ಎಂದು ಈಗಲಾದರೂ ಅವರಿಗೆ ಅರ್ಥವಾಗಿದೆಯೇ ಗೊತ್ತಾಗಿಲ್ಲ.

ಜನವರಿ 3 ರಂದು ಪ್ರಧಾನಿಗಳು ಪಂಜಾಬಿನ ಗುರುದಾಸ್‌ಪುರಕ್ಕೆ ಭೇಟಿ ಕೊಡಲಿದ್ದಾರಂತೆ.

ಒಂದು ದೇಶ-ಒಂದು ತೆರಿಗೆ - ಆದರೆ ಒಂದು ದರ? 6 ತಿಂಗಳ ಹಿಂದೆ 'ಅಸಾಧ್ಯ'-ಈಗ 'ಸಾಧ್ಯ': ಎಲ್ಲವೂ ಚುನಾವಣಾ ಮಹಿಮೆ!

ಜುಲೈ 1, 2018 ರಂದು ಜಿಎಸ್‌ಟಿಯ ಮೊದಲ 'ವಾರ್ಷಿಕೋತ್ಸವ'ದಂದು ಮಾತಾಡುತ್ತ ಪ್ರಧಾನಿಗಳು ಜಿಎಸ್‌ಟಿ ವ್ಯವಸ್ಥೆಯಲ್ಲಿ ಒಂದೇ ತೆರಿಗೆ ದರ ತರಲು ಸಾಧ್ಯವೇ ಇಲ್ಲ ಎಂದು ಹೇಳಿದ್ದರು, ಹಾಲಿಗೂ, ಮರ್ಸಿಡೆಸ್ ಕಾರಿಗೂ ಒಂದೇ ದರ ಸಾಧ್ಯವೇ ಎಂದು ತರ್ಕಬದ್ಧವಾಗಿ ಕೇಳಿದ್ದರು.

ಆದರೆ ಆರು ತಿಂಗಳ ನಂತರ ಅವರ ಹಣಕಾಸು ಮಂತ್ರಿಗಳ ಬೇರೆಯೇ ರಾಗ ಆಲಾಪಿಸುತ್ತಿದ್ದಾರೆ ಎಂದು ವರದಿಯಾಗಿದೆ "ಜಿಎಸ್‌ಟಿ ಅಡಿಯಲ್ಲಿ 12% ಮತ್ತು 18%ದ ಎರಡು ಸ್ಟಾಂಡರ್ಡ್ ದರಗಳ ಬದಲು ಒಂದೇ ದರದತ್ತ ಸಾಗಲು ಕೆಲಸ ಮಾಡುವುದು ಭವಿಷ್ಯದ ರಸ್ತೆ ನಕಾಶೆಯಾಗಬಲ್ಲದು" ಎಂದು ಅವರು ತಮ್ಮ ಬ್ಲಾಗ್‌ನಲ್ಲಿ ಬರೆದಿರುವುದಾಗಿ ನ್ಯೂಸ್ ಸೆಂಟ್ರಲ್ (ಡಿಸೆಂಬರ್ 26) ವರದಿ ಮಾಡಿದೆ.

ಕುತೂಹಲದ ಸಂಗತಿಯೆಂದರೆ ಈ ಬರಹದ ಕೊನೆಯಲ್ಲಿ "ಹೊಣೆಗೇಡಿ ರಾಜಕೀಯ ಮತ್ತು ಹೊಣೆಗೇಡಿ ಅರ್ಥಶಾಸ್ತ್ರ ಎರಡೂ ಪಾತಾಳಕ್ಕೆ ಇಳಿಯುವ ಸ್ಪರ್ಧೆಗಳು" ಎಂದು ಹಣಕಾಸು ಮಂತ್ರಿಗಳು ಹೇಳಿದ್ದಾರಂತೆ. ಜಿಎಸ್‌ಟಿ ಯಂತೆ ನೋಟುರದ್ಧತಿಗೂ ಇದು ಅನ್ವಯವಾಗುತ್ತಿದೆಯೇ ಎಂದೇನೂ ಅವರು ಹೇಳಿಲ್ಲ.

ವ್ಯಾಪಕ ವಿರೋಧದ ಹೊರತಾಗಿಯೂ 5%, 12%,18% ಮತ್ತು 28%ದ ನಾಲ್ಕು ದರಗಳನ್ನು ಹೇರಿದ್ದ ಈ ಸರಕಾರ, ಈಗ ಹಲವು ಸರಕುಗಳನ್ನು 28%ದಿಂದ 18%ದ ವ್ಯಾಪ್ತಿಯೊಳಕ್ಕೆ ತಂದಿದೆ. ಚುನಾವಣೆಗಳು ಸಮೀಪಿಸುತ್ತಿರುವಂತೆ ಹಳೆಯ ಪದಗಳು ಹೊಸ ಅರ್ಥ ಪಡೆದುಕೊಳ್ಳುತ್ತವೆ!

ರಾಮಮಂದಿರ ನಿರ್ಮಾಣವೂ, ಎನ್‌ಡಿಎ ಮಿತ್ರರೂ

2019 ಸಮೀಪಿಸುತ್ತಿರುವಂತೆ, ಮತ್ತು ಅಚ್ಛೇ ದಿನ್ ಭ್ರಮೆ ಹೆಚ್ಚೆಚ್ಚು ನಿರಸನಗೊಳ್ಳುತ್ತಿರುವಂತೆ ರಾಮಮಂದಿರ ನಿರ್ಮಾಣದ ಗದ್ದಲ ಹೆಚ್ಚುತ್ತಿದೆ. ಕೇಸರಿ ಪಡೆಗಳಿಂದ ಇದಕ್ಕಾಗಿ ಒಂದು ಕಾನೂನಿನ ಅಥವ ಸುಗ್ರೀವಾಜ್ಞೆಯ ಬೊಬ್ಬೆ ಕರ್ಕಶಗೊಳ್ಳುತ್ತಿದೆ. ಶಿವಸೇನೆ ಮೂದಲಿಕೆ ತೀಕ್ಷ್ಣಗೊಳ್ಳುತ್ತಿದೆ. ಆದರೆ ಇತರ ಎನ್‌ಡಿಎ ಮಿತ್ರ ಪಕ್ಷಗಳ ಮುಜುಗರವೂ ಹೆಚ್ಚುತ್ತಿದೆ. ಇನ್ನೂ ಎನ್‌ಡಿಎ ಬಿಡಲಾರದ ಅಕಾಲಿ ದಳ, ಜೆಡಿ(ಯು) ಮತ್ತು ರಾಮ್ ವಿಲಾಸ್ ಪಾಸ್ವಾನ್ ರವರ ಎಲ್‌ಜೆಪಿ ಅಯೋಧ್ಯೆ ಕುರಿತಂತೆ ಸುಪ್ರಿಂ ಕೋರ್ಟ್ ತೀರ್ಪಿನ ಹೊರಗೆ ಕಾನೂನು ತರುವುದಕ್ಕಾಗಲೀ, ಸುಗ್ರೀವಾಜ್ಞೆ ಹೊರಡಿಸುವುದಕ್ಕಾಗಲೀ ತಮ್ಮ ತೀವ್ರ ವಿರೋಧ ಇದೆ ಎಂದು ಹೇಳಿರುವುದಾಗಿ ವರದಿಯಾಗಿದೆ.

'ನಮಾಮಿ ಗಂಗೆ'ಯೂ ಸದ್ಯ 'ಜುಮ್ಲಾ' ಪಟ್ಟಿಯಲ್ಲಿ

ಕುಂಭಮೇಳದ ಭರದ ಸಿದ್ಧತೆಯ ಸುದ್ದಿ ಬರುತ್ತಿರುವ ಸಂದರ್ಭದಲ್ಲೇ ಅಚ್ಛೇ ದಿನ್‌ಗಳ ಭಾರೀ ಗದ್ದಲದ 'ನಮಾಮಿ ಗಂಗೆ'ಯ ಸಾಧನೆಯ ಒಂದು ವರದಿ ಬಂದಿದೆ. ಕೇಂದ್ರೀಯ ಮಾಲಿನ್ಯ ಕಹತೋಟಿ ಮಂಡಳಿ(ಸಿಪಿಸಿಬಿ) ವರದಿಯದು. ಅದರ ಪ್ರಕಾರ ಮಳೆಗಾಲದ ನಂತರದ ಪರೀಕ್ಷಣೆಗಳಲ್ಲಿ 39 ಸ್ಥಾನಗಳಲ್ಲಿ ಒಂದರಲ್ಲಿ ಮಾತ್ರವೇ ಗಂಗೆಯ ನೀರು 'ಶುದ್ಧ'ವಾಗಿದೆ. ಮಳೆಗಾಲದ ಮೊದಲಿನ ಪರೀಕ್ಷಣೆಗಳಲ್ಲಿ 41 ರಲ್ಲಿ 37 ಕಡೆಗಳಲ್ಲಿ ಗಂಗೆಯ ನೀರು 'ಸಾಧಾರಣ'ದಿಂದ 'ತೀವ್ರ' ಮಟ್ಟದ ವರೆಗೆ ಮಲಿನಗೊಂಡಿರುವುದು ಕಂಡು ಬಂದಿದೆ ಎಂದು ಸಿಪಿಸಿಬಿ ಪರೀಕ್ಷಣಾ ವರದಿ ಹೇಳಿದೆ. ಹರಿದ್ವಾರದಲ್ಲಿ ಮಾತ್ರವೇ ಮಳೆಗಾಲದ ಮೊದಲು ಮತ್ತು ನಂತರವೂ ನೀರು ಶುದ್ಧವಾಗಿರುವುದು ಕಂಡು ಬಂದಿದೆ.

ಕಳೆದ ನಾಲ್ಕು ವರ್ಷಗಳಲ್ಲಿ 'ನಮಾಮಿ ಗಂಗೆ'ಯ ಜಪ ಹಲವು ಬಾರಿ ಕೇಳಬಂದಿದ್ದರೂ, ತೌಲನಿಕ ಅಧ್ಯಯನದ ಪ್ರಕಾರ ಈ ನಾಲ್ಕು ವರ್ಷಗಳಲ್ಲಿ ಪರಿಸ್ಥಿತಿ ಉತ್ತಮಗೊಂಡಿಲ್ಲ. ಕಳೆದ ವರ್ಷ ಕೇಂದ್ರ ಜಲಸಂಪನ್ಮೂಲಗಳ ಮಂತ್ರಿಗಳು 2019ರ ವೇಳೆಗೆ ಗಂಗೆಯ ನೀರಿನ ಗುಣಮಟ್ಟದಲ್ಲಿ ಕಣ್ಣಿಗೆ ಕಾಣುವಂತಹ ಬದಲಾವಣೆ ಬರುತ್ತದೆ ಎಂದಿದ್ದರು. ಆದರೆ ಅಂತಹ ಲಕ್ಷಣಗಳು ಇನ್ನೂ ಕಾಣ ಬರುತ್ತಿಲ್ಲ ಎನ್ನಲಾಗುತ್ತಿದೆ. ಉತ್ತರಪ್ರದೇಶದ ವಾರಣಾಸಿ, ಪ್ರಯಾಗ ಮತ್ತು ಕಾನ್ಪುರದಲ್ಲಿ ಹಾಗೂ ಉತ್ತರಾಖಂಡದ ಜಗಜೀತ್‌ಪುರದಲ್ಲಿ ಮಲಿನತೆಯ ತೀವ್ರತೆ 2014-15ಕ್ಕೆ ಹೋಲಿಸಿದರೆ ತೀವ್ರಗೊಂಡಿದೆ ಎಂದು ಹೇಳಲಾಗಿದೆ.

ಕೆಲವು ತಿಂಗಳ ಹಿಂದೆ ಬಂದಿರುವ ಒಂದು ವರದಿಯ ಪ್ರಕಾರ ಈ ಯೋಜನೆಯ ಅಡಿಯಲ್ಲಿ 193 ಪ್ರಾಜೆಕ್ಟ್‌ಗಳಿಗೆ 20,601 ಕೋಟಿ ರೂ. ಕೊಡಲಾಗಿದೆ. ಆದರೆ ಮಾರ್ಚ್ 2018ರ ವೇಳೆಗೆ ಇದರಲ್ಲಿ 20% ದಷ್ಟೂ ಬಳಕೆಯಾಗಿರಲಿಲ್ಲ. ಇದೂ ಈ ಹಣಕಾಸು ವರ್ಷ ಕಳೆಯುವಷ್ಟರಲ್ಲಿ ಉತ್ತಮಗೊಳ್ಳುತ್ತದೆ ಎಂದು ಸರಕಾರದ ವಕ್ತಾರರು ಹೇಳುತ್ತಿದ್ದಾರೆ.

ದೇಶ್ ಬದಲ್ ರಹಾ ಹೈ

(ದೇಶ ಬದಲಾಗುತ್ತಿದೆ- ಅಚ್ಚೇ ದಿನ್‌ಗಳ ಪ್ರಧಾನಿ ಉದ್ಗಾರಗಳಲ್ಲಿ ಒಂದು)

ನೀವು ಬಿಹಾರಿಗೆ ವಿಶ್ವಾಸದ್ರೋಹ ಮಾಡಿದ್ದೀರಿ. ನಾನು ಹೋಗುತ್ತೇನೆ
– ಎನ್‌ಡಿಎ ತ್ಯಜಿಸಿರುವ ಆರ್‌ಎಲ್‌ಎಸ್‌ಪಿ ಪಕ್ಷದ ಮುಖಂಡ ಉಪೇಂದ್ರ ಖುಶ್ವಾಹ

ಮುಖಂಡರು ಸೋಲಿನ ಹೊಣೆ ಹೊರಬೇಕು
– ಕೇಂದ್ರ ಮಂತ್ರಿ ಗಡ್ಕರಿ

ಮುಂದಿನ ಪ್ರಧಾನಿ ಯಾರೆಂದು ಭವಿಷ್ಯ ಹೇಳುವುದು ಕಷ್ಟ
–ಬಾಬಾ ರಾಂದೇವ್

ಚೌಕೀದಾರನೇ ಕದಿಯುತ್ತಿದ್ದಾನೆ
–ಶಿವಸೇನಾ ಮುಖಂಡ ಠಕ್ರೆ


ಮರದಲ್ಲಿ ಕುಳಿತ ಹಕ್ಕಿ ಹಾಡುತ್ತಿದೆ: ಮೇರಾ ದೇಶ್ ಬದಲ್ ರಹಾ ಹೈ

ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು,ಟೈಂಸ್ ಆಫ್ ಇಂಡಿಯ



ರೈತರ ಸಾಲಮನ್ನಾ, ಆದಾಯ ದುಪ್ಪಟ್ಟು ಎಲ್ಲವೂ ಮಾಯೆ!

ರೈತರ ಸಾಲಮನ್ನಾದ ಬಗ್ಗೆ ಮೋದಿ ಸರಕಾರ ಪರಿಶೀಲಿಸುತ್ತಿಲ್ಲ ಎಂದು ಕೃಷಿ ರಾಜ್ಯಮಂತ್ರಿಗಳು ಡಿಸೆಂಬರ್ 11 ರಂದು ಲೋಕಸಭೆಗೆ ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರದಲ್ಲಿ ಹೇಳಿದ್ದಾರೆ. "ಇಂತಹ ಮನ್ನಾಗಳು ರಾಜ್ಯದ ಸಾಲ ಸಂಸ್ಕೃತಿಯ ಮೇಲೆ ಪ್ರಭಾವ ಬೀರುತ್ತವೆ., ಏಕೆಂದರೆ ಸಾಲ ಮರುಪಾವತಿ ಮಾಡುವ ಸಾಧ್ಯತೆ ಇದ್ದವರೂ ಸುಸ್ತಿ ಮಾಡಿಕೊಳ್ಳಲು ಇದು ಉತ್ತೇಜನೆ ನೀಡುತ್ತದೆ ಮತ್ತು ನಿಯಮಿತವಾಗಿ ಸಾಲ ಮರುಪಾವತಿ ಮಾಡುವವರಿಗೆ ನಿರುತ್ತೇಜನೆಯಾಗುತ್ತದೆ" ಎಂದು ಅವರು ಇದಕ್ಕೆ ಕಾರಣ ನೀಡಿದ್ದಾರಂತೆ.



ವ್ಯಂಗ್ಯಚಿತ್ರ: ಕೇಶವ್, ದ ಹಿಂದು

ಕಾರ್ಪೊರೇಟ್ ಸಾಲಗಳಿಗೆ ಈ ತರ್ಕ ಅನ್ವಯಿಸುವುದಿಲ್ಲವೇ ಎಂಬ ಪ್ರಶ್ನೆ ಸಹಜವಾಗಿ ಎದ್ದಿದೆ. ಲಕ್ಷ ಕೋಟಿ ರೂ.ಗಳ 'ರೈಟ್ ಆಫ್' ಅಥವ 'ರಿಶೆಡ್ಯೂಲಿಂಗ್' ಪಡೆದ ಕಾರ್ಪೊರೇಟ್ ಕುಳಗಳು ಸಾಲ ಮರುಪಾವತಿ ಮಾಡುವ ಸಾಮರ್ಥ್ಯ ಇಲ್ಲದವರು ಎಂದು ಮೋದಿ ಸರಕಾರ ಭಾವಿಸಿದೆಯೇ ಎಂಬ ಪ್ರಶ್ನೆಯೂ ಸಹಜವಾಗಿ ಎದ್ದಿದೆ.

ಹತ್ತು ದಿನಗಳ ನಂತರ ಎನ್‌ಡಿಟಿವಿಯಲ್ಲಿ ಪ್ರಕಟಗೊಂಡ ಮತ್ತೊಂದು ಸುದ್ದಿಯನ್ನು ನೋಡಿ:

ರೈತರ ಆದಾಯಗಳನ್ನು ದ್ವಿಗುಣಗೊಳಿಸುವ ಮಾತು ಪ್ರಧಾನಿಗಳಿಂದ ಈ ಅಚ್ಚೇ ದಿನ್‌ಗಳಲ್ಲಿ ಹಲವು ಬಾರಿ ಕೇಳಬಂದಿದೆ. ಆದರೆ ಡಿಸೆಂಬರ್ 18ರಂದು ಈ ಬಗ್ಗೆ ಸರಕಾರದ ಯೋಜನೆಗಳೇನಾದರೂ ಇವೆಯೇ ಒಂದು ಪ್ರಶ್ನೆಗೆ ಲಿಖಿತ ಉತ್ತರ "ಇಲ್ಲ ಮಹೋದಯರೇ..' ಎಂಬ ಪದಗಳಿಂದ ಆರಂಭವಾಗಿತ್ತು. ಡಿಸೆಂಬರ್ 19ರಂದು ಲೋಕಸಭಾ ವೆಬ್ ಸೈಟಿನಲ್ಲೂ ಹಾಗೆಯೇ ಇತ್ತು. ಆದರೆ ಆದರೆ ಎರಡು ದಿನಗಳ ನಂತರ ಈ ಎರಡು ಆರಂಭದ ಪದಗಳು ಮಾಯವಾಗಿದ್ದವು ಎಂದು ಎನ್‌ಡಿಟಿವಿ ವರದಿ ಮಾಡಿದೆ.

ರೈತರ ಸಾಲನ್ನಾದ ಪ್ರಶ್ನೆ ಮೂರು ರಾಜ್ಯಗಳಲ್ಲಿ ಬಿಜೆಪಿಯ ಸೋಲಿನ ಮುಖ್ಯ ಕಾರಣಗಳಲ್ಲಿ ಒಂದು ಹಲವು ವಿಶ್ಲೇಷಕರು ಹೇಳುತ್ತಿದ್ದಾರೆ.

ನಿಧಾನವಾಗಿ ನಾಶಗೊಳಿಸಲ್ಪಡುತ್ತಿರುವ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ



ಈಗ ಜಾರಿಯಲ್ಲಿರುವ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಪ್ರತಿಯೊಂದು ಗ್ರಾಮೀಣ ಕುಟುಂಬಕ್ಕೂ ಕನಿಷ್ಠ ನೂರು ದಿನಗಳ ಉದ್ಯೋಗ ಒದಗಿಸುವ ಹಕ್ಕುಗಳ ಮೇಲೆ ಆಧಾರಿತವಾದ ಮತ್ತು ಬೇಡಿಕೆಯ ಮೇಲೆ ಜಾರಿಯಾಗುವ ಕಾನೂನು. ಈ ಕಾಯ್ದೆಯಡಿಯಲ್ಲಿ, ನಿಗದಿಪಡಿಸಿದ ಕನಿಷ್ಠ ಕೂಲಿಗೆ ದುಡಿಯುವ ಇಚ್ಛೆಯುಳ್ಳ ಒಬ್ಬ ವ್ಯಕ್ತಿಯು ಉದ್ಯೋಗದ ಬೇಡಿಕೆ ಮಂಡಿಸಿದ ಹದಿನೈದು ದಿನಗಳೊಳಗೆ ಉದ್ಯೋಗ ಒದಗಿಸದಿದ್ದರೆ, ಕನಿಷ್ಠ ಕೂಲಿಯ ಅರ್ಧದಷ್ಟು ಹಣವನ್ನು ಆ ವ್ಯಕ್ತಿಗೆ ಪರಿಹಾರವಾಗಿ ಕೊಡಬೇಕಾಗುತ್ತದೆ. ಲಕ್ಷಾಂತರ ಮಂದಿ ಬಡ ಕೃಷಿ ಕೂಲಿಕಾರರಿಗೆ ಜೀವನಾಧಾರವಾಗಿ ಪರಿಣಮಿಸಿದ್ದ ಈ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ನಗರ ಪ್ರದೇಶದ ಬಡವರಿಗೂ ವಿಸ್ತರಿಸುವ ಬೇಡಿಕೆಯೂ ಬಂದಿದೆ. ಆದರೆ ಮೋದಿ ಸರಕಾರದ ನಾಲ್ಕೂವರೆ ವರ್ಷಗಳ ಆಳ್ವಿಕೆ ನಿಧಾನವಾದಿ ಇದರ ಕತ್ತು ಹಿಸುಕುತ್ತ ಬಂದಿದೆ. ಇದನ್ನು ಉಳಿಸಬೇಕಾದರೆ ಈಗ ಮಾಡಬಹುದಾದ ಅತ್ಯುತ್ತಮ ಕೆಲಸವೆಂದರೆ, ಮೋದಿ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸಿ, ಅದರ ಸ್ಥಾನದಲ್ಲಿ, ಹೆಚ್ಚು ಉದ್ಯೋಗ ಸೃಷ್ಟಿಸುವ ಮತ್ತು ಗ್ರಾಮೀಣ ಉದ್ಯೋಗ ಯೋಜನೆಯನ್ನು ಬಲಪಡಿಸುವ ಒಂದು ಬೇರೆಯ ಜನ-ಪರ ಸರ್ಕಾರವನ್ನು ಅಧಿಕಾರಕ್ಕೆ ತರುವುದು, ಎನ್ನುತ್ತಾರೆ

ಆರ್ಥಿಕ ತಜ್ಞ **ಸುಬೋಧ್ ವರ್ಮ**. ಭಾವಾನುವಾದ: ಕೆ.ಎಂ.ನಾಗರಾಜ್

ಈ ವರ್ಷದ ಎಪ್ರಿಲ್ ಮತ್ತು ಡಿಸೆಂಬರ್ ನಡುವೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೆಲಸ ಕೇಳಿದ ಸುಮಾರು ಒಂದು ಕೋಟಿ ಇಪ್ಪತ್ತೆಂಟು ಲಕ್ಷ ಮಂದಿ ಗ್ರಾಮೀಣ ನಿರುದ್ಯೋಗಿಗಳಿಗೆ ಕೆಲಸ ನಿರಾಕರಿಸಲಾಗಿದೆ ಎಂಬ ನಡುಕ ಹುಟ್ಟಿಸುವ ಅಂಶ ಬಹಳ ಮಂದಿಯ ಗಮನಕ್ಕೆ ಬಂದಿಲ್ಲ. ಆರಂಭದಿಂದಲೂ, ಈ ಯೋಜನೆಯಡಿಯಲ್ಲಿ ಕೆಲಸ ಕೇಳಿದ ಸಾಕಷ್ಟು ಮಂದಿಗೆ ಕೆಲಸ ನಿರಾಕರಿಸಲಾಗಿದೆ. ಆದರೆ, ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ಈ ಯೋಜನೆಯಡಿಯಲ್ಲಿ ಗಾಬರಿಯಾಗುವಷ್ಟು ಪ್ರಮಾಣದಲ್ಲಿ ಕೆಲಸ ನಿರಾಕರಿಸಲಾಗಿದೆ. ಹಣಕಾಸು ವರ್ಷ 2018–19 ಪೂರ್ಣಗೊಳ್ಳಲು ಇನ್ನೂ ಮೂರು ತಿಂಗಳು ಬಾಕಿ ಇರುವಾಗಲೇ ಈ ನಿರಾಕರಣೆಯ ಮಟ್ಟ ಒಂದು ದಾಖಲೆಯನ್ನೇ ನಿರ್ಮಿಸಿದೆ!

ಈ ಮಧ್ಯೆ, ಅನೇಕ ರಾಜ್ಯಗಳಲ್ಲಿ, ಕೂಲಿಯ ಕೆಲಸವೇ ಇಲ್ಲದ ಬಗ್ಗೆ, ಇದ್ದ ಕೆಲಸ ಮಾಡಿದರೂ ಕೂಲಿ ಕೊಡದ ಬಗ್ಗೆ ಮತ್ತು ಕೂಲಿಗಾರರ ಬ್ಯಾಂಕ್ ಖಾತೆಗಳನ್ನು ವ್ಯವಹರಿಸದಂತೆ ತಡೆ ಹಿಡಿದ ಘಟನೆಗಳಿಗೆ ಸಂಬಂಧಿಸಿ, ಕೂಲಿಕಾರರು ಪ್ರತಿಭಟಿಸಿದ ಬಗ್ಗೆ ಅನೇಕ ವರದಿಗಳು ಪ್ರಕಟವಾಗಿವೆ. ಲಕ್ಷಾಂತರ ಮಂದಿ ಬಡ ಕೃಷಿ ಕೂಲಿಕಾರರಿಗೆ ಜೀವನಾಧಾರವಾಗಿದ್ದ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಹಳ್ಳ ಹಿಡಿಯುತ್ತಿದೆ ಎಂಬ ಭಾವನೆ ದಟ್ಟವಾಗುತ್ತಿದೆ.

ಇಳಿಯುತ್ತಿರುವ ಕೃಷಿ ವರಮಾನಗಳು, ಕೃಷಿ ಕೂಲಿಕಾರರ ಕೂಲಿಯ ಸ್ಥಗಿತ, ಮಾಡಲು ಕೆಲಸವೇ ಇಲ್ಲದೆ ಕೂಲಿಕಾರರು ಮತ್ತು ಇತರರು ನಿರುದ್ಯೋಗಿಗಳಾಗುತ್ತಿರುವುದು ಮತ್ತು ಈ ಎಲ್ಲದರ ಪರಿಣಾಮವಾಗಿ ಮಾಡಿದ ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುವುದು ಅಥವಾ ಪರ ಊರುಗಳಿಗೆ ವಲಸೆ ಹೋಗುವ ಪರಿಸ್ಥಿತಿಗಳು ಗ್ರಾಮೀಣ ಭಾರತವು ಒಂದು ದಾರುಣ ನೋವಿನಲ್ಲಿ ನರಳುತ್ತಿರುವುದಕ್ಕೆ ಸಾಕ್ಷಿಯಾಗಿವೆ.

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಯಾಕೆ ಹಳ್ಳ ಹಿಡಿಯುತ್ತಿದೆ? ಗ್ರಾಮೀಣ ಭಾರತವು ದಾರುಣ ನೋವಿನಲ್ಲಿ ನರಳುತ್ತಿದೆ? ಈ ಪ್ರಶ್ನೆಗಳಿಗೆ ದೇಶದ ಉದ್ದಗಲಕ್ಕೂ ಜನ ಉತ್ತರ ಕೇಳುತ್ತಿದ್ದಾರೆ.

ಈ ಉದ್ಯೋಗ ಯೋಜನೆಗೆ ಸರ್ಕಾರ ನಿಗದಿಪಡಿಸಿದ ಹಣವನ್ನು ಸರ್ಕಾರವೇ ಸತತವಾಗಿ ಕಡಿತಮಾಡಿರುವುದು, ಅದನ್ನು ರಾಜ್ಯಗಳಿಗೆ ಬಿಡುಗಡೆಮಾಡುವಲ್ಲಿ ವಿಳಂಬ, ನಂತರ ಕೂಲಿ ವಿತರಣೆಯಲ್ಲಿ ವಿಳಂಬ, ತಂತ್ರಜ್ಞಾನಕ್ಕೆ ಸಂಬಂಧಿಸಿದ ತೊಡಕುಗಳು ಮತ್ತು ಕುಂದು ಕೊರತೆಗಳ ನಿವಾರಣೆಗೆ ಅವಕಾಶ ಕಲ್ಪಿಸದಿರುವುದು ಮುಂತಾದ ಕ್ರಮಗಳ ಮೂಲಕ ಮೋದಿ ಸರಕಾರವು ಇಡೀ ಯೋಜನೆಯನ್ನು ಚೂರು ಚೂರಾಗಿ ನಾಶಪಡಿಸುವ ಪ್ರಯತ್ನ ಮಾಡುತ್ತಿದೆ. ಈ ಬಗ್ಗೆ ದೇಶದ ಎಲ್ಲ ರಾಜ್ಯಗಳಿಂದಲೂ ಲಭ್ಯವಿರುವ ಸ್ಥಳ ಮಾಹಿತಿ ಮತ್ತು ಸರ್ಕಾರವೇ ಅಧಿಕೃತವಾಗಿ ಪ್ರಕಟಿಸಿರುವ ದತ್ತಾಂಶಗಳ ವಿಶ್ಲೇಷಣೆಯ ಮೂಲಕ ತಿಳಿಯುವುದೇನೆಂದರೆ, ಕೆಲಸ ಕೇಳಿದ ನಿರುದ್ಯೋಗಿಗಳಿಗೆ ಕೆಲಸ ನಿರಾಕರಣೆಯ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಪ್ರತಿ ವರ್ಷವೂ ಸರ್ಕಾರ ಬಿಡುಗಡೆ ಮಾಡಿದ್ದಕ್ಕಿಂತಲೂ ಹೆಚ್ಚಿನ ಹಣ ಖರ್ಚಾಗುತ್ತಿದೆ. ಕೂಲಿ ವಿತರಣೆಗೆ ನಿಗದಿತ 15 ದಿನಗಳ ಗರಿಷ್ಠ ಮಿತಿ ದಾಟಿದರೂ ನೂರಾರು ಕೋಟಿ ರೂಪಾಯಿಗಳ ಮೊತ್ತದ ಕೂಲಿ ವಿತರಣೆಯಾಗುತ್ತಿಲ್ಲ. ಕೂಲಿ ವಿತರಣೆಯಲ್ಲಿ ತಡವಾದರೆ ತಕ್ಕ ಪರಿಹಾರ ಒದಗಿಸುವ ನಿಯಮ ಪಾಲಿಸುತ್ತಿಲ್ಲ. ಇಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಹಣ ವರ್ಗಾವಣೆಯಲ್ಲಿ ಹೆಚ್ಚುತ್ತಿರುವ ತಂತ್ರಜ್ಞಾನ ಸಂಬಂಧಿತ ತೊಡಕುಗಳನ್ನು ಸರಿಪಡಿಸುವ ವ್ಯವಸ್ಥೆಯೇ ಇಲ್ಲ. ಇವೆಲ್ಲಕ್ಕೂ ಕಳಶವಿಟ್ಟಂತೆ ತಲೆ ಎತ್ತಿರುವ ಹೊಸ ರೀತಿಯ ಭ್ರಷ್ಟಾಚಾರವು ಜನ ಬೆವರು ಸುರಿಸಿ ಪಡೆಯುವ ದುಡಿಮೆಯ ಹಣವನ್ನು ನುಂಗುತ್ತಿದೆ. ಈ ಅಂಶಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಕೆಲವು ಕಾರಣಗಳು ಸ್ಪಷ್ಟವಾಗುತ್ತವೆ.

ಉದ್ಯೋಗಕ್ಕೆ ಬೇಡಿಕೆ ಏರುತ್ತಿದೆ, ಉದ್ಯೋಗ ಲಭ್ಯತೆ ಇಳಿಯುತ್ತಿದೆ

ಈ ಯೋಜನೆಯಡಿಯಲ್ಲಿ ಕೆಲಸ ಕೇಳುವವರ ಸಂಖ್ಯೆ ಪ್ರತಿ ವರ್ಷವೂ ಏರುತ್ತಲೇ ಇದೆ. ನಿರಾಕರಣೆಗೊಳಗಾದವರ ಸಂಖ್ಯೆಯೂ ಏರುತ್ತಲೇ ಇದೆ. 2013–14ರಲ್ಲಿ (ಯುಪಿಎ–2 ಸರ್ಕಾರದ ಕೊನೆಯ ವರ್ಷ) ಎಪ್ಪತ್ತೊಂಭತ್ತು ಲಕ್ಷ ಮಂದಿಗೆ ಕೆಲಸ ನಿರಾಕರಣೆಯಾಗಿದ್ದರೆ, ಈ ವರ್ಷದ (2018–19) ಎಪ್ರಿಲ್ ಮತ್ತು ಡಿಸೆಂಬರ್ ನಡುವೆ, ಸುಮಾರು ಒಂದು ಕೋಟಿ ಇಪ್ಪತ್ತೆಂಟು ಲಕ್ಷ ಮಂದಿ ಗ್ರಾಮೀಣ ನಿರುದ್ಯೋಗಿಗಳಿಗೆ ಕೆಲಸ ನಿರಾಕರಿಸಲಾಗಿದೆ. ಕೆಲಸ ಬೇಕೆಂದು ಅರ್ಜಿ ಹಾಕಿದವರ ಪೈಕಿ, 2013–14ರಲ್ಲಿ ಶೇ.10 ಮಂದಿಗೆ ಕೆಲಸ ನಿರಾಕರಿಸಿದ್ದರೆ, ಈ ವರ್ಷ ಶೇ.18ರಷ್ಟು ಭಾರೀ ದೊಡ್ಡ ಸಂಖ್ಯೆಯ ಮಂದಿಗೆ ಕೆಲಸ ನಿರಾಕರಿಸಲಾಗಿದೆ. ಇಲ್ಲಿ ತಿಳಿಸಿರುವ ಕೆಲಸ ಕೇಳಿದವರ ಸಂಖ್ಯೆಯು ಅಧಿಕೃತ ಪ್ರಕಟಣೆಯ ಪ್ರಕಾರವಾಗಿದೆ. ಈ ಸಂಖ್ಯೆಯು ಯಾವಾಗಲೂ ವಾಸ್ತವದಲ್ಲಿರುವುದಕ್ಕಿಂತಲೂ ಬಹಳ ಕಡಿಮೆಯೇ ಇರುತ್ತದೆ. ಏಕೆಂದರೆ, ಕೆಲಸ ನಿರಾಕರಣೆಯನ್ನು ಬಾಯಿ ಮಾತಿನಲ್ಲಿ ಅನೌಪಚಾರಿಕವಾಗಿ ತಿಳಿಸಲಾಗುತ್ತದೆ. ಮೇಲಾಗಿ, ಸತತವಾಗಿ ಕೆಲಸ ನಿರಾಕರಿಸುವ ಕಾರಣದಿಂದಾಗಿ ಬಹಳಷ್ಟು ಮಂದಿ ಕೆಲಸ ಕೇಳಲು ಹೋಗುವುದೇ ಇಲ್ಲ. ಅಧಿಕೃತ ದಾಖಲೆಗಳಲ್ಲಿ ಅರ್ಜಿಯ ಮೂಲಕ ಕೆಲಸ ಕೇಳಿದವರನ್ನಷ್ಟೇ ಪರಿಗಣಿಸಲಾಗುತ್ತದೆ. (ಕೋಷ್ಟಕ–1 ನೋಡಿ)

ಕೋಷ್ಟಕ–1: ಕೆಲಸ ನಿರಾಕರಣೆಯ ಅಂಕಿ ಅಂಶಗಳು				
ವರ್ಷ	ಕೇಳಿದವರು*	ನಿರಾಕರಣೆಯಾದವರು*	ಪಡೆದವರು*	ನಿರಾಕರಣೆಯಾದವರ %
2013–14	7.7	6.9	0.79	10
2014–15	6.7	5.8	0.96	14
2015–16	7.9	6.8	1.10	14
2016–17	8.5	7.2	1.23	15
2017–18	8.4	7.2	1.24	15
2018–19	7.2	5.9	1.29	18
(15.12.2018ರವರೆಗೆ)		* ಅಂಕಿಗಳು ಕೋಟಿಯಲ್ಲಿವೆ		

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಹಕ್ಕುಗಳ ಮೇಲೆ ಆಧಾರಿತವಾದ ಮತ್ತು ಬೇಡಿಕೆಯ ಮೇಲೆ ಜಾರಿಯಾಗುವ ಒಂದು ಕಾನೂನು ಎಂದು ಹೇಳಲಾಗುತ್ತಿದೆಯಾದರೂ, ಅದನ್ನು ಅನುಷ್ಠಾನಗೊಳಿಸುತ್ತಿರುವ ಶೈಲಿಯನ್ನು ಗಮನಿಸಿದರೆ, ಈ ಯೋಜನೆಯ ಖರ್ಚುಗಳ ಕಡಿತವನ್ನು ಮೊದಲೇ ನಿರ್ಧರಿಸಲಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

ಕೂಲಿಯೂ ಕಡಿಮೆ, ಅವಧಿಯೂ ಕಡಿಮೆ

ಈ ಯೋಜನೆಯಡಿಯಲ್ಲಿ ಕೆಲಸ ಒಂದೇ ಸಮನೆ ದೊರೆಯುವುದಿಲ್ಲ ಮತ್ತು ಅದು ನಿಶ್ಚಿತವೂ ಅಲ್ಲ. ಅಂದರೆ, ಕೆಲಸ ಸಿಗಬಹುದು; ಸಿಗದೆಯೂ ಇರಬಹುದು. ಇಂದು ಕೆಲಸ ಸಿಕ್ಕಿದರೆ, ಇನ್ನೊಮ್ಮೆ ಯಾವಾಗ ಸಿಗುತ್ತದೆ ಎಂದು ಹೇಳಲು ಬರುವುದಿಲ್ಲ. ಒಂದು ವೇಳೆ ಕೆಲಸ ಸಿಕ್ಕಿದರೆ ಅದಕ್ಕೆ ಕೊಡುವ ಕೂಲಿಯೂ ಕಡಿಮೆಯೇ. ಅಧಿಕೃತ ಅಂಕಿ ಅಂಶಗಳ ಪ್ರಕಾರ, ಒಂದು ದಿನದ ಸರಾಸರಿ ಕೂಲಿ 179.59 ರೂ. ಒಂದೊಂದು ರಾಜ್ಯವೂ ಒಂದೊಂದು ಕೂಲಿ ದರ ನಿಗದಿಪಡಿಸಿದೆ. ರಾಜಾಸ್ತಾನದಲ್ಲಿ 141.65 ರೂ, ತೆಲಂಗಾಣದಲ್ಲಿ 146 ರೂ, ಛತ್ತೀಸ್‌ಘಡದಲ್ಲಿ 166 ರೂ, ಮಧ್ಯಪ್ರದೇಶದಲ್ಲಿ 170.12 ರೂ ಕೂಲಿ ಇದೆ. ಇದಕ್ಕಿಂತಲೂ ತುಸು ಹೆಚ್ಚಿನ ಕೂಲಿ ಶ್ರೀಮಂತ ರಾಜ್ಯಗಳಲ್ಲಿದೆ. ಶ್ರೀಮಂತ ರಾಜ್ಯವೆಂದು ಕರೆಯುವ ಗುಜರಾತಿನಲ್ಲಿ (ಇಲ್ಲಿ ಬಿಜೆಪಿ ಆಡಳಿತವಿದೆ) ನಿಗದಿಯಾಗಿರುವ ಕೂಲಿ ದರ ಕೇವಲ 175.79 ರೂ.

ಮೋದಿಯವರ ಆಡಳಿತದಲ್ಲಿ, ಕುಟುಂಬಗಳಿಗೆ ದೊರೆಯುತ್ತಿದ್ದ ಕೆಲಸದ ದಿನಗಳ ಸರಾಸರಿ ಸಂಖ್ಯೆ ಇಳಿಕೆಯಾಗಿದೆ. ತಮ್ಮ ಅಧಿಕಾರದ ಮೊದಲನೆಯ ವರ್ಷದಲ್ಲೇ ಮೋದಿ ಬಹಿರಂಗವಾಗಿಯೇ ಈ ಉದ್ಯೋಗ ಯೋಜನೆಯ ಬಗ್ಗೆ ತಮ್ಮ ಅಸಹನೆ ಮತ್ತು ತಿರಸ್ಕಾರ ಭಾವನೆಯನ್ನು ವ್ಯಕ್ತಪಡಿಸಿದರು. ಯೋಜನೆಗೆ ಅವರು ಒದಗಿಸುವ ಹಣ ಕಡಿತಗೊಳಿಸಿದ ಪರಿಣಾಮವಾಗಿ ದೊರೆಯುತ್ತಿದ್ದ ಕೆಲಸದ ದಿನಗಳ ಸರಾಸರಿ 40ಕ್ಕೆ ಇಳಿಯಿತು. ಈ ಬಗ್ಗೆ ದೇಶಾದ್ಯಂತ ನಡೆದ ಪ್ರತಿಭಟನೆಗಳಿಂದಾಗಿ ಹಿಮ್ಮೆಟ್ಟಿದ ಮೋದಿ ಮೊದಲಿನ ಪರಿಸ್ಥಿತಿ ಕಾಪಾಡಿಕೊಳ್ಳುವುದಾಗಿ ಒಪ್ಪಿದರು. ಹಾಗಾಗಿ, 2015–16 ರಲ್ಲಿ ದೊರೆತ ಕೆಲಸದ ದಿನಗಳ ಸರಾಸರಿ 49ಕ್ಕೆ ಏರಿತು. ಆದರೆ, ನಂತರದ ವರ್ಷಗಳಲ್ಲಿ ಈ ಉದ್ಯೋಗ ಯೋಜನೆಯ ಬಗ್ಗೆ ತೋರಿದ ನಿರ್ಲಕ್ಷ ಮತ್ತು ತಿರಸ್ಕಾರದಿಂದಾಗಿ ಪರಿಸ್ಥಿತಿ ಹದಗೆಟ್ಟಿದೆ. 2016–17 ರಲ್ಲಿ ದೊರೆತ ಕೆಲಸದ ದಿನಗಳ ಸರಾಸರಿ 46ಕ್ಕೂ, 2017–18 ರಲ್ಲಿ 45.76ಕ್ಕೂ ಮತ್ತು ಈ ವರ್ಷದಲ್ಲಿ ಮತ್ತೊಮ್ಮೆ 40ಕ್ಕೂ, ಕೆಲಸದ ದಿನಗಳ ಸರಾಸರಿ ಇಳಿದಿದೆ.

ಕೂಲಿ ದರ ಇಳಿಸಿದರೆ ಮತ್ತು ಅದರ ಜೊತೆಯಲ್ಲಿ ಕೆಲಸ ದೊರೆಯುವ ಸಾಧ್ಯತೆಯೂ ಕಡಿಮೆ ಇದ್ದರೆ, ಈ ಕೆಲಸಕ್ಕೆ ಎಡತಾಕುವುದೇ ಬೇಡ ಎಂದೆಣಿಸಿ, ಬಹಳ ಮಂದಿ ಅತ್ತ ಮುಖ ಹಾಕುವುದೇ ಇಲ್ಲ. ಜನರಲ್ಲಿರುವ ಈ ಭಾವನೆಯನ್ನೇ ಒಂದು ಅಸ್ತ್ರದಂತೆ ಬಳಕೆ ಮಾಡಿಕೊಳ್ಳುವ ಉದ್ದೇಶದಿಂದ, ಕೂಲಿ ದರ ಕೆಳ ಮಟ್ಟದಲ್ಲಿರುವಂತೆ ನೋಡಿಕೊಂಡು ಆ ಮೂಲಕ ಉದ್ಯೋಗಾಕಾಂಕ್ಷಿಗಳನ್ನು ನಿರುತ್ಸಾಹಗೊಳಿಸಬಹುದೆಂದು ಎಣಿಸಿರುವ ಸರ್ಕಾರವು ಈ ಯೋಜನೆಗೆ ಒದಗಿಸುವ ಹಣ ಕಡಿತಗೊಳಿಸುತ್ತಿದೆ. ಆದರೆ, ಇಷ್ಟು ಕಡಿಮೆ ಕೂಲಿ ಇದ್ದರೂ ಸಹ ಮತ್ತು ಕೆಲಸ ದೊರೆಯುವ ಸಾಧ್ಯತೆ ಕಡಿಮೆ ಇದ್ದರೂ ಸಹ, ಅಷ್ಟೊಂದು ಮಂದಿ ಈ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಉದ್ಯೋಗಕ್ಕಾಗಿ ಹಾತೊರೆಯುತ್ತಾರೆ ಎಂದರೆ ಅವರು ಅದೆಷ್ಟು ಹತಾಶರಾಗಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

ಕೂಲಿ ಕೊಡುವಲ್ಲಿ/ವಿತರಿಸುವಲ್ಲಿ ವಿಳಂಬ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯಡಿಯಲ್ಲಿ, ನಿಗದಿಪಡಿಸಿದ ಕನಿಷ್ಠ ಕೂಲಿಗೆ ದುಡಿಯುವ ಇಚ್ಛೆಯುಳ್ಳ ಒಬ್ಬ ವ್ಯಕ್ತಿಯು ಉದ್ಯೋಗದ ಬೇಡಿಕೆ ಮಂಡಿಸಿಸಿದ ಹದಿನೈದು ದಿನಗಳೊಳಗೆ ಉದ್ಯೋಗ ಒದಗಿಸದಿದ್ದರೆ, ಕನಿಷ್ಠ ಕೂಲಿಯ ಅರ್ಧದಷ್ಟು ಹಣವನ್ನು ಆ ವ್ಯಕ್ತಿಗೆ ಪರಿಹಾರವಾಗಿ ಕೊಡಬೇಕಾಗುತ್ತದೆ. ಪರಿಹಾರದ ಮಾತು ಒತ್ತಟ್ಟಿಗಿರಲಿ, ಮಾಡಿದ ಕೆಲಸಕ್ಕೂ ಕೂಲಿ ಕೊಡಲು ಸತಾಯಿಸುತ್ತಿದೆ, ಸರ್ಕಾರ. ಈಗಿರುವ ಕಾನೂನಿನ ಪ್ರಕಾರ, ಕೆಲಸ ಮಾಡಿದ ವ್ಯಕ್ತಿಗೆ ಹದಿನೈದು ದಿನಗಳ ಒಳಗೆ ಕೂಲಿ ಕೊಡಬೇಕಾಗುತ್ತದೆ. ಇದು ಈ ರೀತಿಯಲ್ಲಿ ನೆಡೆಯುತ್ತಿಲ್ಲ. ಕಾನೂನಿನ ಉಲ್ಲಂಘನೆಯಾಗುತ್ತಿದೆ. ಕಳೆದ ವರ್ಷದಲ್ಲಿ, ಹದಿನೈದು ದಿನಗಳ ನಂತರವೂ ಪಾವತಿಯಾಗದ ಕೂಲಿಯ ಮೊತ್ತವು, ಅಧಿಕೃತ ಅಂಕಿ ಅಂಶಗಳ ಪ್ರಕಾರವೇ ಸುಮಾರು 7,014 ಕೋಟಿ ರೂಗಳು. (ಸುಮಾರು 5.6 ಕೋಟಿ ವ್ಯಕ್ತಿ ವ್ಯವಹಾರಗಳು). ಈ ವರ್ಷದಲ್ಲೇ, ಈ ವರೆಗೆ, ಇಂತಹ ಬಾಕಿಯ ಮೊತ್ತ 2,469 ಕೋಟಿ ರೂ ಗಳಾಗುತ್ತದೆ. ಸಕಾಲದಲ್ಲಿ ಹಣ ಬಿಡುಗಡೆ ಮಾಡದಿರುವ ಮತ್ತು ಇತರ ಕಾರಣಗಳಿಂದ, ಈ ವರ್ಷದ ಕೊನೆಯಲ್ಲಿ ಈ ಬಾಕಿಯ ಮೊತ್ತವು ಇನ್ನೂ ತೀವ್ರವಾಗಿ ಏರಲಿದೆ. ಕೂಲಿ ವಿತರಣೆಯಲ್ಲಿ ಆಗುತ್ತಿರುವ ವಿಳಂಬಕ್ಕೆ ಎರಡು ಮುಖ್ಯ ಕಾರಣಗಳಿವೆ: ಅಧಿಕಾರದ ಉನ್ನತ ಮಟ್ಟದಲ್ಲಿರುವವರು ತಡವಾಗಿ ಹಣ ಬಿಡುಗಡೆ ಮಾಡುವುದು ಒಂದು ಕಾರಣವಾದರೆ, ಬಲವಂತವಾಗಿ ಹೇರಿರುವ ಇಲೆಕ್ಟ್ರಾನಿಕ್ ಮಾಧ್ಯಮದ ಮೂಲಕವೇ ಹಣ ವರ್ಗಾವಣೆಯ ವಿಧಾನದಲ್ಲಿ ಹೆಚ್ಚುತ್ತಿರುವ ತಂತ್ರಜ್ಞಾನ ಸಂಬಂಧಿತ ತೊಡಕುಗಳಿಂದಾಗುವ ವಿಳಂಬವು ಮತ್ತೊಂದು ಕಾರಣ. ಇವು ಮೊದಲ ಹಂತದಲ್ಲಿ ಆಗುವ ವಿಳಂಬಗಳು. ಹಣ ವರ್ಗಾವಣೆಯಾಗುವ ಆಜ್ಞೆಗೆ ಸಹಿ ಬೀಳುವ ಮೊದಲೇ ಇಂತಹ ವಿಳಂಬಗಳಿರುತ್ತವೆ ಮತ್ತು ಅವು ಪಾರದರ್ಶಕವಾಗಿವೆ. ಈ ವ್ಯವಸ್ಥೆಯಲ್ಲಿ, ತಡ ಆಗುವುದನ್ನು ಗಮನಿಸಿ, ತಡವಾದ ಸಂದರ್ಭದಲ್ಲಿ ಪರಿಹಾರ ಕೊಡುವ ಕ್ರಮವನ್ನು ಅಡಕಗೊಳಿಸಲಾಗಿದೆ. ಆದಾಗ್ಯೂ, ಈ ವಿಳಂಬಗಳು, ಕೂಲಿ ಪಡೆಯುವವರು ಒಳಗಾಗುವ ಅಗ್ನಿಪರೀಕ್ಷೆಯಲ್ಲಿ ಆರಂಭವಷ್ಟೇ. ದಾಖಲಾಗದ ಎರಡನೆಯ ಹಂತದ ವಿಳಂಬಗಳು, ಹಣ ವರ್ಗಾವಣೆ ಆಜ್ಞೆಗೆ ಸಹಿ ಬಿದ್ದ ನಂತರ, ಆದರೆ, ಬ್ಯಾಂಕ್ ಖಾತೆಗೆ ಜಮೆಯಾಗದಿದ್ದರೆ ಆರಂಭವಾಗುತ್ತವೆ ಮತ್ತು ಎರಡು ತಿಂಗಳುಗಳ ವರೆಗೆ ಸತಾಯಿಸುತ್ತವೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ರೂಪುಗೊಳ್ಳಲು ಶ್ರಮಿಸಿದವರಲ್ಲಿ ಒಬ್ಬರಾದ ಜೀನ್ ಡ್ರೇಜ್ (ಅಭಿವೃದ್ಧಿ ಅರ್ಥಶಾಸ್ತ್ರದ ಒಬ್ಬ ಭಾರತೀಯ ತಜ್ಞರು, ನಮ್ಮ ಅಮಾರ್ತ್ಯ ಸೇನ್‌ರವರಿಂದ ಪ್ರಭಾವಿತರಾದವರು ಮತ್ತು ಬೆಲ್ಜಿಯಂ ಮೂಲದವರು) ಹೇಳುವ ಪ್ರಕಾರ, ಕೂಲಿ ಪಾವತಿ ಮಾಡುವ

ಪುಟ 14 ಕ್ಕೆ

ನಿಧಾನವಾಗಿ ನಾಶಗೊಳಿಸಲ್ಪಡುತ್ತಿರುವ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ

ಪುಟ 13 ರಿಂದ

ವಿಧಾನದಲ್ಲಿ ಪದೇ ಪದೇ ಬದಲಾವಣೆ ಮಾಡುತ್ತಿರುವ ಅಂಶವು ಕೂಲಿ ವಿತರಣೆಯಲ್ಲಿ ಆಗುತ್ತಿರುವ ವಿಳಂಬಗಳಲ್ಲಿ ಒಂದು ಕಾರಣ. "ಮೊದಲು ನಗದು ರೂಪದಲ್ಲಿ ಕೂಲಿ ಹಣ ಕೊಡಲಾಗುತ್ತಿತ್ತು. ನಂತರ ಪೋಸ್ಟ್ ಆಫೀಸ್ ಮೂಲಕ, ನಂತರ ಬ್ಯಾಂಕ್ ಮೂಲಕ, ನಂತರ ಒಂದು ನಿರ್ದಿಷ್ಟ ಬ್ಯಾಂಕ್ ಮೂಲಕ, ನಂತರ ಇಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಹಣ ವರ್ಗಾವಣೆ ವಿಧಾನದ(NeFMS) ಹಲವು ಅವತಾರಗಳ ಮೂಲಕ, ಮತ್ತು ಈಗ ಆಧಾರ್ ಪೇಮೆಂಟ್ ಬ್ರಿಜ್ ಸಿಸ್ಟಂ(APBS) ಮೂಲಕ ಕೂಲಿ ಹಣ ಪಾವತಿಸಲಾಗುತ್ತಿದೆ. ಈ ಆವಿಷ್ಕಾರಗಳಲ್ಲಿ ಯಾವುದೊಂದೂ ವಿಧಾನದ ಮೂಲಕ, ಉದ್ಯೋಗ ಖಾತ್ರಿ ಕಾಯ್ದೆಯಲ್ಲಿ ಸೂಚಿಸಿರುವಂತೆ ಕೆಲಸ ಮಾಡಿದ ಹದಿನೈದು ದಿನಗಳೊಳಗೆ ಕೂಲಿ ಪಾವತಿ ಮಾಡಲು ಸಾಧ್ಯವಾಗಿಲ್ಲ" ಎನ್ನುತ್ತಾರೆ ಜೀನ್ ಡ್ರೀಜ್.

ಮಾಯವಾದ ಕೂಲಿ

ಒಬ್ಬ ಬಡ ಕೂಲಿಕಾರನು ಕೆಲವು ದಿನಗಳ ಕಾಲ ಈ ಯೋಜನೆಯಡಿಯಲ್ಲಿ ಕೆಲಸ ಮಾಡಿದ ನಂತರ ಅವನ ಕೂಲಿಯ ಹಣ ಬ್ಯಾಂಕ್ ಖಾತೆಗೆ ಜಮೆಯಾಗಿಲ್ಲ ಎಂದು ತಿಳಿದೊಡನೆಯೇ ಅವನಿಗೆ ದು:ಸ್ವಪ್ನದಂತಹ ಘೋರ ಅನುಭವ ಆರಂಭವಾಗುತ್ತದೆ. ಅಂದರೆ, ಕೂಲಿಯ ಹಣ ಮಾಯವಾಗುತ್ತದೆ. ಅದಕ್ಕೆ ಮೂರು ಕಾರಣಗಳಿವೆ: ಪಾವತಿ ತಿರಸ್ಕೃತಗೊಳ್ಳುವುದು, ಪಾವತಿ ಬೇರೆ ಖಾತೆಗೆ ಹೋಗುವುದು ಮತ್ತು ಪಾವತಿಯಾದ ಹಣವನ್ನು ಖಾತೆಯಿಂದ ಪಡೆಯಲಾರದ ಸ್ಥಿತಿ. ಕೆಲಸ ಮಾಡಿದ ನಂತರ ಒಬ್ಬ ಕೂಲಿಕಾರನ ಕೂಲಿಯ ಪಾವತಿ ಏಕೆ ತಿರಸ್ಕೃತವಾಯಿತು ಎಂಬುದಕ್ಕೆ (ಅಂದರೆ, ಹಣ ಅವನ ಬ್ಯಾಂಕ್ ಖಾತೆಗೆ ಏಕೆ ಜಮೆಯಾಗಿಲ್ಲ ಎಂಬುದಕ್ಕೆ) ನಂಬಲಾಗದ ಸುಮಾರು ಇನ್ನೂರು ಕಾರಣಗಳಿವೆ ಎಂದು ಮಂತ್ರಾಲಯದ ಒಬ್ಬ ಅಧಿಕಾರಿ ತಮಗೆ ಹೇಳಿದ್ದ ಎಂಬುದಾಗಿ ಜೀನ್ ಡ್ರೀಜ್? ಬರೆಯುತ್ತಾರೆ. "ಆಧಾರ್ ಸಕ್ರಿಯವಾಗಿಲ್ಲ" ಎಂಬಂತಹ ಕಾರಣಗಳನ್ನು ಅರ್ಥಮಾಡಿಕೊಳ್ಳಲು, ಆಧಾರ್ ಪ್ರಾಧಿಕಾರ ಮತ್ತು ಗ್ರಾಮೀಣ ಅಭಿವೃದ್ಧಿ ಮಂತ್ರಾಲಯದ ಅಧಿಕಾರಿಗಳಿಗೂ ಸಾಧ್ಯವಾಗಿಲ್ಲ. ಒಬ್ಬ ಕೂಲಿಕಾರನ ಕೂಲಿಯ ಹಣ ಒಂದೊಮ್ಮೆ ಈ ಕಪ್ಪು ರಂಧ್ರದೊಳಗೆ ಹೋಯಿತು ಎಂದರೆ ಅಲ್ಲಿಗೆ ಕತೆ ಮುಗಿಯಿತು ಎಂದೇ ಅರ್ಥ. ಅಕಸ್ಮಾತ್, ಸಿಗುವ ಸಾಧ್ಯತೆ ಇದ್ದರೂ ಅದು ಕೆಲವು ತಿಂಗಳುಗಳ ನಂತರವೇ. 2017–18 ರಲ್ಲಿ "ಪಾವತಿ ತಿರಸ್ಕೃತ" ಕಾರಣದ ಮೇಲೆ, ಅಧಿಕೃತ ದಾಖಲೆಗಳ ಪ್ರಕಾರವೇ, 500 ಕೋಟಿ ರೂಪಾಯಿಗಳಷ್ಟು ಹಣವನ್ನು, ಬೆವರು ಸುರಿಸಿ ದುಡಿದ ಕೂಲಿಕಾರರಿಂದ ತಡೆಹಿಡಿಯಲಾಗಿದೆ.

ಕೂಲಿಕಾರನಿಗೆ ಏನೊಂದೂ ಗೊತ್ತಿರದ ಖಾತೆಗೋ ಅಥವಾ ಯಾರೋ ಒಬ್ಬ ವ್ಯಕ್ತಿಯ ಖಾತೆಗೋ ಕೂಲಿಯ ಹಣ ಜಮೆಯಾದಾಗ ಅದು ಬೇರೆ ಖಾತೆಗೆ ಹೋದ ಪಾವತಿಯಾಗುತ್ತದೆ. ಆಧಾರ್ ಪೇಮೆಂಟ್ ಬ್ರಿಜ್ ಸಿಸ್ಟಂ(APBS) ಪಾವತಿ ವ್ಯವಸ್ಥೆಯಲ್ಲಿ ಈ ತೊಡಕು ವ್ಯಾಪಕವಾಗಿದೆ. ಈ ವ್ಯವಸ್ಥೆಯಲ್ಲಿ, ಒಬ್ಬ ಕೂಲಿಕಾರನ ಕೂಲಿಯು ಅವನ ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗೆ ಸ್ವಯಂಚಾಲಿತವಾಗಿ ಜಮೆಯಾಗುತ್ತದೆ. ಆದರೆ, ಅವನ ಯಾವ ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆಯಾಗಿದೆ ಎಂಬುದು ಅವನಿಗೆ ತಿಳಿದಿರುವುದಿಲ್ಲ. ಕೂಲಿಯ ಹಣ ಕೆಲವೊಮ್ಮೆ ಯಾರೋ ಒಬ್ಬ ವ್ಯಕ್ತಿಯ ಖಾತೆಗೆ ಜಮೆಯಾಗಿರುತ್ತದೆ. ಅದು ಅವನ ಪಾಲಾಗುತ್ತದೆ. ಅಲ್ಲಿಗೆ ಅದು ಮುಗಿಯುತ್ತದೆ. ತಂತ್ರಜ್ಞಾನ ಸಂಬಂಧಿತವಾದ ಇಂತಹ ತೊಡಕುಗಳನ್ನು ನಿವಾರಿಸುವ ಮತ್ತು ಕೂಲಿ ಪಾವತಿ ಸಂಬಂಧಿತ ಇನ್ನಿತರ ಕುಂದು ಕೊರತೆಗಳನ್ನು ಸರಿಪಡಿಸುವ ವ್ಯವಸ್ಥೆಯೇ ಇಲ್ಲ.

ಕೂಲಿಯ ಹಣ ಮಾಯವಾಗುವ ಮೂರನೆಯ ರೀತಿಯಲ್ಲಿ ಕೂಲಿಕಾರನ ಬ್ಯಾಂಕ್ ಖಾತೆಗೆ ಜಮೆಯಾದ ಹಣವನ್ನು ಅವನು ಪಡೆಯಲಾಗದ ಸ್ಥಿತಿಯಲ್ಲಿರುತ್ತಾನೆ. ಇದು ಯಾಕೆ ಅಥವಾ ಯಾವಾಗ ಹೀಗೆ ಆಗುತ್ತದೆ ಎಂದರೆ, ಒಂದು ಬ್ಯಾಂಕ್ ಖಾತೆಯು ಬಹಳ ಸಮಯ ಬಳಕೆಯಾಗದಿದ್ದಾಗ, ಬ್ಯಾಂಕ್ ಅದನ್ನು ನಿಷ್ಕ್ರಿಯ ಖಾತೆ ಎಂದೋ ಅಥವಾ ಸ್ಥಗಿತಗೊಂಡ ಖಾತೆ ಎಂದೋ ಘೋಷಿಸಿರುತ್ತದೆ. ಅಂತಹ ಖಾತೆಗೆ ಹಣ ಜಮೆಯಾದಾಗ, ಕೂಲಿಕಾರ ಅದನ್ನು ಪಡೆಯಲಾಗದ ಸ್ಥಿತಿಯಲ್ಲಿರುತ್ತಾನೆ.

ಕೂಲಿ ವಿತರಣೆಯಲ್ಲಿ ಆಗುವ ವಿಳಂಬ ಮತ್ತು ಕೂಲಿಯ ಹಣ ಮಾಯವಾಗುವ ಅಂಶಗಳು ಕೂಲಿಕಾರರಿಗೆ ಸಣ್ಣ ವಿಷಯಗಳಲ್ಲ. ಅದಾಗಲೇ ದಿವಾಳಿಯ ಅಂಚಿನಲ್ಲಿರುವ ಒಂದು ಕುಟುಂಬಕ್ಕೆ ಕೂಲಿಯ ಹಣ ಸಿಗದಿದ್ದಾಗ ಅವರು ಅನುಭವಿಸುವ ಯಾತನೆಯನ್ನು ಹೇಳಲಾಗದು. ಅಷ್ಟೇ ಅಲ್ಲ, ಈ ದು:ಸ್ವಪ್ನದಂತಹ ಘೋರ ಅನುಭವದಿಂದಾಗಿ ಅವರು ಇನ್ನೊಮ್ಮೆ ಈ ಯೋಜನೆಯಡಿಯಲ್ಲಿ ಕೆಲಸ ಕೇಳುವ ಸಾಹಸ ಮಾಡದಷ್ಟು ಮಟ್ಟಿಗೆ ನಿರುತ್ಸಾಹಗೊಳ್ಳುತ್ತಾರೆ.

ಹಣ ಒದಗಿಸುವಲ್ಲಿರುವ ಅವ್ಯವಸ್ಥೆ

ಈ ಉದ್ಯೋಗ ಯೋಜನೆಗೆ ನಿಗದಿಪಡಿಸಿದ ಹಣವನ್ನು ತೆರೆ ಮರೆಯಲ್ಲಿ ಸರ್ಕಾರವೇ ಸತತವಾಗಿ ಕಡಿತಮಾಡುವ ಮೂಲಕ ಇಡೀ ಯೋಜನೆಯನ್ನು ವ್ಯವಸ್ಥಿತವಾಗಿ ನಾಶಪಡಿಸುತ್ತಿದೆ. ಹಣ ಕಡಿತಮಾಡುತ್ತಿರುವ ಅಂಶವನ್ನು ಮುಚ್ಚಿಡುತ್ತಿರುವ ಸರ್ಕಾರವು ಹಣ ಹೆಚ್ಚಳದ ಘೋಷಣೆಗಳ ಬಗ್ಗೆ ಅಬ್ಬರದ ಪ್ರಚಾರ ಮಾಡುತ್ತಿದೆ. ಆದರೆ, ವರ್ಷದಲ್ಲಿ ಬಿಡುಗಡೆಯಾದ ಮತ್ತು ಖರ್ಚಾದ ಹಣದ ವಿವರಗಳನ್ನು ವಿಶ್ಲೇಷಿಸಿದಾಗ, ಪ್ರತಿ ವರ್ಷವೂ ಖರ್ಚಾದ ಹಣವೇ ಹೆಚ್ಚಿರುತ್ತದೆ. ಹಿಂದಿನ ವರ್ಷದ ಬಾಕಿ ಹಣವನ್ನು ಮುಂದಿನ ವರ್ಷದಲ್ಲಿ ಕೊಡಲಾಗುತ್ತಿದೆ. ಇಂತಹ ಕ್ರಮವು, ಸಲೀಸಾಗಿ ಕೂಲಿ ವಿತರಿಸಬೇಕಾದ ಮತ್ತು ಈಗಾಗಲೇ ಸಾಕಷ್ಟು ಹಾಳಾಗಿರುವ ಕಾರ್ಯವ್ಯವಸ್ಥೆಯನ್ನು ಸಂಪೂರ್ಣವಾಗಿ ಹಾಳುಗೆಡವುತ್ತದೆ.

ಈ ಯೋಜನೆಗೆ ಒದಗಿಸಿದ ಹಣ, ಖರ್ಚಾದ ಹಣ, ಬಾಕಿ ಉಳಿದ ಹಣದ ವಿವರಗಳನ್ನು ಅಧಿಕೃತ ಜಾಲತಾಣದಿಂದ ಹೆಕ್ಕಿ ತೆಗೆದು, ಅಗತ್ಯ ವಿವರಗಳನ್ನು ಈ ಕೋಷ್ಟಕ–2 ದಲ್ಲಿ ಕೊಡಲಾಗಿದೆ.

ಕೋಷ್ಟಕ–2

ವರ್ಷ	ಬಿಡುಗಡೆಯಾದ ಹಣ*	ಖರ್ಚಾದ ಹಣ*	ಬಾಕಿ ಉಳಿದ ಕೂಲಿ*	ಒಟ್ಟು ಖರ್ಚು*	ಉಳಿಕೆ*
2014–15	36033	36765	730	37495	–1462
2015–16	39687	43875	550	44426	–4739
2016–17	52004	58066	1068	59135	–7130
2017–18	61426	63670	1906	65576	–4150
2018–19	54781	49377	5151	54528	253

* ಕೋಟಿ ರೂಪಾಯಿಗಳು

ಪ್ರತಿ ವರ್ಷವೂ ಬಿಡುಗಡೆಯಾದ ಹಣಕ್ಕಿಂತ ಖರ್ಚ ಹೆಚ್ಚಿಗೆ ಇರುವ ಅಂಶವನ್ನು ಗಮನಿಸಬಹುದು. ಉದಾಹರಣೆಗೆ, ಇತ್ತೀಚಿನ ಮತ್ತು ಇಡೀ ವರ್ಷದ ಲೆಕ್ಕವನ್ನು ಬಿಂಬಿಸುವ ವರ್ಷ 2017–18 ರಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಿಗದಿಪಡಿಸಿದ ಒಟ್ಟು ಹಣ 61,426 ಕೋಟಿ ರೂಗಳು. ಆದರೆ, ವಾಸ್ತವಿಕವಾಗಿ 63,670 ಕೋಟಿ ರೂಗಳು ಖರ್ಚಾಗಿವೆ. ಅಂದರೆ, 2244 ಕೋಟಿ ರೂಗಳಷ್ಟು ಹೆಚ್ಚು ಹಣ ಖರ್ಚಾಗಿದೆ. ಅದರ ಜೊತೆಗೆ, ಹಿಂದಿನ ವರ್ಷದ ಬಾಕಿ 1,906 ಕೋಟಿ ರೂ ಸೇರಿಸಿದರೆ, ವರ್ಷದ ಒಟ್ಟು ಖರ್ಚು 65,576 ಕೋಟಿ ರೂಪಾಯಿಗಳಾಗಿದ್ದು, ವರ್ಷದ ಕೊರತೆಯ ಹಣ 4,150 ಕೋಟಿ ರೂಗಳಾಗುತ್ತದೆ. ಈ ಎಲ್ಲ ಜಟಿಲವಾದ ಲೆಕ್ಕಾಚಾರ ತೋರಿಸುವುದು ಏನೆಂದರೆ, ಅಗತ್ಯಕ್ಕಿಂತ ಕಡಿಮೆ ಹಣದಲ್ಲಿ ಯೋಜನೆ ಸಾಗುತ್ತಿದೆ. ಹಾಗಾಗಿ, ಈ ಯೋಜನೆಯ ಉಳಿವು ಒಂದೇ ಒಂದು ಅಂಶದ ಮೇಲೆ ನಿಂತಿದೆ. ಉದ್ಯೋಗದ ಬೇಡಿಕೆಯನ್ನು ಮಿತಿಗೊಳಿಸುವುದೇ ಆ ಅಂಶ. ಉದಾಹರಣೆಗೆ, ವರ್ಷ 2017–18ರಲ್ಲಿ ಕೆಲಸ ನಿರಾಕರಿಸಲಾದ ಒಂದು ಕೋಟಿ ಇಪ್ಪತ್ತನಾಲ್ಕು ಲಕ್ಷ ಮಂದಿಗೆ ಆ ವರ್ಷದ ಸರಾಸರಿ 44 ದಿನಗಳ ಉದ್ಯೋಗ ಒದಗಿಸಿದ್ದರೆ ಸುಮಾರು 13,000 ಕೋಟಿ ರೂ ಅಧಿಕವಾಗಿ ಖರ್ಚಾಗುತ್ತಿತ್ತು. ಅವರಿಗೆ ಉದ್ಯೋಗ ನಿರಾಕರಿಸಿದ್ದರಿಂದಾಗಿ ಸರ್ಕಾರ 13,000 ಕೋಟಿ ರೂ ಉಳಿಸಿಕೊಂಡಿತು ಮತ್ತು ಈ ಯೋಜನೆಯ ಕುಸಿತವನ್ನು ಮುಂದೂಡಿತು.

ಮಾಡಬೇಕಾಗಿರುವುದೇನು?

ತನ್ನ ವಿನಾಶಕಾರಿ ನೀತಿಗಳ ಮೂಲಕ ದೇಶದ ಅರ್ಥವ್ಯವಸ್ಥೆಯನ್ನು ತೀವ್ರ ಹಾನಿಗೆ ಒಳಪಡಿಸಿರುವದು ಮಾತ್ರವಲ್ಲದೆ, ನವ–ಉದಾರ ನೀತಿಗಳನ್ನು ಆಳವಾಗಿ ನಂಬಿರುವ ಮೋದಿ ಸರ್ಕಾರವು ಕಲ್ಯಾಣ ಕಾರ್ಯಕ್ರಮಗಳ ಮೇಲಿನ ಖರ್ಚುಗಳನ್ನು ಕಡಿತಗೊಳಿಸಿದೆ. ಸಾರ್ವಜನಿಕ ಸಂಪನ್ಮೂಲಗಳನ್ನು ಖಾಸಗೀಕರಿಸಿದೆ. ಅರ್ಥವ್ಯವಸ್ಥೆಯನ್ನು ವಿದೇಶಿ ಬಂಡವಾಳಕ್ಕೆ ತೆರೆದಿಟ್ಟಿದೆ. ಹಾಗಾಗಿ, ಉದ್ಯೋಗ ಸೃಷ್ಟಿ ಮತ್ತು ವೇತನ/ಕೂಲಿಗಳನ್ನು ಉತ್ತಮಪಡಿಸುವ ದೃಷ್ಟಿಯಿಂದ ಈ ಎಲ್ಲ ನೀತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಅವುಗಳನ್ನು ಸರಿ ಹೊಂದಿಸಿಕೊಳ್ಳುವ ಅಗತ್ಯವಿದೆ.

ನಿರುದ್ಯೋಗದಿಂದ ಉಂಟಾದ ಸಂಕಷ್ಟಗಳನ್ನು ಶಮನಗೊಳಿಸಲು ಗ್ರಾಮೀಣ ಉದ್ಯೋಗ ಯೋಜನೆಯನ್ನು ಕಲ್ಪಿಸಿಕೊಳ್ಳಲಾಗಿತ್ತು. ಉದ್ಯೋಗಗಳು ಆರೋಗ್ಯಕರವಾಗಿ ಬೆಳೆಯುವವರೆಗೂ ಸರ್ಕಾರವು ವೆಚ್ಚಗಳನ್ನು ಹೆಚ್ಚಿಸಲೇಬೇಕಾಗುತ್ತದೆ. ಏಕೆಂದರೆ, ಇಂತಹ ಉದ್ಯೋಗ ಯೋಜನೆಗಳ ಮೂಲಕ ಆರ್ಥಿಕ ಸಂಕಷ್ಟಗಳಿಂದ ನರಳುತ್ತಿರುವ ಜನತೆಗೆ ಸ್ವಲ್ಪವಾದರೂ ಪರಿಹಾರ ಸಿಗುತ್ತದೆ. ಗ್ರಾಮೀಣ ಉದ್ಯೋಗ ಯೋಜನೆಯು ಪರಿಣಾಮಕಾರಿಯಾಗಬೇಕು ಎಂದಾದರೆ, ಅದರಲ್ಲಿ ಕನಿಷ್ಠ ಪಕ್ಷ 80,000 ಕೋಟಿ ರೂಗಳನ್ನು ತೊಡಗಿಸಬೇಕಾಗುತ್ತದೆ ಎಂದು ಕೆಲವು ತಜ್ಞರು ಅಂದಾಜು ಮಾಡಿದ್ದಾರೆ. ಅಂತಹ ಒಂದು ಕಾರ್ಯಕ್ರಮವನ್ನು ಮೋದಿ ಸರ್ಕಾರ ಕೈಗೊಳ್ಳುತ್ತದೆ ಎಂದು ನಿರೀಕ್ಷಿಸುವುದು ಮೂರ್ಖತನದ ಮಾತಾಗುತ್ತದೆ. ಏಕೆಂದರೆ, ಅವರ ಸರ್ಕಾರದ ಅವಧಿ ಮುಗಿಯುವ ಹಂತದಲ್ಲಿದೆ ಮತ್ತು ಐದು ವರ್ಷಗಳ ಕಾಲವನ್ನು ಅವರ ಸರ್ಕಾರವು ಉದ್ಯೋಗ ಯೋಜನೆಯನ್ನು ಹಾಳುಗೆಡವುದರಲ್ಲಿ ಕಳೆದಿದೆ. ಆದ್ದರಿಂದ, ನಾವು ಈಗ ಮಾಡಬಹುದಾದ ಅತ್ಯುತ್ತಮ ಕೆಲಸವೆಂದರೆ, ಮೋದಿ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸಿ, ಅದರ ಸ್ಥಾನದಲ್ಲಿ, ಹೆಚ್ಚು ಉದ್ಯೋಗ ಸೃಷ್ಟಿಸುವ ಮತ್ತು ಗ್ರಾಮೀಣ ಉದ್ಯೋಗ ಯೋಜನೆಯನ್ನು ಬಲಪಡಿಸುವ ಒಂದು ಬೇರೆಯ ಜನ–ಪರ ಸರ್ಕಾರವನ್ನು ಅಧಿಕಾರಕ್ಕೆ ತರುವುದು.

ನೋಯ್ಡಾದಲ್ಲಿ ಸಾರ್ವಜನಿಕ ಪಾರ್ಕ್‌ಗಳಲ್ಲಿ ನಮಾಜ್ ನಿಷೇಧ–ಸಿಪಿಐ(ಎಂ) ಖಂಡನೆ

"ಟ್ರಾಫಿಕ್ ಜಾಂ ಮಾಡುವ ಕವಾಡಿಯಾಗಳಿಗೆ ಇಲ್ಲದ ಪ್ರತಿಬಂಧನೆ ಈಗೇಕೆ?"

ಸಾರ್ವಜನಿಕ ಸ್ಥಲಗಳಲ್ಲಿ ನಮಾಜ್‌ಗೆ ಅವಕಾಶ ನೀಡಬಾರದು ಎಂಬ ಉತ್ತರಪ್ರದೇಶ ಮುಖ್ಯಮಂತ್ರಿ ಘೋಷಣೆಯನ್ನು ನೋಯ್ಡ ಆಡಳಿತ ಜಾರಿಗೆ ತರುತ್ತಿದೆ. ಇದು ಭಾರತದ ಸಂವಿಧಾನ ನೀಡಿರುವ ತಮ್ಮ–ತಮ್ಮ ಧರ್ಮಾಚರಣೆಯನ್ನು ನಡೆಸುವ ಸ್ವಾತಂತ್ರ್ಯವನ್ನು ಅಲ್ಪಸಂಖ್ಯಾತ ಮುಸ್ಲಿಮರಿಗೆ ನಿರಾಕರಿಸುವ ಕ್ರಮ ಎಂದು ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಖಂಡಿಸಿದೆ.

ದಸರಾ ಅಥವ ನವರಾತ್ರಿ ಆಚರಣೆಗಳ ಮೇಲೆ ಇಂತಹ ನಿಷೇಧವಿಲ್ಲ–ಸಾರ್ವಜನಿಕ ಪಾರ್ಕುಗಳಲ್ಲಿ ಅವನ್ನು ಆಚರಿಸಲಾಗುತ್ತಿದೆ. ಪ್ರತಿ ವರ್ಷ ನಡೆಯುವ ಕಾವಡ್ ಯಾತ್ರೆಯಂತೂ ಒಂದು ವಾರಕ್ಕೂ ಹೆಚ್ಚು ಕಾಲ ಹಲವು ಸ್ಥಳಗಳಲ್ಲಿ ವಾಹನ ಸಂಚಾರ ನಡೆಯದಂತೆ ಸ್ಥಗಿತಗೊಳಿಸುತ್ತದೆ. ಆದಕ್ಕೆ ಪ್ರತಿಬಂಧಗಳೇನೂ ಇಲ್ಲ ಮಾತ್ರವಲ್ಲ, ಉತ್ತರಪ್ರದೇಶ, ಹರಿಯಾಣ ಮತ್ತು ದಿಲ್ಲಿಯ ಸರಕಾರಗಳು ವಿಶೇಷ ವ್ಯವಸ್ಥೆಗಳನ್ನೂ ಮಾಡಿಕೊಡುತ್ತಿವೆ.

ಅಂದರೆ ಈ ನಿಷೇಧದಲ್ಲಿ ಕೋಮುವಾದಿ ದನಿ ಎದ್ದು ಕಾಣುತ್ತದೆ. ಮಧ್ಯಾಹ್ನ ಊಟದ ಸಮಯದಲ್ಲಿ ತಮ್ಮ ಮುಸ್ಲಿಂ ನೌಕರರು ಸಾರ್ವಜನಿಕ ಸ್ಥಳಗಳಲ್ಲಿ ನಮಾಜ್‌ಗಳಲ್ಲಿ ಭಾಗವಹಿಸದಂತೆ ನಿರುತ್ತೇಜಿತಗೊಳಿಸಬೇಕು ಎಂದು ಕಂಪನಿಗಳಿಗೆ 'ಸಲಹಾ' ನಿರ್ದೇಶನ ನೀಡಿರುವುದು ನೋಯ್ಡಾ ಆಡಳಿತದ ಅಲ್ಪಸಂಖ್ಯಾತ–ವಿರೋಧಿ ಉದ್ದೇಶವನ್ನು ಎತ್ತಿ ತೋರುತ್ತದೆ ಎಂದು ಸಿಪಿಐ(ಎಂ) ಹೇಳಿದೆ.

ಇಂತಹ ದುರುದ್ದೇಶಪೂರಿತ, ಪಕ್ಷಪಾತಪೂರ್ಣ ಆದೇಶವನ್ನು ಒಪಪ್ಪು ಸಾಧ್ಯವಿಲ್ಲ, ಅದನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಆಗ್ರಹಿಸಿದೆ.

ಪೌರತ್ವ (ತಿದ್ದುಪಡಿ)ಮಸೂದೆಯನ್ನು ಹಿಂಪಡೆಯಲು ಆಗ್ರಹಿಸಿ ಅಸ್ಸಾಂ ಎಲ್‌ಡಿಎಂ ಮತಪ್ರದರ್ಶನ

ಅಸ್ಸಾಂನ 'ಲೆಫ್ಟ್ ಡೆಮಾಕ್ರಟಿಕ್ ಮಂಚ'ಸಿಪಿಐ(ಎಂ) ಮತ್ತು ಅಸ್ಸಾಂನ ಇತರ ಎಡ ಮತ್ತು ಪ್ರಜಾಪ್ರಭುತ್ವವಾದಿ ಜಾತ್ಯತೀತ ಪಕ್ಷಗಳ ರಂಗ. ಇದು ಡಿಸೆಂಬರ್ 28ರಂದು ನವದೆಹಲಿಯ ಜಂತರ್ ಮಂತರ್‌ನಲ್ಲಿ ಒಂದು ಪ್ರತಿಭಟನಾ ಮತಪ್ರದರ್ಶನವನ್ನು ಸಂಘಟಿಸಿತ್ತು. ಸಂಸತ್ತಿನಲ್ಲಿರುವ ಪೌರತ್ವ (ತಿದ್ದುಪಡಿ)ಮಸೂದೆ, 2016ನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು ಎಂದು ಈ ಮತಪ್ರದರ್ಶನದಲ್ಲಿ ಆಗ್ರಹಿಸಲಾಯಿತು. ಅಲ್ಲದೆ ರಾಷ್ಟ್ರೀಯ ಪೌರತ್ವ ನೋಂದಣಿಯನ್ನು ತಪ್ಪಿಲ್ಲದಂತೆ ಮೇಲ್ದರ್ಜೆಗೆ ಏರಿಸಬೇಕು ಎಂದೂ ಆಗ್ರಹಿಸಲಾಯಿತು. ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ, ಪೊಲಿಟ್‌ಬ್ಯುರೊ ಸದಸ್ಯರಾದ ಪ್ರಕಾಶ ಕಾರಟ್, ಹನ್ನನ್ ಮೊಲ್ಲ, ಅಸ್ಸಾಂ ಸಿಪಿಐ(ಎಂ) ಕಾರ್ಯದರ್ಶಿಗಳೂ, ಕೇಂದ್ರ ಸಮಿತಿ ಸದಸ್ಯರೂ ಆಗಿರುವ ದೇಬೆನ್ ಭಟ್ಟಾಚಾರ್ಯ, ಸುಪ್ರಕಾಶ್ ತಾಲುಕ್‌ದಾರ್ ಮತ್ತು ವಿವಿಧ ಸಂಘಟನೆಗಳ ಮುಖಂಡರು ಮಾತನಾಡಿದರು.





ಚೀನಾದ 'ಬೆಲ್ಟ್ ಅಂಡ್ ರೋಡ್' ಉದ್ದೇಶವೇನು?

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಆರ್ಥಿಕವಾಗಿ ಧೃಡತೆಯತ್ತ ದಾಪುಗಾಲು ಹಾಕುತ್ತಿರುವ ಚೀನದ ಒಟ್ಟಾರೆಯ ಬೆಳವಣಿಗೆಗಳ ಬಗ್ಗೆ ಅಮೇರಿಕಾಕ್ಕೆ ಕಿರಿಕಿರಿ ಉಂಟಾಗುತ್ತಿದೆ. 2013 ರಲ್ಲಿ ಚೀನಾವು, ಬೆಲ್ಟ್ ಮತ್ತು ರಸ್ತೆ ಉಪಕ್ರಮ (ಬಿ.ಆರ್.ಐ.) ವನ್ನು ಆರಂಭಿಸಿದ ನಂತರವಂತೂ, ಅದರ ಪ್ರಗತಿಯ ವೇಗ ಮತ್ತು ವಿಧಾನವು ಜಗತ್ತಿನ ಅಭಿವೃದ್ಧ ಹಾಗೂ ಅಭಿವೃದ್ಧಿಶೀಲ ದೇಶಗಳ ಮೇಲೆ ಅನೇಕ ರೀತಿಯ ಸಕಾರಾತ್ಮಕ ಪರಿಣಾಮಗಳನ್ನು ಬೀರುತ್ತಿರುವುದು ಅಮೆರಿಕಾದ ಅಸಹನೆ ಮತ್ತಷ್ಟು ಎಲ್ಲೆ ಮೀರುತ್ತಿದೆ. ಯುರೋಷಿಯಾ, ಆಫ್ರಿಕಾ, ಮತ್ತು ಆಗ್ನೇಯ ಏಷ್ಯಾದ ಕಡಲ ತೀರಗಳಲ್ಲಿ ಚೀನಾದ ಹೂಡಿಕೆಯ ಪರಿಕಲ್ಪನೆಯು ಜಗತ್ತಿನ ಇನ್ನಿತರೆ ರಾಷ್ಟಗಳನ್ನು ಬಿ.ಆರ್.ಐ ನತ್ತ ಸೆಳೆಯುವಲ್ಲಿ ಯಶಸ್ವಿಯಾಗುತ್ತಿರುವುದು ಅಮೆರಿಕದ ಕಿರಿಕಿರಿಗೆ ಕಾರಣವೆನ್ನಲಾಗಿದೆ. ಈ ಹಿನ್ನೆಲೆಯಲ್ಲಿ, ಇಂಡೋ–ಪೆಸಿಫಿಕ್ ಕಡಲ ಪ್ರದೇಶವು ಜಾಗತಿಕವಾಗಿ ಆರ್ಥಿಕ ಬೆಳವಣಿಗೆಯ ಗುರುತ್ವಾಕರ್ಷಣೆಯ ಕೇಂದ್ರವಾಗಿ ಹೊರಹೊಮ್ಮಿದೆ ಎಂದರೆ ತಪ್ಪಾಗಲಾರದು.

ಈ ದಿಸೆಯಲ್ಲಿ ಬೆಳೆಯುತ್ತಿರುವ ಚೀನಾ–ಯುಎಸ್ ಉದ್ವಿಗ್ನತೆಯ ಕಾರಣದಿಂದಾಗಿ, ಈ ವರ್ಷ 'ಪಾಪುವಾ ನ್ಯೂ ಗಿನಿಯ'ದಲ್ಲಿ ನಡೆದ 'ಏಷಿಯಾ ಪೆಸಿಫಿಕ್ ಆರ್ಥಿಕ ಸಹಕಾರ್' (ಎಪೆಕ್) ಸಮ್ಮೇಳನದಲ್ಲಿ ಯಾವುದೇ ರೀತಿಯ ಜಂಟಿ ಹೇಳಿಕೆ ಪ್ರಕಟಿಸಲು ಸಾಧ್ಯವಾಗಲಿಲ್ಲ. ಅಮೆರಿಕ ಮತ್ತು ಚೀನಾದ ಮದ್ಯೆ ವಾಣಿಜ್ಯ ಮತ್ತು ತಂತ್ರಜ್ಞಾನ ಕುರಿತಂತೆ ಸಮಸ್ಯೆಗಳನ್ನು ಹುಟ್ಟು ಹಾಕಿ, ಟ್ರಂಪ್ ನಿರಂತರವಾಗಿ ಒತ್ತಡ ಹೇರುತ್ತಿರುವುದೇ ಈ ಎರಡು ದೇಶಗಳ ನಡುವೆ ಉದ್ವಿಗ್ನತೆಗೆ ಮೂಲ ಕಾರಣಗಳೆಂದು ಭಾವಿಸಲಾಗಿದೆ.

ಆತಂಕಗೊಂಡಿರುವ ಟ್ರಂಪ್

ಇಂಡೋ–ಪೆಸಿಫಿಕ್ ಕಡಲ ಪ್ರದೇಶದ ಮೇಲೆ ತನ್ನ ಪ್ರಾಬಲ್ಯದ ಹಿಡಿತವನ್ನು ಉಳಿಸಿಕೊಳ್ಳಲು ಅಮೇರಿಕವು ತನ್ನ ಕಾರ್ಯವ್ಯೂಹದ ಕಾರ್ಯಸೂಚಿಯನ್ನು ಪಟ್ಟು ಬಿಡದೆ ಅನುಸರಿಸಿಕೊಂಡು ಬರುತ್ತಿದೆ. ಹಾಗೆಯೇ, ಈ ಪ್ರದೇಶದ ಸುತ್ತ ಹಬ್ಬುತ್ತಿರುವ ಚೀನಾದ ಆರ್ಥಿಕ ಸಾಮರ್ಥ್ಯದ ವೃದ್ಧಿಯ ಬಗ್ಗೆ, ತನ್ನ ಈಗಿರುವ ಪ್ರಾಬಲ್ಯದ ಹತೋಟಿಗೆ ಬಂದೊದಗುವ ಸಂಭವನೀಯ ಆಪತ್ತಿನ ಬಗ್ಗೆ ಆತಂಕ ಅದ್ಯಕ್ಷ ಟ್ರಂಪ್ ನ್ನು ಆವರಿಸಿದೆ. ಪರಿಣತರ ಪ್ರಕಾರ ಇದಕ್ಕೆ ಕಾರಣ, ಚೀನಾವು ಜಗತ್ತಿನ ವಿವಿಧ ಪ್ರದೇಶಗಳಲ್ಲಿ (ಪ್ರಮುಖವಾಗಿ ಸಮುದ್ರಯಾನದ ಕಡಲ ತೀರದಲ್ಲಿನ ಪ್ರದೇಶಗಳಲ್ಲಿ) ಬೆಲ್ಟ್–ರಸ್ತೆ ಉಪಕ್ರಮದಲ್ಲಿ ತನ್ನ ವಿಭಿನ್ನ ರೀತಿಯ ಹೂಡಿಕೆಗಳ ಮೂಲಕ ತನ್ನ ವಾಣಿಜ್ಯ ಮತ್ತು ವಹಿವಾಟನ್ನು ವಿಸ್ತಾರ ಮಾಡಿಕೊಳ್ಳುತ್ತಿರುವುದು.

ಚೀನಾ ಕಮ್ಯೂನಿಸ್ಟ್ ಪಕ್ಷ (ಸಿಪಿಸಿ) ವು, ಮಹಾಯುದ್ಧದ ನಂತರ ಈ ಕಡಲ ತಡಿ ಪ್ರದೇಶಗಳಲ್ಲಿ ಅಮೆರಿಕದ ಆರ್ಥಿಕ ಸಾಮರ್ಥ್ಯವನ್ನು ಸಡಿಲಗೊಳಿಸುವ ನಿಟ್ಟಿನಲ್ಲಿ ಟ್ರಿಲಿಯನ್ ಡಾಲರ್ ಹೂಡಿಕೆ ಮಾಡುವ ಮೂಲಕ ಕಾರ್ಯ ಪ್ರವೃತ್ತವಾಗಿದೆ ಎಂಬ ಭಯವನ್ನು ಹಲವು ಅಮೆರಿಕನ್ನರು ವ್ಯಕ್ತಪಡಿಸಿದ್ದಾರೆ. ಆದರೆ, ಮಹಾ ಯುದ್ದದ ನಂತರ ಅಮೆರಿಕದ ಸಂಪ್ರದಾಯವಾದಿಗಳೇ ತಮ್ಮ ದೇಶದ ಆರ್ಥಿಕ ಭದ್ರತೆಯನ್ನು ನಾಶಗೊಳಿಸುತ್ತಿದ್ದಾರೆ ಎಂಬುದು ಚೀನಾ ಕಮ್ಯೂನಿಸ್ಟ್‌ರ ಅಭಿಪ್ರಾಯವಾಗಿದೆ. ಉದಾಹರಣೆಗೆ, ಒಂದು ಕಡೆ, ಕಾಂಬೋಡಿಯಾ ದಲ್ಲಿನ 'ಕೊಹ್ ಕಾಂಗ್' ನಲ್ಲಿ ಚೀನಾವು 'ಆಳವಾದ–ನೀರಿನ ವಾಣಿಜ್ಯ ಬಂದರು' ನಿರ್ಮಿಸಲು ಹೂಡಿಕೆ ಮಾಡುತ್ತಿದ್ದರೆ, ಮತ್ತೊಂದೆಡೆ 'ಅಮೆರಿಕಾ–ಆಸ್ಟ್ರೇಲಿಯಾ' ಒಕ್ಕೂಟ ವು ಜಂಟಿಯಾಗಿ 'ಪಾಪುವಾ ನ್ಯೂ ಗಿನಿಯಾ'ದ ಮನುಸ್ ದ್ವೀಪದಲ್ಲಿ ನೌಕಾ ನೆಲೆಯನ್ನು ನಿರ್ಮಿಸುತ್ತಿವೆ. ಇದರ ಜೊತೆಗೆ, ಭಾರತ ಮತ್ತು ಜಪಾನ್ ದೇಶಗಳೆರಡೂ ಸಂಯೋಜಿತಗೊಂಡು ಅಮೆರಿಕಾದ ಯುದ್ದ ವ್ಯೂಹದ ಯೋಜನೆಯಲ್ಲಿ ಪಾಲ್ಗೊಂಡು ಜೂನಿಯರ್ ಪಾಲುದಾರರಾಗಿ, ಅಮೆರಿಕಾದ ಯುದ್ದದ ದಾಹಕ್ಕೆ ಸಹಕರಿಸುತ್ತಿರುವುದು.

ಇಂಡೋ–ಪೆಸಿಫಿಕ್ ಕಡಲ ಪ್ರದೇಶಗಳಲ್ಲಿಯೇ, ಅಮೆರಿಕಾ, ಆಸ್ಟ್ರೇಲಿಯಾ ಮತ್ತು ಜಪಾನ್ ದೇಶಗಳು ಒಂದಾಗಿ ಚೀನಾದ ಹೂಡಿಕೆಗೆ ಸರಿಹೊಂದಿಸುವ ಸಲುವಾಗಿಯೇ, ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ತ್ರಿಪಕ್ಷೀಯ ಹೂಡಿಕೆ ಉಪಕ್ರಮವನ್ನು ಆರಂಭಿಸಿರುವುದು ಒಂದು ಕಡೆ. ಮತ್ತೊಂದೆಡೆ, ಚೀನಿ ನೌಕಾಪಡೆ ಮತ್ತು ಸಾಲದ ಜೊತೆಗೆ ಚೀನ್ಲಾ ಅಭಿವೃದ್ಧಿಯ ವಿಧಾನವನ್ನು ವಿಶ್ವದ ಇತರೆ ಪ್ರದೇಶಗಳಿಗೆ ರಫ್ತು ಮಾಡುವ ಬಗ್ಗೆ ಅಮೆರಿಕಾಕ್ಕೆ ಹೆಚ್ಚು ಚಿಂತೆ ಉಂಟಾಗಿದೆ. ತಮ್ಮ ಮಹತ್ವಾಕಾಂಕ್ಷೆಯ ಯೋಜನೆಯನ್ನು ಜಾರಿಗೊಳಿಸಲು ಚೀನಿಯರು ಸರಿಯಾದ ಸಮಯಕ್ಕೆ ಕಾಯುತ್ತಿದ್ದಾರೆ.

ಚೀನಿಯರ ಬೆಲ್ಟ್ ಮತ್ತು ರಸ್ತೆ ಉಪಕ್ರಮದ ಪರಿಕಲ್ಪನೆಯು ಜಗತ್ತಿನಾದ್ಯಂತ, ಇತರೆ ದೇಶಗಳನ್ನು

ಬಿ.ಆರ್.ಐ. ಯೋಜನೆ ಪ್ರಾರಂಭವಾಗಿ ಕೇವಲ ಐದು ವರ್ಷಗಳಾಗಿವೆ. ಇನ್ನೂ ಇದರ ಫಲ ಬಯಸಿದಷ್ಟು ಸಿಕ್ಕಿಲ್ಲವೆನ್ನುವುದು ನಿಜ. ಆದರೆ, ಈ ಐದು ವರ್ಷಗಳ ಕಾಲ ವಿಶ್ವದ ದೊಡ್ಡ ವಿಶಾಲವಾದ ಪ್ರದೇಶಗಳಲ್ಲಿ ವ್ಯಾಪಕ ಹೂಡಿಕೆಗಳ ಫಲಾಫಲ'ಗಳ ಬಗ್ಗೆ ಯಾವುದೇ ತೀರ್ಪು ನೀಡಲು ಇದು ತುಂಬಾ ಕಡಿಮೆ ಸಮಯವಾಗಿದೆ. ಉದ್ಯಮ ತಜ್ಞರ ಪ್ರಕಾರ, ಬಿ.ಆರ್.ಐ ಒಂದು ಪ್ರಯಾಣ. ಇದೊಂದು ಕೇವಲ ಕೆಲವು ಮೂಲಸೌಕರ್ಯ ಯೋಜನಗಳ ಸರಣಿ ಅಲ್ಲ. ಎರಡನೆಯದಾಗಿ, ಇದು ವಿದೇಶಗಳಲ್ಲಿ ಕೇವಲ ಹೂಡಿಕೆ ಕಾರ್ಯಕ್ರಮ ಮಾತ್ರ ಸಹ ಅಲ್ಲ. ಏಷ್ಯಾ, ಯುರೋಪ್ ಮತ್ತು ಆಫ್ರಿಕಾ ದೇಶಗಳ ನಡುವಿನ ವಾಣಿಜ್ಯ ಸಂಪರ್ಕ ವನ್ನು ಸುಧಾರಿಸುವ ಹಾಗೂ ಹೆಚ್ಚಿಸುವುದು ಯೋಜನೆಯ ಮೂಲ ಉದ್ದೇಶವಾಗಿದೆ. ಈ ದೇಶಗಳ ನಡುವೆ ವ್ಯಾಪಾರ, ಅಭಿವೃದ್ಧಿ ಮತ್ತು ಸಮೃದ್ಧಿ ಯನ್ನು ಹೆಚ್ಚಿಸುವ "21 ನೇ ಶತಮಾನದ ಹೊಸ ಸಿಲ್ಕ್ ರಸ್ತೆ" ಇದಾಗಿದೆ.



ಅಭೂತಪೂರ್ವ ವೇಗದಲ್ಲಿ ಸೆಳೆಯುತ್ತಿದೆ. ಚೀನಿ ಕಂಪನಿಗಳು 20 ಕ್ಕಿಂತಲೂ ಹೆಚ್ಚು ದೇಶಗಳಲ್ಲಿ 50 ಕ್ಕೂಹೆಚ್ಚು ಆರ್ಥಿಕ ಸಹಕಾರ ವಲಯಗಳನ್ನು ಈಗಾಗಲೇ ಸ್ಥಾಪಿಸಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ಇದರಿಂದ 1.80 ಲಕ್ಷ ಉದ್ಯೋಗ ಗಳನ್ನು ಈಗಾಗಲೇ ಸೃಷ್ಟಿಸಿದೆ. ಹಾಗೆಯೇ, 1 ಬಿಲಿಯನ್ ಡಾಲರ್ ಗಿಂತ ಹೆಚ್ಚಿನ ಆದಾಯವನ್ನು ತೆರಿಗೆ ರೂಪದಲ್ಲಿ ಪಡೆಯುತ್ತಿದೆ. ಬಿ.ಆರ್.ಐ ಯೋಜನೆಯ ಅಡಿಯಲ್ಲಿ ಒಂದಾದ, ಚೀನಾ–ಪಾಕಿಸ್ತಾನ ಆರ್ಥಿಕ ಕಾರಿಡಾರ್ (ಸಿ.ಪಿ.ಇ.ಸಿ), ಚೀನಾದ ಪಶ್ಚಿಮ ಭಾಗದ ನಗರವಾದ ಕಾಶಗರ್ ನಿಂದ ಅರಬ್ಬಿ ಸಮುದ್ರದಿಂದ 2000 ಕಿ.ಲೋ ಮೀಟರ್ ದೂರದಲ್ಲಿರುವ ಗ್ವಾಡಾರ್ ನೊಂದಿಗೆ ಸಂಪರ್ಕ ಏರ್ಪಡಿಸುತ್ತದೆ. ಇದು ಚೀನಾ–ಸಿಂಗಪೂರ್ ಮತ್ತು ಮಲಕ್ಕಾ ಕಾಲುವೆ ಮೂಲಕ ಹಡಗಿನ ಪಯಣದ ಚೀನಾದ ಅವಲಂಬನೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಇದು ಪಾಕಿಸ್ತಾನದ ಮೂಲಭೂತ ಸೌಕರ್ಯ ಮತ್ತು ಕೈಗಾರಿಕಾ ಅಭಿವೃದ್ಧಿ, ದೂರಸಂಪರ್ಕ ಬೆಳವಣಿಗೆಯನ್ನು ಉತ್ತಮ ಗೊಳಿಸುತ್ತದೆ.

ಯೋಜನೆಯ ಮನ ಸೆಳೆಯುವ ಪ್ರಚಾರ

ಶ್ವೇತ ಭವನಕ್ಕೆ ಅಧ್ಯಕ್ಷ ಟ್ರಂಪ್ ಆಗಮಿಸಿದ ನಂತರ, ಅವರ 'ಅಮೆರಿಕಾ ಮೊದಲು' ಎಂಬ ತನ್ನ ಯಜಮಾನಿಕೆ ಅನುಷ್ಠಾನಕ್ಕೆ ಗಮನ ಹರಿಸಲಾಯಿತು. ಈ ಹಿನ್ನೆಲೆಯಲ್ಲಿ, ಚೀನಾವು ತನ್ನ ಮಹತ್ವಾಕಾಂಕ್ಷೆಯ ಯೋಜನೆಯಾದ ಬಿ.ಆರ್.ಐ ಯನ್ನು ವಿಸ್ತೃತವಾಗಿ ಪ್ರಚಾರ ಮಾಡಲು ಸಿದ್ದತೆ ನಡೆಸಿತು. ಇದಕ್ಕೆ ಜಪಾನನ್ ಟೈಮ್ಸ್ ಕೊಟ್ಟಿರುವ ಮೂರು ಉತ್ತಮ ಉದಾಹರಣೆಗಳು ಹೀಗಿವೆ. ಒಬ್ಬ ತಂದೆ ರಾತ್ರಿ ಮಲಗುವ ಮುನ್ನಾ, ತನ್ನ ಮಗಳಿಗೆ ಬಿ ಆರ್ ಐ



ಕುರಿತಂತೆ, ಈ ಯೋಜನೆಯ ಅಡಿಯಲ್ಲಿ ರಸ್ತೆಗಳ ಮೂಲಕ ಸರಕುಗಳನ್ನು ಹೇಗೆ ಸಾಗಿಸಲಾಗುವುದು ಎಂಬುದನ್ನು ನಕ್ಷೆಗಳು ಮತ್ತು ಲೇಗೋ ಬ್ಲಾಕುಗಳ ಮೂಲಕ ಆಕರ್ಷಕ ವಾಗಿ ವಿವರಿಸುತ್ತಿರುವುದು ಒಂದು ವಿಡಿಯೋ. ಇನ್ನೊಂದು ವಿಡಿಯೋದಲ್ಲಿ, ಅದ್ಬುತವಾದ ಒಂದು ಸಂಗೀತದ ಕ್ಲಿಪ್ ಮೂಲಕ ವಿವಿಧ ರಾಷ್ಟ್ರೀಯತೆಯ ಮಕ್ಕಳು ತಮ್ಮ ಧ್ವನಿಯಲ್ಲಿ "ಜಗತ್ತಿನ ಎಲ್ಲರ ಜತೆ ಒಳ್ಳೆಯದನ್ನು ಹಂಚಿಕೊಳ್ಳಬಹುದು, ಹೊಸ ಭವಿಷ್ಯ ಈಗ ಬಂದಿದೆ, ಅದೇ ಬೆಲ್ಟ್ ಮತ್ತು ರಸ್ತೆ" ಎಂದು ಹಾಡುತ್ತಾರೆ. ಮೂರನೇಯದರಲ್ಲಿ ಬ್ರಿಟನ್ ನಿಂದ ಚೀನಾಗೆ 20 ದಿನಗಳ ರೈಲುಮಾರ್ಗದ ಪಯಣ ದಲ್ಲಿ ವಿಸ್ಕಿ ಬಾಟಲ್ ಮಾಡುವ ಪ್ರಯಾಣವನ್ನು ಕಾರ್ಟೂನ್ ಮೂಲಕ ವರ್ಣಿಸುವ ರೀತಿ ಅದ್ಬುತವಾಗಿದೆ. ಅದರ "ಬಾನ್ ವಾಯೇಜ್ ವಿಸ್ಕಿ" ಜನಪ್ರಿಯವಾಗಿದೆ. ಇವನ್ನು ಫೇಸ್ ಬುಕ್ ಟ್ವಟರ್ ಮತ್ತಿತರ ಸಾಮಾಜಿಕ ಮಾಧ್ಯಮಗಳಲ್ಲಿ ಅಗಾಧ ಪ್ರಮಾಣದಲ್ಲಿ ಹರಿಯ ಬಿಡಲಾಗುತ್ತಿದೆ.

ಬಿ.ಆರ್.ಐ ಮತ್ತು ಆಂಗ್ಲೋ ಅಮೆರಿಕನ್ನರು

2008 ರಲ್ಲಿ ಉಂಟಾದ ಜಾಗತಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಚೀನಿಯರು ತಮ್ಮ ವ್ಯಾಪಾರ–ವಹಿವಾಟಿನ ರೆಕ್ಕೆ–ಪುಕ್ಕಗಳನ್ನು ಜಗತ್ತಿಗೆ ಹರಡಲು ಮುಂದಾದಾಗ, ಜಗತ್ತನ್ನು ಸುಧಾರಿಸುವ ಯಾವುದೇ ಯಾವುದೇ ಉದ್ದೇಶವಿಲ್ಲದ ವ್ಯಾಪಾರವಿದು ಎಂದು ಅಮೆರಿಕನ್ನರು ಆರೋಪಿಸಿದ್ದರು. 2014 ರಲ್ಲಿ ಅಂದಿನ ಅಧ್ಯಕ್ಷ ಒಬಾಮ ಕೂಡ, ಎಲ್ಲವನ್ನು ಉಚಿತವಾಗಿ ಹೊಡೆದುಕೊಳ್ಳ ಬಯಸುತ್ತದೆ ಎಂದು ಆಪಾದಿಸಿ, ಬೀಜಿಂಗ್ ತನ್ನ ವಾಣಿಜ್ಯ ಜವಾಬ್ದಾರಿಗಳನ್ನು ಸ್ವೀಕರಿಸುವುದಿಲ್ಲ ಎಂಬ ಕಠೋರ ಆರೋಪವನ್ನು ಮಾಡಿದ್ದರು. ತದನಂತರದ ಕಾಲ ಘಟ್ಟದಲ್ಲಿ, ಬೀಜಿಂಗ್ ಬಿ.ಆರ್.ಐ ಮೂಲಕ ಬಂಡವಾಳ ಹೂಡಿಕೆಯ ಜವಾಬ್ದಾರಿಯನ್ನು ಸ್ವೀಕರಿಸಿ ಅಭಿವೃದ್ಧಿ ನಿಧಿಯನ್ನು ಕಂಡುಕೊಂಡಿರುವಾಗ ಬೇರೆ ಆಪಾದನೆಗಳನ್ನು ಮಾಡುತ್ತಿದೆ. ಇದನ್ನು ಪಾಶ್ಚಿಮಾತ್ಯ ಮಾದ್ಯಮಗಳು ಚೀನಿಯರ 'ಸಾಮ್ರಾಜ್ಯಶಾಹಿ ವಿನ್ಯಾಸ'ಗಳು, "ವಸಹಾತು ಮತ್ತು ಸಾಲದ ಬಲೆ" ಎಂಬಿತ್ಯಾದಿ ಆರೋಪಗಳನ್ನು ಇದೀಗ ಹೆಣೆದಿದ್ದಾರೆ. ಇವನ್ನು ಜಾಗತಿಕ ವಿಸ್ತಾರ ಸಾಧಿಸಲು ಬಳಸಿದ ಅಮೆರಿಕನ್ನರು ವ'ುಾಡು'ುತ್ತಿರ'ುವ'ುದ'ು ಹಾಸ್ಯಾಸ್ಪದವಾಗಿದೆ.

ಬಿ.ಆರ್.ಐ ಯೋಜನೆಯಲ್ಲಿ ಚೀನಿಯರ ಹೂಡಿಕೆಗಳು, ಯಾವುದೇ ಆರ್ಥಿಕ ಅಥವಾ ವ್ಯವಹಾರ ತರ್ಕದ ಭಾಗವಾಗಿ ಬಂದಿಲ್ಲ, ಬಿ.ಆರ್.ಐ ಯೋಜನೆ ಚೀನಿ ಅಧ್ಯಕ್ಷ ಜಿಂಪಿಂಗ್ ರವರ ವೈಯಕ್ತಿಕ ಮಹತ್ವಾಕಾಂಕ್ಷೆಯ ಒಂದು ಉಪ–ಉತ್ಪನ್ನ ಎಂಬ ಆರೋಪವನ್ನು ಮಾಡಲಾಗಿದೆ. ಸಿಪಿಸಿ ಯು "ಸಾಮೂಹಿಕ ನಾಯಕತ್ವದ ತತ್ವಗಳ ಆಧಾರದ" ಮೇಲೆ ನಿಂತಿರುತ್ತದೆ. ಮಾತ್ರವಲ್ಲ ಚೀನೀ ಹಿತಾಸಕ್ತಿಗೆ ಅನುಗುಣವಾಗಿರದ್ದನ್ನು ಸಿಪಿಸಿ ಮತ್ತು ಚೀನಿ ಸರಕಾರ ಸ್ವೀಕರಿಸುವುದಿಲ್ಲ. 2017 ರ ಅಕ್ಟೋಬರ್ ನಲ್ಲಿ ನಡೆದ ಸಿಪಿಸಿ ಯ ಕಾಂಗ್ರೆಸ್ ನಲ್ಲಿ ಬಿ.ಆರ್.ಐ. ಯೋಜನೆಯನ್ನು ಅನುಮೋದನೆ ಮಾಡಲಾಗಿದೆ. ಆದ್ದರಿಂದ ಆಂಗ್ಲೊ ಅಮೆರಿಕನ್ನರ ಮಾದ್ಯಮಗಳ ಆರೋಪದಲ್ಲಿ ಯಾವುದೇ ಹುರುಳಿಲ್ಲ.

ಬಿ.ಆರ್.ಐ ಯೋಜನೆ ಪ್ರಾರಂಭವಾಗಿ ಕೇವಲ ಐದು ವರ್ಷಗಳಾಗಿವೆ. ಇನ್ನೂ ಇದರ ಫಲ ಬಯಸಿದಷ್ಟು ಸಿಕ್ಕಿಲ್ಲವೆನ್ನುವುದು ನಿಜ. ಆದರೆ, ಈ ಐದು ವರ್ಷಗಳ ಕಾಲ ವಿಶ್ವದ ದೊಡ್ಡ ವಿಶಾಲವಾದ ಪ್ರದೇಶಗಳಲ್ಲಿ ವ್ಯಾಪಕ ಹೂಡಿಕೆಗಳ ಫಲಾಫಲಗಳ ಬಗ್ಗೆ ಯಾವುದೇ ತೀರ್ಪು ನೀಡಲು ಇದು ತುಂಬಾ ಕಡಿಮೆ ಸಮಯವಾಗಿದೆ. ಉದ್ಯಮ ತಜ್ಞರ ಪ್ರಕಾರ, ಬಿ.ಆರ್.ಐ ಒಂದು ಪ್ರಯಾಣ. ಇದೊಂದು ಕೇವಲ ಕೆಲವು ಮೂಲಸೌಕರ್ಯ ಯೋಜನಗಳ ಸರಣಿ ಅಲ್ಲ. ಎರಡನೆಯದಾಗಿ, ಇದು ವಿದೇಶಗಳಲ್ಲಿ ಕೇವಲ ಹೂಡಿಕೆ ಕಾರ್ಯಕ್ರಮ ಮಾತ್ರ ಸಹ ಅಲ್ಲ. ಏಷ್ಯಾ, ಯುರೋಪ್ ಮತ್ತು ಆಫ್ರಿಕಾ ದೇಶಗಳ ನಡುವಿನ ವಾಣಿಜ್ಯ ಸಂಪರ್ಕ ವನ್ನು ಸುಧಾರಿಸುವ ಹಾಗೂ ಹೆಚ್ಚಿಸುವುದು ಯೋಜನೆಯ ಮೂಲ ಉದ್ದೇಶವಾಗಿದೆ. ಈ ದೇಶಗಳ ನಡುವೆ ವ್ಯಾಪಾರ, ಅಭಿವೃದ್ಧಿ ಮತ್ತು ಸಮೃದ್ಧಿ ಯನ್ನು ಹೆಚ್ಚಿಸುವ "21 ನೇ ಶತಮಾನದ ಹೊಸ ಸಿಲ್ಕ್ ರಸ್ತೆ" ಇದಾಗಿದೆ.

ಅಮೆರಿಕದ ಕೋಕಾ ಕೋಲಾ, ಗೂಗಲ್ ಅಥವಾ ಫೇಸ್ ಬುಕ್ ನಂತಹ ದೈತ್ಯ ಕಂಪನಿಗಳಂತೆ, ಚೀನಾದ ಬಹುರಾಷ್ಟ್ರೀಯ ಕಂಪನಿಗಳು ಕೂಡಾ, ಸ್ಥಳೀಯ ಪರಿಸರದೊಂದಿಗೆ ಬೆರೆತುಕೊಳ್ಳಲು ಚೀನಾ ಬಯಸುತ್ತಿದೆ. ತನ್ನ ಸಾಫ್ಟ್–ಪವರ್ ಅನ್ನು ನಿರ್ಮಿಸಲು ಎಷ್ಟೇ ದೊಡ್ಡ ಮೊತ್ತವನ್ನು ಖರ್ಚು ಮಾಡಿದರೂ, ಚೀನಾ ತನ್ನ ಉದ್ದೇಶ ಗಳನ್ನು ಸಾಧಿಸುವಲ್ಲಿ ಯಶಸ್ವಿಯಾಗಿಲ್ಲ. ಏಕೆಂದರೆ ಚೀನಿಯರ ಸಾಗರೋತ್ತರ ಹೂಡಿಕೆಗಳನ್ನು ವಿವಿಧ ದೇಶಗಳಲ್ಲಿ ಆಂಗ್ಲೋ ಅಮೇರಿಕನ್ನರು ಸ್ಥಾಪಿಸಿದ ಸುಸಂಘಟಿತ ಗಣ್ಯರ ಜಾಲಗಳು ಅದನ್ನು "ಅಪ್ರಯೋಜಕ" ಎಂದು ಪ್ರಚಾರ ಮಾಡುತ್ತಿವೆ.

ಪ್ರಸ್ತುತ, ಚೀನಾವು ತಮ್ಮನ್ನು ಪ್ರತಿಷ್ಟಾಪನೆ ಮಾಡಿಕೊಳ್ಳಲು ತಮ್ಮ ಆರ್ಥಿಕ ಯೋಗಕ್ಷೇಮದ ಮೇಲೆ ಮಾತ್ರ ಕೇಂದ್ರೀಕರಿಸುತ್ತಿದೆ. ಚೀನಿಯರು ಪ್ರಸ್ತುತ ಯಾವುದೇ ರಾಜಕೀಯ ಸಿದ್ಧಾಂತ ವನ್ನು ರಫ್ತು ಮಾಡಲು ಬಯಸುತ್ತಿಲ್ಲ. ಬದಲಿಗೆ ಆರ್ಥಿಕ ಮತ್ತು ಸಾಂಸ್ಕೃತಿಕ ಸಾಮಗ್ರಿಗಳಿಲ್ಲದೆ, ಬರೇ ಸಿದ್ಧಾಂತವನ್ನು ರಫ್ತು ಮಾಡುವುದು ಸರಿಯಲ್ಲ ಎಂಬ ತಮ್ಮ ಅನುಭವದಿಂದಾಗಿ, ಬಿ.ಆರ್.ಐ ಯೋಜನೆಯ ಮೂಲಕ ಜಗತ್ತಿಗೆ ಪಸರಿಸಲು ಮುಂದಾಗಿದೆ. ●

JANASHAKTHI KANNADA VARA PATRIKE DECEMBER 31, 2018 - JANUARY 6, 2019 Price: Rs. 10/- Date of Publication: 28 DECEMBER 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283


ಮೆರವಣಿಗೆ


ಬಹಿರಂಗ ಸಭೆಯಲ್ಲಿ ಸಿಂಧು


ಬಹಿರಂಗ ಸಭೆಯಲ್ಲಿ ವರಲಕ್ಷ್ಮೀ

ಗಂಗಾವತಿಯಲ್ಲಿ ಅಕ್ಷರದಾಸೋಹ ನೌಕರರ ಯಶಸ್ವಿ 4ನೇ ರಾಜ್ಯ ಸಮ್ಮೇಳನ

"ಕಂದಮ್ಮಗಳ ಬಿಸಿಯೂಟ ಕಸಿಯುತ್ತಿರುವ ಮೋದಿ ಸರ್ಕಾರ ತೊಲಗಲಿ"


ಬಹಿರಂಗ ಸಭೆಯ ಸಭಿಕರು

ಡಿಸೆಂಬರ್ 2018ರ 22 ರಿಂದ 24 ರವರೆಗೆ ಅಕ್ಷರದಾಸೋಹ ನೌಕರರ 4ನೇ ಕರ್ನಾಟಕ ರಾಜ್ಯ ಸಮ್ಮೇಳನವು ಗಂಗಾವತಿಯಲ್ಲಿ ಯಶಸ್ವಿಯಾಗಿ ನಡೆಯಿತು. ಸಮ್ಮೇಳನದ ಮೊದಲನೇಯ ದಿನ ರ‍್ಯಾಲಿ ಮತ್ತು ಬಹಿರಂಗ ಸಭೆ ನಡೆದಿದ್ದು ಸುಮಾರು 3000 ಕ್ಕೂ ಹೆಚ್ಚಿನ ನೌಕರರು ಭಾಗವಹಿಸಿದ್ದರು. ರ‍್ಯಾಲಿಯಲ್ಲಿ ನೌಕರರು ಕೆಂಪು ವಸ್ತ್ರಧಾರಿಗಳಾಗಿ ರಸ್ತೆಯುದ್ದಕ್ಕೂ ಘೋಷಣೆಗಳನ್ನು ಹಾಕಿ ಬಹಿರಂಗ ಸ್ಥಳಕ್ಕೆ ಬಂದು ಭಾಗವಹಿಸಿದ್ದರು.

'ಅಕ್ಷರದಾಸೋಹದ ಹಿಂದೆ ಒಂದು ಚಿಂತನೆಯಿದೆ'

ಅತಿಥಿಗಳಾಗಿ ಅಖಿಲ ಭಾರತ ಮುಖಂಡರಾದ ಕಾಂ. ಸಿಂಧು ದೇಶದ ಬಿಸಿಯೂಟ ನೌಕರರ ಪರಿಸ್ಥಿತಿ, ಮೋದಿ ಸರ್ಕಾರದ ಕಾರ್ಮಿಕ ವಿರೋಧ ನೀತಿಗಳ ಬಗ್ಗೆ ಮಾತನಾಡುತ್ತಾ, ಆರ್ಥಿಕ ಮಂತ್ರಿ ಜೇಟ್ಲಿಯವರಿಗೆ ಬಿಸಿ ಅಡುಗೆಯವರ ನೆನಪಾಗಿಲ್ಲ, 'ಹಂ ಭೂಲ್ ಗಯೆ' ಎಂದರು. ಮೋದಿ ಗುಣಗಾನ ಮಾಡುವವರಿಗೆ ಸಬ್ಸಿಡಿ ಮತ್ತು ತೆರಿಗೆ ವಿನಾಯಿತಿ ಕೊಡ್ತಾರೆ. ಹಾಗಾಗಿ ಈ ಸರ್ಕಾರ ಇನ್ನು ಒಂದು ವರ್ಷ ಮುಂದುವರಿದರೂ ದೇಶದ ತಾಯಂದಿರ ಮತ್ತು ಮಕ್ಕಳ ಹಕ್ಕು ಬೀದಿಪಾಲಾಗ್ತದೆ. ಹಸಿವಿನ ಕಂದಮ್ಮಗಳ ಕಲಿಕೆಯ ಅಭಿವೃದ್ಧಿಗೆ ಇರುವ ಬಿಸಿಯೂಟ ಕಸಿಯುತ್ತಿರುವ ಬಿಜೆಪಿ ಮೋದಿ ಸರ್ಕಾರ ತೊಲಗಲಿ. ಕಂದಮ್ಮಗಳ ಹಸಿವು ನೀಗಿಸಲು ಇರುವ ಬಿಸಿಯೂಟಕ್ಕೆ ಬಜೆಟ್ ಕಡಿತ ಮಾಡುವುದರ ವಿರುದ್ಧ ಜನವರಿ 8–9 ಮುಷ್ಕರ ಯಶಸ್ವಿ ಗೊಳಿಸೋಣ ಎಂದು ಕರೆ ಕೊಟ್ಟರು.

ಬೀದಿಯಲ್ಲಿ ಇಳಿದು ನಿರಂತರ ಚಳುವಳಿ ಮಾಡಿದರೆ ಆಗಿಲ್ಲ, ಯಾವ ಬೇಡಿಕೆಗಳಿಗೆ ಹೋರಾಡ್ತೇವೋ ಅವುಗಳ ಜಾರಿಗೆ ಸರ್ಕಾರ ನಡೆಸುವ ಶಾಸನ ಸಭೆಗಳ ಮೇಲೆ ಒತ್ತಡ ಇನ್ನಷ್ಟು ಬೀಳಬೇಕು. ದುಡಿಯುವ ಜನತೆಯನ್ನು ವಂಚಿಸಿ ಯಾವ ಸರ್ಕಾರವೂ ಹೆಚ್ಚು ದಿನ ಬದುಕಲು ಸಾಧ್ಯವಿಲ್ಲ. ಈ ಬಾರಿಯ ಜನವರಿ 8–9 ಸಾರ್ವತ್ರಿಕ ಮುಷ್ಕರ ಎಚ್ಚರಿಕೆಯ ಗಂಟೆಯಾಗಲಿ ಎಂದು ಮುಖ್ಯ ಅತಿಥಿಗಳಾದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಜಿವಿ ಶ್ರೀರಾಮರೆಡ್ಡಿ ಹೇಳಿದರು.

ಅಕ್ಷರದಾಸೋಹ ಎನ್ನುವುದರ ಹಿಂದೆ ಒಂದು ಚಿಂತನೆಯಿದೆ. ಸಮಾಜಕ್ಕೆ ಕಣ್ಬಿಡುವ ಮಕ್ಕಳ ಕನಸಿದೆ. ಅದನ್ನು ಕಸಿಯಲು ಯಾವುದೇ ಸರ್ಕಾರ ಹೊರಟರೂ ಅದಕ್ಕೆ ಖಂಡಿತ ಅಧಿಕಾರದಲ್ಲಿ ಉಳಿಗಾಲವಿಲ್ಲ. ಅಂಥ ಐಕ್ಯತೆಯ ಹೋರಾಟಕ್ಕೆ ಬಿಸಿಅಡುಗೆಯವರು ಜನವರಿ 8–9 ಎರಡು ದಿನ ಬಿಸಿ ಅಡುಗೆ ಬಂದ್ ಮಾಡಿ ಮುಷ್ಕರಕ್ಕೆ ಸಜ್ಜಾಗಿದ್ದಾರೆ ಎಂದು ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿದ್ದ ಎಸ್.ವರಲಕ್ಷ್ಮೀ ಹೇಳಿದರು

ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ಗೀತಾ, ಸಿಐಟಿಯು ರಾಜ್ಯಉಪಾಧ್ಯಕ್ಷರಾದ ಆರ್.ಎಸ್.ಬಸವರಾಜ, ಕೊಪ್ಪಳ ಜಿಲ್ಲಾ ಸಿಐಟಿಯು ಅಧ್ಯಕ್ಷರಾದ ನಿರೂಪಾದಿ, ದುಡಿಯುವ ಮಹಿಳೆಯರ ಸಂಘಟನೆಯ ರಾಜ್ಯ ಸಂಚಾಲಕರಾದ ಹೆಚ್.ಎಸ್.ಸುನಂದ, ಕೊಪ್ಪಳ ಜಿಲ್ಲಾ ಸಿಐಟಿಯು ಕಾರ್ಯದರ್ಶಿಯಾದ ಕಾಶಿಂ ಸರದಾರ, ರಾಜ್ಯ ಸಿಐಟಿಯು ಉಪಾಧ್ಯಕ್ಷರಾದ ಯಮುನಾ ಗಾಂವ್ಕರ ಹಾಗೂ ರಾಜ್ಯ ಪದಾಧಿಕಾರಿಗಳು ಭಾಗವಹಿಸಿದ್ದರು. ಪ್ರಾಸ್ತಾವಿಕ ಭಾಷಣವನ್ನು ರಾಜ್ಯ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತ ಮಾಡಿದರು.

ಧ್ವಜಾರೋಹಣವನ್ನು ಸಂಘಟನೆಯ ರಾಜ್ಯಧ್ಯಕ್ಷರಾದ ಕಾಂ. ಎಸ್. ವರಲಕ್ಷ್ಮೀ ನೇರವೇರಿಸಿದರು. ಸಂಜೆ 5.30 ಕ್ಕೆ ಪ್ರತಿನಿಧಿ ಅಧಿವೇಶನವು ಪ್ರಾರಂಭವಾಯಿತು. ಬಿಸಿಯೂಟದ ಮಹಿಳೆಯರು ಬೇಡಿಕೆ ಹೊತ್ತು ದೆಹಲಿಗೆ ದೌಡಾಯಿಸಿದರೆ ಕೇಂದ್ರ ಸರ್ಕಾರ ನಡೆಸುವವರ ಧೋರಣೆ ನಮ್ಮ ವಿರುದ್ಧ ದಿಕ್ಕಿನಲ್ಲಿದೆ. ಮಕ್ಕಳ ತಾಯಂದಿರ ಅನ್ನ ಉಳಿಸುವ ಮತ್ತು ಕೂಲಿ ಹೆಚ್ಚಳ ಮಾಡುವ ಬದಲು ದೊಡ್ಡದೊಡ್ಡ ಶ್ರೀಮಂತ ಕಂಪನಿಗಳಿಗೆ ಮಧ್ಯಾಹ್ನ ಬಿಸಿಯೂಟ ಧಾರೆ ಎರೆಯುತ್ತಿದೆ. ಮತ್ತೊಂದೆಡೆ ಧಾರ್ಮಿಕ, ಜಾತಿ ಮತ್ತು ಧರ್ಮಾಂಧತೆ ಹಾಗೂ ಅಯೋಧ್ಯೆ ಶಬರಿಮಲೈ ಕಡೆಗೆ ಮತ್ತು ಮಹಿಳೆಯರ ಸಾಮಾಜಿಕ ಜೀವನವನ್ನು ತುಚ್ಛವಾಗಿ ಕಾಣಲು ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಹಣ ಕಡಿಮೆ ಮಾಡುತ್ತ ನಮ್ಮ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿದೆ. ಇದರ ವಿರುದ್ಧ ದೇಶವ್ಯಾಪಿ ನೋವು, ಸಿಟ್ಟು ಉಲ್ಬಣವಾಗುತ್ತಿದೆ. ಇಂಥ ಆಡಳಿತ ನೀತಿಯನ್ನು ಕಟ್ಟಿಹಾಕಲು, ಹಿಡಿದು ನಿಲ್ಲಿಸಲು, ಗುರಿಯತ್ತ ಸಾಗಲು ನಮ್ಮ ಪರವಾದ ನೀತಿ ತರಲು ಸಹಸ್ರಾರು ಜನರನ್ನು ಹೋರಾಟಕ್ಕೆ ಅಣಿನೆರೆಸಲು ದುಡಿಯುವ ಮಹಿಳೆಯರಾದ ನಾವು ಮುಂದಾಗುವುದು ಆದ್ಯತೆಯ ಜವಾಬ್ದಾರಿ ಎಂದು ಸಮ್ಮೇಳನಕ್ಕೆ ಮಾರ್ಗದರ್ಶನ ನೀಡಲು ಕೇಂದ್ರ ಸಮಿತಿ ನವದೆಹಲಿಯಿಂದ ಆಗಮಿಸಿದ ಸಿಐಟಿಯು ಕಾರ್ಯದರ್ಶಿ ಸಿಂಧುರವರು ಅಧಿವೇಶನದ ಉದ್ಘಾಟನೆ ಮಾಡುತ್ತಾ ಹೇಳಿದರು.

ಸಮ್ಮೇಳನದಲ್ಲಿ ಪ್ರತಿನಿಧಿಗಳಾಗಿ 361 ಜನ ಭಾಗವಹಿಸಿದ್ದರು. ಅಧ್ಯಕ್ಷೀಯ ಮಂಡಳಿಯಲ್ಲಿ ಎಸ್ ವರಲಕ್ಷ್ಮಿ, ಮಹಾದೇವಮ್ಮ ಮಂಡ್ಯ, ಸಿದ್ದಮ್ಮ ಬಾಗಲಕೋಟ, ರೇಖಾ ಗುಲ್ಬರ್ಗ, ಗಿರಿಜಾ ದಕ, ಮಹೇಶ ಗದಗ, ಪುಷ್ಪಾ ಹಾಸನ ಇದ್ದರು. ನಿರ್ಣಯ ಸಮಿತಿಯಲ್ಲಿ ಯಮುನಾ ಗಾಂವ್ಕರ್, ಮಂಜುಳಾ, ಟಿ ಲೀಲಾವತಿ, ಬೀದರ್ ರೇಖಾ ಇದ್ದರು. ಪರಿಚಯ ಪತ್ರ ಸಮಿತಿಯಲ್ಲಿ ಬಿಎಸ್ ನಾಗರತ್ನ, ಅಕ್ಕಮ್ಮ, ಗಂಗಾ ನಾಯ್ಕ ರಾಜಮ್ಮ, ನಡಾವಳಿ ಸಮಿತಿಯಲ್ಲಿ ಶಿಲ್ಪ, ಕಲಾ ಹಾಸನ, ಲಲಿತಾ ಹಿರೇಮಠ ಇವರುಗಳಿದ್ದರು.

ಪ್ರಧಾನ ಕಾರ್ಯದರ್ಶಿಗಳಾದ ಮಾಲಿನಿ ಮೇಸ್ತ ಕರಡು ವರದಿಯನ್ನು ಮಂಡಿಸಿದರು. ಕರಡುವರದಿಯ ಮೇಲೆ 49 ಜನ ಸಂಗಾತಿಗಳು ಭಾಗವಹಿಸಿ ಗುಂಪು ಚರ್ಚೆಯ ಮೇಲೆ ಮಾತನಾಡಿದರು. ಜನವರಿ 8–9ರ ದೇಶಾದ್ಯಂತ ಕಾರ್ಮಿಕರ ಮುಷ್ಕರದಲ್ಲಿ ಬಿಸಿ ಅಡುಗೆಯವರು ಯಾಕೆ ಪಾಲ್ಗೊಳ್ಳಬೇಕೆಂದು ವಿವರಿಸಿದ ನಿರ್ಣಯ ಸೇರಿದಂತೆ ಹಲವು ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.

ಸಮ್ಮೇಳನದ ಕೊನೆಯ ದಿನ ಸಮಾರೋಪ ಸಭೆ ನಡೆದಿದ್ದು ಈ ಸಭೆಯಲ್ಲಿ ಸಿಂಧು, ಎಸ್.ವರಲಕ್ಷ್ಮೀ, ನಿರೂಪಾದಿ, ಯಮುನಾ ಗಾಂವ್ಕರ್, ಮಾಲಿನಿ ಮೇಸ್ತ, ಬಿ.ಎಸ್.ನಾಗರತ್ನ, ಹೆಚ್.ಎಸ್. ಸುನಂದ, ಸಿದ್ದಮ್ಮ, ಲಕ್ಷ್ಮೀದೇವಿ, ಮಹಾದೇವಮ್ಮ ಹಾಗೂ ಇನ್ನಿತರ ಪದಾಧಿಕಾರಿಗಳು ಭಾಗವಹಿಸಿದ್ದರು.

ಸಮ್ಮೇಳನದಲ್ಲಿ ಪರಿಚಯ ಪತ್ರ ಪರಿಶೀಲನೆ ಮಾಡಿದಾಗ, ಡಿಗ್ರಿ, ಸ್ನಾತಕೋತ್ತರ, ಬಿಎಡ್ ಶಿಕ್ಷಣ ಪಡೆದವರು ಬಿಸಿಯೂಟ ಕೆಲಸ ಮಾಡುತ್ತಿರುವುದು ಕಂಡು ಬಂತು. 72% ಜನ ವಿವಿಧ ಪುಡಾರಿಗಳಿಂದ, ಎಸ್.ಡಿಎಂಸಿ ಹಾಗೂ ಶಿಕ್ಷಕರಿಂದ ವಿವಿಧ ರೀತಿಯ ಕಿರುಕುಳ ಅನುಭವಿಸುತ್ತಿದ್ದಾರೆ. ಶ್ರೀಲೇಖಾ ಉನ್ನತ ವಿದ್ಯಾಭ್ಯಾಸ ಹೊಂದಿದವರು, ಕಿರಿಯ ಸಂಗಾತಿ ತೀರ್ಥ ಮುಧೋಳ್, ದಾಸ್ ಭಂಡಾರಿ ಮತ್ತು ಆರ್. ಎಂ. ಮುಲ್ಲಾ ಅತ್ಯಂತ ಹಿರಿಯ ಸಂಗಾತಿಗಳು ಇಲ್ಲಿ ಭಾಗವಹಿಸಿದ್ದಾರೆ. ರೈತಾಪಿ, ಕೃಷಿ ಕೂಲಿ ಮತ್ತು ಕಾರ್ಮಿಕ ವರ್ಗದ ಹಿನ್ನೆಲೆಯವರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. 45 ವಯೋಮಾನದೊಳಗೆ 61%, ಪ್ರತಿನಿಧಿಗಳಿದ್ದಾರೆ. 51% ರಷ್ಟು ಪ್ರತಿನಿಧಿಗಳು ಹತ್ತನೇ ತರಗತಿಗಿಂತ ಹೆಚ್ಚು ವಿದ್ಯಾಭ್ಯಾಸ ಪಡೆದವರಿದ್ದಾರೆ. ಕೆಲಸದ ಪ್ರದೇಶದಲ್ಲಿ ಕಿರುಕುಳ, ಸಾಮಜಿಕ ತಾರತಮ್ಯ ಅನೇಕ ಕಡೆ ಇದೆ.

"ಚಳುವಳಿಯೇ ನಾಯಕರನ್ನು ರೂಪಿಸುತ್ತದೆ. ಯಾರೂ ಸ್ವಯಂ ನಾಯಕರಾಗಲು ಸಾಧ್ಯವಿಲ್ಲ. ನಾವು ಪ್ರಜ್ಞಾವಂತರಾಗಿ ಸಂಘಟನೆ, ಶಿಕ್ಷಣ, ಹೋರಾಟ ಬಲಪಡಿಸಿಕೊಳ್ಳಬೇಕು. ಏಕೆಂದರೆ, ಬಿಸಿಅಡುಗೆಯವರು ಕೆಲವು ಪ್ಯೂನ್ ರಿಂದ ಪಿಎಂ ತನಕವೂ ಶೋಷಣೆಗೆ ಒಳಗಾಗಿದ್ದಾರೆ. ಇಂದು ಚುನಾವಣೆ ಬಂತೆಂದರೆ ಅದರಲ್ಲಿ ಬಿಸಿ ಅಡುಗೆಯವರ ಬಗ್ಗೆ ಒಂದು ವಾಕ್ಯವಾದರೂ ಭರವಸೆ ಆಶ್ವಾಸನೆ ವಾಗ್ದಾನ ನೀಡುವ ಪರಿಸ್ಥಿತಿ ಬಂದಿದೆ ಎಂದರೆ ಅದಕ್ಕೆ ಹದಿನೈದು ವರ್ಷದ ಕೆಂಬಾವುಟದ ಚಳುವಳಿಯೊಂದೇ ಕಾರಣ. ಮುಂದಿನ ಜನವರಿ ಮುಷ್ಕರ ದೇಶಕಟ್ಟುವವರ ಒಳಿತಿಗಾಗಿ ಯಶಸ್ವಿಯಾಗಿ ಮಾಡೋಣ" ಎಂದು ಸಿಐಟಿಯು ಕಾರ್ಯದರ್ಶಿ ಸಿಂಧುರವರು ಸಮಾರೋಪ ಭಾಷಣದಲ್ಲಿ ಹೇಳಿದರು. ಅಧ್ಯಕ್ಷೀಯ ಮಂಡಳಿಯ ಪರವಾಗಿ ಎಸ್. ವರಲಕ್ಷ್ಮಿ ಮಾತನಾಡಿದರು.

ನೂತನ ಸಮಿತಿ ಆಯ್ಕೆ ಆಗಿದ್ದು ಗೌರವಾಧ್ಯಕ್ಷರಾಗಿ ಎಸ್. ವರಲಕ್ಷ್ಮಿ,
ಅಧ್ಯಕ್ಷರಾಗಿ ಲಕ್ಷ್ಮೀದೇವಿ(ಗಂಗಾವತಿ),
ಪ್ರಧಾನ ಕಾರ್ಯದರ್ಶಿಯಾಗಿ ಕಾಂ. ಮಾಲಿನಿ ಮೇಸ್ತ,
ಖಜಾಂಚಿಯಾಗಿ ಕಾಂ. ಮಹಾದೇವಮ್ಮ ಆಯ್ಕೆಯಾಗಿದ್ದು
9 ಜನ ಉಪಾಧ್ಯಕ್ಷರಾಗಿ, 8 ಜನ ಸಹಕಾರ್ಯದರ್ಶಿಯಾಗಿ ಹಾಗೂ
2 ಸ್ಥಾನ ಖಾಲಿ ಇಡಲಾಗಿದ್ದು ಆಯ್ಕೆ ಮಾಡಲಾಗಿದೆ.
82 ಜನ ರಾಜ್ಯಸಮಿತಿ ಸದಸ್ಯರನ್ನು ಆಯ್ಕೆ ಮಾಡಲಾಗಿದೆ.


ವರದಿ ಮಂಡನೆ – ಮಾಲಿನಿ ಮೇಸ್ತ


ಸಮ್ಮೇಳನ ಪ್ರತಿನಿಧಿಗಳು


ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತ | ಅಧ್ಯಕ್ಷೆ ಲಕ್ಷ್ಮೀದೇವಿ | ಖಜಾಂಚಿ ಮಹಾದೇವಮ್ಮ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**